# ಆಚಾರವಿಲ್ಲದ ನಾಲಿಗೆ

ಆಚಾರವಿಲ್ಲದ ನಾಲಿಗೆ,
ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ.
ವಿಚಾರವಿಲ್ಲದೆ ಪರರ ದೂಶಿಪುದಕ್ಕೆ,
ಚಾಚಿಕೊಂಡಿರುವಂಥ ನಾಲಿಗೆ.

ಫ್ರಾತಃ ಕಾಲದೊಳ್ ಯೆದ್ದು ನಾಲಿಗೆ,
ಸಿರಿಪತಿಯೆನ್ನು ಬಾರದೆ ನಾಲಿಗೆ?
ಪತಿತಪಾವನ ನಮ್ಮ ರತಿಪತಿ ಜನಕನ,
ಸತತವು ನುಡಿಕಂಡ್ಯ ನಾಲಿಗೆ.

ಛಾಡೀ ಹೇಳಲಿ ಬೆಡ ನಾಲಿಗೆ,
ನಿನ್ನ ಬೆಡಿ ಕೊಂಬುವೆನು ನಾಲಿಗೆ.
ರೂಡೀಗೊಡಯ ಶ್ರಿರಾಮನ ನಾಮವ,
ಪಾಡುತ್ತಾ ಇರುಕಂಡ್ಯ ನಾಲಿಗೆ.

ಹರಿಯ ಸ್ಮರಣೆ ಮಾಡು ನಾಲಿಗೆ,
ನರಹರಿಯ ಭಜಿಸುಕಂಡ್ಯ ನಾಲಿಗೆ.
ವರದಪುರಂದರ ವಿಠ್ಠಲ ರಾಯನ,
ಚರಣ ಕಮಲ ನೆನೆ ನಾಲಿಗೆ.

## ಆದದ್ದೆಲ್ಲ ವೊಳಿತೆ ಆಯಿತು

ಆದದ್ದೆಲ್ಲ ವೊಳಿತೆ ಆಯಿತು,
ನಮ್ಮ ಶ್ರಿಧರನ ಸೆವೆಗೆ,
ಸಾಧನ ಸಂಪತ್ತಾಯಿತು.

ದಂಡಿಗೆ ಬೆತ್ತ ಹಿಡಿಯುವುದಕ್ಕೆ,
ಮಂಡೆಬಾಗಿಂ ಆಚುತಲಿದ್ದೆ;
ಹೆಂಡತಿ ಸಂತತಿ ಸಾವಿರವಾಗಲಿ,
ದಂಡಿಗೆ ಬೆತ್ತ ಹಿಡಿಸಿದಳ್ಳೈಯ್ಯ.

ಗೋಪಾಲ ಬುಟ್ಟಿ ಹಿಡಿಯುವುದಕ್ಕೆ,
ಭೂಪತಿಯೆಂದು ಗರುವಿಸುತಿದ್ದೆ;
ಆ ಪತ್ನೀಕುಲ ಸಾವಿರವಾಗಲಿ,
ಗೋಪಾಲ ಬುಟ್ಟಿ ಹಿಡಿಸಿದಲ್ಲೈಯ್ಯ.

ತುಳಸೀಮಾಲೇ ಹಾಕುವುದಕ್ಕೆ,
ಅರಸನೆಂದು ತಿರುಗುತಲಿದ್ದೆ;
ಸರಸಿಜಾಕ್ಷ ಪುರಂದರವಿಠ್ಠಲನು,
ತುಳಸಿಮಾಲೆ ಹಾಕಿಸಿದನು.

# ಆಡಹೋಗಲು ಬೇಡವು

ಆಡಹೋಗಲು ಬೇಡವು ರಂಗಯ್ಯಾ,
ಬೇಡಿಕೊಂಬೆನೋ ನಿನ್ನ ಕ್ರಿಷ್ಣೈಯ್ಯಾ.

ಗಾಡಿಗಾತಿಯರ ಕೊಂಡಾಡೀ ಕೆಡಲುಬೇಡ,
ಕಾಡುವರೋ ನಿನ್ನನು ಮುಕುಂದಾ.

ನೀರೊಳು ಮುಳುಗೆಂಬರೊ,
ಬೆನ್ನಿನ ಮೇಲೆ ಭಾರವ ಹೊರಿಸುವರೋ.
ಹೋರೆದಾಡೆಯ ಮುದ್ದಾಡಿಸೊಲಿಸುವರೋ,
ಪರುಳ ಹಾರ ಕೊರಳನೆಂಬರೋ.

ಹುಟ್ಟರೂಪನೆಂಬರೂ ಅಕ್ಕೈಯ್ಯಾ,
ಕೊಡಲಿಪಿಡಿದನೆಂಬರೋ.
ಕಡೆಗನ್ನ ರುದ್ರನ ವರವುಳ್ಳ,
ದಶಕಂಠನ ಕೊಂದಾನೆಂಬರೋ.

# ಆದಿಯಲಿ ಗಜಮುಖನ ಅರ್ಚಿಸಿ ಆರಂಭಿಸಲು

ಆದಿಯಲಿ ಗಜಮುಖನ ಅರ್ಚಿಸಿ ಆರಂಭಿಸಲು,
ಆವವಗೆ ಕಾರ್ಯತತಿಸಿದ್ಧಿ ಗೊಳಿಸಿ,
ಮೋದದಿಂ ಸಲಿಸುವ ಮನದಿಷ್ಟವ.

ಸಾಧುಜನರೆಲ್ಲ ಕೇಳೀ!
ಸಕಲ ಸುರರಿಂಗೆ ಮಾಧವನೆ ನೇಮಿಸಿಪ್ಪ ಏ ಅಧಿಕಾರವ.
ಆದರದಿಂದ ಅವರಾವರೊಳು ನಿಂದು ಕಾರ್ಯಗಳ,
ಭೇದಗೊಳಿಸದೇ ಮಾಲ್ಪ ಪುರಂದರವಿಠ್ಠಲ.

# ಆನಂದ ಮಯಗೆ ಚಿನ್ಮಯಗೆ

ಆನಂದ ಮಯಗೆ ಚಿನ್ಮಯಗೆ,
ಶ್ರಿಮನ್ನಾರಾಯಣಗೆ ಆರತಿ ಯೆತ್ತಿರೆ.

ವೇದವ ತಂದು ಬೆಟ್ಟವಪೊತ್ತು ಧರಣಿಯ,
ಸಾಧಿಸಿ ಕಂಭದಿ ಬಂದವಗೆ;
ಭೂದಾನವ ಬೇಡೀ ನ್ರಿಪರ ಸಂಘರಿಸಿದ,
ಆದಿಮೂರುತಿಗೆ ಆರತಿ ಯೆತ್ತಿರೆ.

ಇನ್ದುವದನೆಗೂಡಿ ಅಡವಿಯ ಚರಿಸಿ,
ನಂದಗೋಕುಲದಿ ನಲಿದವಗೆ;
ಮಂದಕ ಮನೆಯರ ಮುಂದೆ ನಿರ್ವಾಣದಿ,
ನಿಂದ ಮೂರುತಿಗೆ ಆರತಿ ಯೆತ್ತಿರೆ.

ತುರಗವನೇರಿ ದೈತ್ಯರ ಸೀಳಿ ಸುಜನರ,
ಪೊರೆವ ಮಂಗಳ ಹಯವದನನಿಗೆ;
ವರದ ಯಾದವಗಿರಿ ಆದಿನಾರಾಯಣ,
ಚರಣ ಕಮಲಕ್ಕೆ ಆರತಿ ಯೆತ್ತಿರೆ.

# ಆನಂದ ತೀರ್ಥರಿಗೆ

ಓ ಸಂತಸದ ಸೆಲೆಯೇ, ಬಿಡುಗಡೆಯ ನೇವವನೇ!
ಓ ಅರಳು ತಾವರೆಯ ಕಂಗಳವನೇ!

ಆನಂದ ತೀರ್ಥರಿಗೆ ತುಂಬುಸಂತಸವೆಂಬ,
ವರವಿತ್ತ ದೈವತವೆ ನಿನಗೆ ನಮನಂ.

ಬಗೆಯ ಸುಂದರಿಯನ್ನು ಯೆದೆಯಲ್ಲಿ ಹೊತ್ತವನೇ,
ಓ ಗೋವಿಂದನೆ ನಿನಗೆ ನಮನಂ.

ಚಂದಿರನ ಹೊತ್ತಿರುವಾ, ನವಿಲ ಸೋಗೆಯ ತೊಟ್ಟು,
ಜಗಕ್ಕೆ ಸಂತಸವೀವ ನಿನಗೆ ನಮನಂ.

ಬಗೆಯ ಬೆಳಗುವ ಚಂದ್ರ, ಸುರರ ಆಳುವ ಇಂದ್ರ,
ಇವರಿಂದ ವಂದಿತನೇ ನಿನಗೆ ನಮನಂ.

ದೇವಲೋಕದ ಎಲ್ಲ ಸಗ್ಗಿಗರ ಗಡಣವು,
ಭಕ್ತಿಯಿಂದೆರಗುತಿಹ ನಿನಗೆ ನಮನಂ.

ನಿನ್ನೆಡೆಗೆ ಹರಿದುಬಹ ಸುರರೆಡೆಗೆ ಕಾರುಣ್ಯ,
ರಸವನ್ನು ಸುರಿಸುತಿಹ ನಿನಗೆ ನಮನಂ.

ಇಂದಿರೆಯ ಬಗೆಯಲ್ಲಿ ಸಂತಸವ ನುಕ್ಕಿಸುವ,
ಲೋಕೈಕ ಸುಂದರನೇ ನಿನಗೆ ನಮನಂ.

ಮಂದಾರದರಳುಗಳು ಚೆಲ್ಲಿ ಪರಿಮಳಿಸುತಿಹ,
ಮಂದಿರದಲಿರುವವನೇ ನಿನಗೆ ನಮನಂ.

ಸಂತಸದ ಹೊನಲೆಂಬ ಚೆಲುವ ಬೆಳದಿಂಗಳಲಿ,
ನಮ್ಮೆಡೆಗೆ ಹರಿಯಿಸುವ ನಿನಗೆ ನಮನಂ.

# ಆನಂದಮುಕುಂದ ಅರವಿಂದ ನಯನಾ

ಆನಂದಮುಕುಂದ ಅರವಿಂದ ನಯನಾ,
ಆನಂದತೀರ್ಥ ಪರಾನಂದ ವರದಾ.
ಸುಂದರಿ ಮಂದಿರ ಗೋವಿಂದ ವಂದೆ,
ಆನಂದತೀರ್ಥ ಪರಾನಂದ ವರದಾ.

ಚಂದ್ರಕ ಮಂದಿರ ನಂದಕ ವಂದೆ,
ಆನಂದತೀರ್ಥ ಪರಾನಂದ ವರದಾ.
ಚಂದ್ರಸುರೇಂದ್ರ ಸುವಂದಿತ ವಂದೆ,
ಆನಂದತೀರ್ಥ ಪರಾನಂದ ವರದಾ.

ವ್ರಿಂದಾರಕ ವ್ರಿಂದ ಸುವಂದಿತ ವಂದೆ,
ಆನಂದತೀರ್ಥ ಪರಾನಂದ ವರದಾ.
ಮಂದಿರ ಸ್ಯಂದನ ಸ್ಯಂದಕ ವಂದೆ,
ಆನಂದತೀರ್ಥ ಪರಾನಂದ ವರದಾ.

ಇಂದಿರಾನಂದಕ ಸುಂದರ ವಂದೆ
ಆನಂದತೀರ್ಥ ಪರಾನಂದ ವರದಾ.
ಮಂದಾರ ಸ್ಯಾಂದಿತ ಮಂದಿರ ವಂದೆ,
ಆನಂದತೀರ್ಥ ಪರಾನಂದ ವರದಾ.

ಆನಂದ ಚಂದ್ರಿಕಾ ಸ್ಯಂದತ ವಂದೆ
ಆನಂದತೀರ್ಥ ಪರಾನಂದ ವರದಾ.

## ಆಂಜನೆಯನೆ

ಆಂಜನೆಯನೆ ಅಮರ ವಂದಿತ ಕಂಜನಾಭನ ದೂತನೆ,
ಮಂಜಿ ನೊಲಗದಂತೆ ಶರಧಿಯ ದಾಟಿದ ಮಹಾಧೀರನೆ.

ಆಂಜನೆಯನೆ ನಿನ್ನ ಗುಣಗಳ ಪೊಗಳಳಳವೆ ಪ್ರಖ್ಯಾತನೆ,
ಸಂಜೀವನವಾ ತಂದು ಕಪಿಗಳ ನಂಜು ಕಳೆದ ಪ್ರಖ್ಯಾತನೆ.

ಕಾಮನಿಗ್ರಹನೆನಿಸಿ ಸುರರಭಿಮಾನಿ ದೇವತೆ ಎನಿಸಿದೆ,
ರಾಮ ಪಾದಕ್ಕೆರಗಿ ನಡೆದು ನಿಸ್ಸೀಮ ನೀನೆಂದೆನಿಸಿದೆ.

ಸಿಂಧುಹಾರಿದೆ ಶಿಘ್ರದಿಂದಲೆ ಬಂದು ಸೀತೆಗೆ ನಮಿಸಿದೆ,
ತಂದು ಮುದ್ರೆಯನಿತ್ತು ಮಾತೆಯ ಮನವ ಸಂತೊಶ ಪಡಿಸಿದೆ.

ಜನಕ ತನುಜೆಯ ಮನವ ಹರುಷಿಸಿ ವನವತಿತ್ ಎಡಾಡಿದೆ,
ದನುಜರನ್ನು ಸದೆದು ಲಂಕೆಯ ಅನಲದಾಹುತಿ ಮಾಡಿದೆ.

ರಾಮ ಕಾರ್ಯವ ವಹಿಸಿ ಅಕ್ಷಕುಮಾರನನು ಸಂಹರಿಸಿದೆ,
ಘೊರ ರಕ್ಕಸರೆಂಬುವರನು ಮಾರಿವಶವನು ಜೈಸಿದೆ.

ಭರದಿಬಂದು ರಾಮಪಾದಕ್ಕೆರಗಿ ಬಿನ್ನಹ ಮಾಡಿದೆ,
ಉರಗದೀ ಹಯವದನನಾ ಪರಮ ಭಕ್ತನೆಂದೆನಿಸಿದೆ.

# ಆರಂಭದಲಿ ನಮಿಪೆ ಬಾಗಿಶಿರವ

ಆರಂಭದಲಿ ನಮಿಪೆ ಬಾಗಿಶಿರವ,
ಹೆರಮ್ಬ ನೀನೊಲಿದು ನೀಡೆಮಗೆ ವರವ.

ದ್ವಿರದವದನನೆ ನಿರುತ ದ್ವಿರದವಂದ್ಯನ ಮಹಿಮೆ,
ಹರುಶದಿಂದಲಿ ಜಿಹ್ವೆ ಕರ ಎರಡರಿಂದ,
ಬರೆದು ಪಾಡುವುದಕ್ಕೆ ಬರುವ ವಿಘ್ನವ ತರಿದು,
ಕರುಣದಿಂದಲಿ ಯೆನ್ನ ಕರ ಪಿಡಿದು ಸಲಹೆಂದು.

ಕುಂಭಿಣಿಗೆ ಪತಿರಾಮ ಜಂಭಾರಿ ಧರ್ಮಜರು,
ಅಂಬರಾಧಿಪರಕುತ ಅಂಬರನೆ ನಿನ್ನ,
ಸಂಭ್ರಮದಿ ಪೂಜಿಸಿದರೆಂಬ ವಾರುತಿ ಕೇಳಿ,
ಹಂಬಲವ ಸಲಿಸೆಂದು ನಂಬಿ ನಿನ್ನಡಿಗಳಿಗೆ.

ಸೋಮ ಶಾಪದ ವಿಜಿತ ಕಾಮಕಾಮಿತದಾತ,
ವಾಮದೇವತನಯಾ ನೇಮದಿಂದಾ,
ಶ್ರೀ ಮನೋಹರನಾದ ಶ್ಯಾಮಸುಂದರ ಸ್ವಾಮಿ,
ನಾಮ ನೆನೆಯುವ ಭಾಗ್ಯ ಪ್ರೇಮದಲಿ ಕೊಡು ಎಂದು.

# ಆರಿಗಾರೋ ಕ್ರಿಷ್ಣ

ಆರಿಗಾರೋ ಕ್ರಿಷ್ಣ, ಶೂರಕುಮಾರನೆ!

ಆರಿಗಾರೋ ನಿನ್ನ ಪೊರತು ಪೊರೆವರೆನ್ನ.
ಮಾನ ಜನಕ, ಅಕ್ರೂರವರದಾ ಪೊರೆ!

ಸತಿಸುತರ್ ಹಿತರೆನೋ ಮತಿ ಭ್ರಾಂತಿ ಪಡಿಸುವರೂ,
ಗತಿಯಾವು ಎನಗಿಂದು ಗರುಡಗಮನನೆ ಬಾ!

ಆಶಾ-ಪಾಶಗೆ ಸಿಲುಕಿ ಗಾಸೀ ಪಟ್ಟೆನು ಬಹಳ,
ವಾಸುದೇವನೆ ನಿನ್ನಾ ದಾಸನೆಂದೆನಿಸಿದಾ!

ಮಾಯ ಮಡುವಿನೊಳ್ ಮುಳುಗಿ ಗಾಯವಾಂತೆನು ಕಾಯ,
ಉಪಾಯ ಯಾವುದು ಮುಂದೆ ರಾಯಶ್ರಿಹಯವದನ?

# ಆರು ಬದುಕಿದರಯ್ಯ

ಆರು ಬದುಕಿದರಯ್ಯ ಹರಿ ನಿನ್ನ ನಂಬಿ?
ತೋರು ಏ ಜಗದೊಳಗೆ ಒಬ್ಬರನು ಕಾಣೆ.

ಕರಪತ್ರದಿಂದ ತಾಮ್ರಧ್ವಜನ ತಂದೆಯ,
ಕೊರಳ ಕೊಯ್ಸಿದೆ ನೀನು ಕುಂದಿಲ್ಲದೆ.
ಮರುಳನಂದದಿ ಪೋಗಿ ಭ್ರುಗುಮುನಿಯ ಕಣ್ಣೊಡೆದೆ,
ಅರಿತು ತ್ರಿಪುರಾಸುರನ ಹೆಂಡಿರನು ಬೆರೆದೆ.

ಕಲಹ ಬಾರದ ಮುನ್ನ ಕರ್ಣನನು ನೇ ಕೊಂದೆ,
ಸುಲಭದಲಿ ಕೌರವರ ಮನೆಯ ಮುರಿದೆ.
ನೆಲವ ಬೇಡುತ ಪೋಗಿ ಬಲಿಯ ತನುವನು ತುಳಿದೆ,
ಮೊಲೆಯನುನಿ ತರು ಬಂದ ಪೂತನಿಯ ಕೊಂದೆ.

ಇರಿದುಂಬ ದಾಸರ ಕೈಲಿಕಪ್ಪವ ಕೊಂಬೆ,
ಗರುಡವಾಹನ ನಿನ್ನ ಚರಿಯವರಿಯೆ.
ದೊರೆ ಪುರಂದರವಿಠ್ಠಲ ನಿನ್ನನ್ನು ನಂಬಿದರೆ,
ತಿರುಪೆಯು ಗುಟ್ಟಲೊಲ್ಲದು ಕೆಳೊ ಹರಿಯೇ.

# ಆರು ವಂದಿಸಲೇನು

ಆರು ವಂದಿಸಲೇನು, ಆರು ನಿಂದಿಸಲೇನು, ಆರು ಶಾಪಿಸಲೇನು, ಕೋಪಿಸಲೇನು, ಆರು ಮುನಿದು ಮಾತನಾಡದಿದ್ದರೆ ಏನು? ಮಾರುತಾಂತರ್ಯಾಮಿ ಜಗನ್ನಾಥವಿಠ್ಠಲನ ಕಾರುಣ್ಯಪಾತ್ರರ ಕರುಣ ಯೆನ್ನೊಳಗಿರೆ! ಆರು ವಂದಿಸಲೇನು, ಆರು ನಿಂದಿಸಲೇನು.

# ಆವ ಕುಲವು ತಿಳಿಯಲಾಗದು

ಆವ ಕುಲವು ತಿಳಿಯಲಾಗದು ಶ್ರೀಹರಿಯೆ.

ಕಡಲಮಗಳ ಕಂದನಂತೆ, ಅಡವಿಯೊಳಗೆ ಮಡದಿಯಂತೆ,
ಕೊಡವಿಗೆ ತಾನು ಒಡೆಯನಂತೆ, ಕೊಡೆಯ ಪಿಡಿದು ಬೇಡಿದನಂತೆ.

ರಕ್ಕಸರಲ್ಲಿ ಕಾಳಗವಂತೆ, ಮರ್ಕಟರೆಲ್ಲ ಬಂಟರಂತೆ,
ಪಕ್ಷಿಯನೇರಿ ಮೆರೆದನಂತೆ, ಮುಕ್ಕಣ್ಣೇಶ್ವರ ಮೊಮ್ಮಗನಂತೆ.

ವಿದ್ಯೆಯಲ್ಲಿ ಪ್ರೌಢನಂತೆ, ಯುದ್ಧದಲ್ಲಿ ಶೂರನಂತೆ,
ಮುದ್ದು ಪುರಂದರವಿಠ್ಠಲ ನಂತೆ, ಬೇಲೂರ ಚೆನ್ನಿಗನಂತೆ.

## ಆವ ಸಿರಿಯಲಿ

ಆವ ಸಿರಿಯಲಿ ನೀನು ಎನ್ನ ಮರೆತೆ,
ದೇವ ಜಾನಕಿರಮಣಾ, ಪೇಳು ರಘುಪತಿಯೇ!

ಕಡಲೊಳಗೆ ಮನೇ ಮಾಡಿ ಮಲಗಿದೆನೆಂಬಾ ಸಿರಿಯೇ,
ಮ್ರಿಡ ನಿನ್ನ ಸಖನಾದ ಎಂಬಾ ಸಿರಿಯೇ,
ಬಿಡದೆ ದ್ರೌಪದಿ ಮಾನಕಾಯ್ದೆ ಎಂಬ ಸಿರಿಯೇ,
ಧ್ರಿಢವಾಗಿ ಹೇಳೆನಗೆ ದೆವಕೀಸುತನೇ.

ಇಂತು ಸಿರಿಯಲಿ ನೇನು ಎನ್ನ ಮರೆತರೆ ಸ್ವಾಮಿ,
ಪಂಥವೇ ನಿನಗಿದು ಪಾವಾ ನಡತೆ,
ಕಂತುಪಿತ ಶ್ರಿಕಾಗಿನೆಲಯಾ ಆದಿಕೆಶವರಂಗ,
ಚಿಂತೆಯನು ಬಿಡಿಸಿ ಸಂತೊಶವನು ಪಡಿಸು.

# ಆಗಜೆ ನಿನ್ನೊಗತನಗೆ

ಆಗಜೆ ನಿನ್ನೊಗತನಗೆ ಜಗ ನಗುವುದೆ,
ನಗರಾಜ ಏ ಮನೆಯ ಹೊಗಸಿದನೆ ಅಕಟಕಟ.

ಹೊಟ್ಟೆಗಿಲ್ಲದೆ ಹೊಗಿ ಹಾಲಾಹಲವನುಂಡ,
ತೊಟ್ಟತೊಗಲುಡೀಗೆ ಅಲೇ ಓಡೂ ಕೈಯ್ಯಾ.
ಸುಟ್ಟಸುಡುಗಾಡು ಮನೆ ಅಖಿಲಭೂತೇಶ,
ಬಲು ಸಿಟ್ಟಿನವನಂಗ ಸಂಗವ ಬಯಸ ಬಹುದೆ.

ಆರು ಮೊಗದವನೊಬ್ಬ ಆತ್ಮಜನು ಮೊಲೆ ಪಾಲು,
ಕಾರಿ ಕಡು ಮುನಿದು ಕಂಡನೆ ಸೇರನು.
ಓರಿಗುಪಕಾರಿ ಒಡ ನರಕ ಗಜಮುಖದವನು,
ನಾರಿ ಮೇನಕೆ ಮಗಳ ಕಂಡು ಹಿಗ್ಗುವಳ್ಳೆಯ್ಯಾ.

ಶಿವ ಶಕ್ತಿ ನಿನ್ನಂಥ ಸೌಭಾಗ್ಯವತಿಯೆಲ್ಲ,
ಭುವನದೊಳಗಾ ಎಲ್ಲು ಕಾಣೆನಿನ್ನೂ.
ಬವಿ ಜನಗಳೆನೆಂದು ಬಣ್ಣಿಸಿದರೋ ತಿಳಿಯೆ,
ಭವದೂರ ಶ್ರಿದವಿಠ್ಠಲರಾಯ ಬಲ್ಲಾ.

# ಐದು ಕಾಲಿನ ಮಂಚ

ಐದು ಕಾಲಿನ ಮಂಚ ಕುಂಟ ಮಲಗಿದ್ದಾ,
ಮೂರು ದಂಟೆಗಳನ್ನು ಬಗಲಿಗಿಲಿಸಿತ್ತಾ.

ಇದ್ದೈದು ಕಾಲಿಗೂ ಕೈಕಾಲು ಬಂತು,
ಕುಂತ ಮಲಗಿದ್ದಂತೆ ಮನ್ಚ ಧಾವಿಸಿತು.

ಆರು ಜನ ದಾಂಡಿಗರು ಕೈಹಿಡಿದರೆಲೆದು,
ಜಾರಿ ಬಿದ್ದನೊ ಕುಂತ ಪಕ್ಕೆಲುಬು ಮುರಿದು.

ಏಳೈಯ್ಯ ಕುಂತೈಯ್ಯ ದಂಟೆಹಿಡಿದೇಳು,
ಕೋಳಿ ಹಾಡುವ ಸುಪ್ರಭಾತವನು ಕೇಳು.

ಏ ಐದು ಏ ಆರು ಏ ಮೂರು ಸಾಕು,
ಹದಿನೆಂಟು ಬೆಕೊ ಬಿಡಬೇಕು ಹದಿನಾಲ್ಕು.

## ಅಕ್ಕಾ ನಂದಗೋಪನ

ಅಕ್ಕಾ ನಂದಗೋಪನ ಅರಮನೆಯ ಒಳಗೊಬ್ಬ,
ಅಕ್ರೂರ ಬಂದನಂತೆ!

ಹೊಕ್ಕೂ ಬಳಸುವಳಲ್ಲ, ಹುಸಿಯನಾಡುವಳಲ್ಲ,
ಇಕ್ಕೋ ಬಾಗಿಲಮುಂದೆ ಏ ಗರಥವ ಕಂಡೆ.

ಮಥುರಾ ಪಟ್ಟಣವಂತೆ, ಮಾವ ಕಂಸನಂತೆ,
ನದಿಯ ದಾಟಲಿ ಬೇಕೊದೆ.
ಬದಲೂ ಮಾತಿಲ್ಲವಂತೆ ಯೆನೆಂಬೆ ಹೆಡಾಕ್ಷಿ,
ಉದಯ ದೇಪಯನ ವಂದೆ ಹೆ ಕಾಂತೆ.

ಮಲ್ಲರ ಕೂಟ ವಂತೆ, ಮತ್ತೆ ಕಳಗವಂತೆ
ಬಲ್ಲಿದ ಗಜಗಳಂತೆ.
ಬಿಲ್ಲಾ ಹಬ್ಬಗಳಂತೆ, ಬೀದಿ ಶ್ರಿಂಗಾರವಂತೆ,
ಅಲ್ಲಿ ತಾಯ್–ತಂದೆಯರ ಕಾಲಿಗೆ ನೀ ಗಡವಂತೆ.

ಮತ್ತೆ ಪಂದವರಂತೆ, ಮೊಗತ ಸೋದರಾ
ಅತ್ತೆಯಾ ಮಕ್ಕಳಂತೆ.
ಸುತ್ತಾ ಶತ್ರುಗಳಂತೆ, ಸಕಲ ಕರ್ಯಗಳಂತೆ,
ಚಿತ್ತಜನ್ಯೆಯನ ಚಿತ್ತ ಎರಡಾಯ್ತಂತೆ.

ತಾಳಲಾರೇವೂ ನಾವೂ, ಪುರಂದರವಿಠ್ಠಲನು,
ಬಾಲತ್ವದಲಿ ಪೊದರೆ.
ಕಾಲ ಒದಗೀತಮ್ಮಾ ಕಮಿನೀ ಜನರೆಲ್ಲಾ,
ಆಲೊಚನೆಯ ಮಾಡಿ ಆಣೆ ಇಡುವಾ ಬನ್ನೀ.

# ಅಳುವುದ್ಯಾತಕೋ ರಂಗಾ

ಅಳುವುದ್ಯಾತಕೋ ರಂಗಾ? ಅತ್ತರಂಜಿಪ ಗುಮ್ಮಾ!

ಹುಟ್ಟಿದೇಳು ದಿವಸದಲಿ ದುಷ್ಟ ಪೂತನಿಯ ಕೊಂದೆ,
ಮುಷ್ಠಿ ವಿಷದ ಮೊಲೆ ಉಂಡ ಕಾರಣ.
ದ್ರಿಷ್ಟಿ ತಾಗಿತೆ ನಿನಗೇ ರಂಗೈಯ್ಯಾ?

ಬಾಲಕತನದಲ್ಲಿ ಗೋಪಾಲಕರೊಡನಾದಿ
ಕಾಳಿಯ ಮಡುವನು ಕಲಕಿದ ಕಾರಣ,
ಕಾಲು ನೊಂದಿತೆ ನಿನಗೆ ರಂಗೈಯ್ಯಾ?

ವಸುದೇವ ಸುತನಾಗಿ ಅಸುರ ಮಲ್ಲರ ಕೊಂದು,
ಕಸುವಿನ ಕಂಸನ ಕೊಂದ ಕಾರಣ,
ಕಿಸರು ತಾಗಿತೆ ನಿನಗೆ ರಂಗೈಯ್ಯಾ?

ಶರಣು ವೇಲಾಪುರದ ದೊರೆಯೆ ಚೆನ್ನಿಗರಾಯ,
ಶರಣರ ಸಲಹುವ ಕರುಣಾನಿಧಿಯೇ,
ವರದ ಪುರಂದರವಿಠ್ಠಲರಾಯ.

## ಅಂಬಾತನಯ ಹೇ

ಅಂಬಾತನಯ ಹೇ ಹೇರಂಬಾ, ಕರುನಾಂಬುಧಿ ತವ ಚರಣಾಂಭೋಜ ಎರಗುವೆ.
ದಶನಮೋದಕ ಪಾಶಾಂಕುಶ ಪಾಣಿ, ಅಸಮ ಚಾರುದೆಷ್ಣಾ ವಂದಿಪೆ.
ಬ್ರುಂದಾರಕ ಬ್ರುಂದ ವಂದಿತ ಚರಣಾರವಿಂದ ಯುಗಳ ದಯದಿಂದ ನೋಡೋ ಯೆನ್ನಾ.
ಯೂಥಪವದನ ಪ್ರದ್ಯೋತಿಸನ್ನಿಭ ಜಗನ್ನಾಥವಿಠ್ಠಲನ ಸಮ್ಪ್ರೀತಿ ವಿಶಯ ಜಯಾ.

## ಅಂಬೆಗಾಲಿಕ್ಕುತಲಿ ಬಂದಾ

ಅಂಬೆಗಾಲಿಕ್ಕುತಲಿ ಬಂದಾ,
ಗೊವಿಂದ ಅಂಭುಜನಾಭ ದಯ ದಿಂದಾ.

ಜಲಚರಜಲ ವಾಸ ಧರಣಿಧರ ಮ್ರುಗ ರೂಪ,
ನೆಲ ನಳೆದೀರದೀ ಮಾಡಿ ಬಂದಾ,
ಕುಲನಾಶ ವನವಾಸ ನವನೀತ ಚೊರನಿವ,
ನಳನೆಯರ ವ್ರತ ಭಂಗ ವಾಹನತುರಂಗಾ.

ಕಣ್ಣ ಬಿಡುವನು ಮುಖ ತಗ್ಗಿಸಿ ನೆಲ ನಗಿದು,
ಅಣಕಿಸುವ ಬಾಯ್ ತೆರೆದು ಬಾಲ ತನದೀ,
ಪ್ರಾಣ ಘಾತಕ ನುಣಲೊಲ್ಲ ಬೆಣ್ಣೆಯ ಮೆಲುವ,
ಮಾನವ ಬಿಟ್ಟು ಕುದುರೆ ಮೇಲೆ ಮೆರೆವಾ.

ನೀರ ಪೊಕ್ಕನೂ ಗಿರಿಯ ನಿಗಹಿ ಧಾರಿಣಿ ತಂದ,
ನರ ಮ್ರುಗ ಬಲಿ ಬಂಧ ಕೊರಳ ಹೊಯ್ದಾ,
ಶರಮುರಿದೊರಳೆಳೆದು ಬತ್ತಲೆ ಹಯ ವೇರೀ,
ಪುರಂದರವಿಠ್ಠಲಾ ಮನೆಗೆ ಬಂದಾ.

## ಅಂಬಿಗಾ ನಾ ನಿನ್ನ ನಂಬಿದೆ

ಅಂಬಿಗಾ ನಾ ನಿನ್ನ ನಂಬಿದೆ,
ಜಗದಂಬಾರಮಣ ನಿನ್ನ ನಂಬಿದೆ.

ತುಂಬಿದ ಹರಿ ಗೋಲೂ ಅಂಬಿಗಾ,
ಅದಕ್ಕೆ ಒಂಭತ್ತು ಛಿದ್ರಗಳು ಅಂಬಿಗಾ,
ಸಂಭ್ರಮ ದಿಂದ ನೀನು ಅಂಬಿಗಾ,
ಅದರ ಇಂಬು ನೋಡಿ ನಡೆಸು ಅಂಬಿಗಾ.

ಹೊಳೆಯ ಭರವ ನೋಡು ಅಂಬಿಗಾ,
ಅದಕ್ಕೆ ಸೆಳೆವು ಘನವ್ಯೆಯ್ಯ ಅಂಬಿಗಾ,
ಸುಳಿಯೊಳು ಮುಳುಗಿದೆ ಅಂಬಿಗಾ,
ಯೆನ್ನ ಸೆಳೆದುಕೊಂಢೊಯ್ಯೊ ನೀನು ಅಂಬಿಗಾ.

ಆರು ತೆರೆಯ ನೋಡು ಅಂಬಿಗಾ,
ಅದು ಮೀರಿ ಬರುತಲಿದೆ ಅಂಬಿಗಾ,
ಯಾರಿಂದಲಾಗದು ಅಂಬಿಗಾ.
ಅದ ನಿವಾರಿಸಿ ದಾಟಿಸೋ ಅಂಬಿಗಾ.

ಹತ್ತು ಬೆಂಬಡಿಗರು ಅಂಬಿಗಾ,
ಅಲ್ಲಿ ಒತ್ತಿ ಬರುತಲಿಹರು ಅಂಬಿಗಾ,
ಹತ್ತುವರೆತ್ತಲು ಅಂಬಿಗಾ,
ಎನ್ನ ಯೆತ್ತಿಕೊಂಢೊಯ್ಯೊ ಅಂಬಿಗಾ.

ಸತ್ಯವೆಂಬುದೆ ಹುಟ್ಟು ಅಂಬಿಗಾ,
ಸದಾ ಭಕ್ತಿಯೆಂಬುದೆ ಪಥವು ಅಂಬಿಗಾ,
ನಿತ್ಯಮೂರುತಿ ಪುರಂದರವಿಠ್ಠಲ ನಮ್ಮ,
ಮುಕ್ತಿಮಂಟಪಕೊಯ್ಯೊ ಅಂಬಿಗಾ.

# ಅಮ್ಮಾ ನಿಮ್ಮ ಮನೆಗಳಲ್ಲಿ

ಅಮ್ಮಾ ನಿಮ್ಮ ಮನೆಗಳಲ್ಲಿ ನಮ್ಮ ರಂಗನಾ ಕಾನಿದೆನೆ,
ಬ್ರಹ್ಮಮೂರುತಿ ನಮ್ಮ ಕ್ರುಷ್ಣನು ನಿಮ್ಮ ಹೇರಿಯೊಳಿಲ್ಲದೆ?

ಕಾಶಿ ಪೀತಾಂಬರ ಕೈಯಲ್ಲಿ ಕೊಳಲೂ,
ಪುಸಿದ ಸ್ರಿಗಂಧ ಮೈಯೊಳಗಮ್ಮಾ,
ಲೇಸಾಗಿ ತುಳಸಿಯ ಮಾಲೆಯ ಧರಿಸಿದ,
ವಾಸುದೇವ ಬಂದ ಕಾಣಿದೆನೆ.

ಕಾಲಲಿ ಕಿರುಗೆಜ್ಜೆ, ನೀಲದ ಬಾಹುಲಿ,
ನೀಲ ವರ್ಣನು ನಾಟ್ಯ ವಾಡುತಲಿ,
ನೇರಾಗಿ ಬಾಯಲ್ಲಿ ಜಗವನು ತೋರಿದ,
ಮೂಲೋಕದೊಡೆಯನ ಕಾಣಿದೆನೆ.

ಹದಿನಾರುಸಾವಿರ ಗೊಪಿವರೊಡಗೂದಿ,
ಚತುರಂಗ ಪಗಡೇಯ ಆಡುವನಮ್ಮಾ,
ಮದನಮೊಹನ ರೂಪ ಯೆದೆಯಲ್ಲಿ ಕೌಸ್ತುಭ
ಪದುಮನಾಭನು ಬಂದ ಕಾಣಿದೆನೆ.

ತೆತ್ತೀಸಕೋಟಿ ದೆವರ್ಕಳೊಡಗೂದಿ,
ಹತ್ತವತಾರವ ಎತ್ತಿದನೇ,
ಭಕ್ತವತ್ಸಲ ಪುರಂದರವಿಠ್ಠಲನ,
ನಿತ್ಯೋತ್ಸವ ಬಂದ ಕಾಣಿದೆನೆ.

# ಅನಿಲತರಲ

ಅನಿಲತರಲ ಕುವಲಯನಯನೇನಾ,
ತಪತಿನಸಾ ಕಿಸಲಯಶಯನೇನಾ.

ಯಾರಮಿತಾ ವನಮಾಲಿನಾ,
ಸಖಿ ಯಾರಮಿತಾ ವನಮಾಲಿನಾ.

ವಿಕಸಿತ ಸರಸಿಜ ಲಲಿತ ಮುಖೆನಾ,
ಸ್ಫುಟತಿನಸಾ ಮನಸಿಜ ವಿಶಿಕ್ಷೆನಾ.
ಅಮ್ರಿತ ಮಧುರ ಮ್ರುದು ತರ ವಚನೇನಾ,
ಜ್ವಲತಿನಸಾ ಮಲಯಜ ಪವನೇನಾ.

ಸ್ಥಲಜಲರುಹರುಚಿ ಕರ ಚರಣೆನಾ,
ಲುಠತಿನಸಾ ಹಿಮ ಕರ ಕಿರಣೆನಾ.
ಸಜಲ ಜಲರ ಸಮುದಯ ರುಚಿರೇನಾ,
ದಲತಿನಸಾ ಹ್ರಿದಿ ವಿರಹೇನಾ.

ಕನಕ ನಿಕಶ ರುಚಿ ಶುಚಿ ವಸನೇನ,
ಶ್ವಸಿತಿನಸಾ ಪರಿಜನ ಹಸನೇನ.
ಸಕಲ ಭುವನಜನ ವರ ಕರುಣೇನ,
ವಹತಿನಸಾ  ಋಜಂ ಗತಿ ಕರುಣೇ.

ಶ್ರಿ ಜಯದೇವ ಭಣಿ ತವಚನೇನ,
ಪ್ರವಿಶತು ಹರಿರಪಿ ಹೃದಯಂಗನೇ.

## ಅಂಜಲೇತಕೇ ಮನವೇ

ಅಂಜಲೇತಕೇ ಮನವೇ ಅನುಗಾಲವೂ,
ಕಂಜನಾಭನ ಭಕುತಿ ಕೈಕೊಂಡಬಳಿಕಾ.

ನಾರಾಯನಾ ಯೆಮ್ಬ ನಾಲ್ಕು ಅಕ್ಷರ ದಿಂದ,
ಘೊರ ದುರಿತಗಲೆಲ್ಲ ಕಳೆಯ ಬಹುದು.
ಶ್ರಿರಾಮನಾಮ ಯೆಮ್ಬೊ ಸಿಂಗಾಡೀ ತಕ್ಕೊಂಡು,
ವೈಷಡ್ವರ್ಗಗಳ ವಧೆ ಮಾಡ ಬಹುದು.

ಶ್ರಿಕೆಶವಾ ಎಮ್ಬ ಸಿದ್ಧ ಮಂತ್ರಗಲಿಂದ,
ಬೇಕಾದ ಕರ್ಮಗಳ ಕಳೆಯ ಬಹುದು.
ವೈಕುಂಠ ಪತಿಯೆಂಬ ವಜ್ರವನೂ ತೆಕ್ಕೊಂಡು,
ನೂಕುವಾ ಯಮಭಟರ ನುಗ್ಗು ಮಾಡಲು ಬಹುದು.

ಹರಿವಾಸುದೇವನೆಂಬೊ ಅಮ್ರಿತ ಪಾನಗಲಿಂದ,
ಜರೆ-ಮರಣ-ಜನನಗಲ ಜಯಿಸ ಬಹುದು.
ವರದ ಶ್ರಿಪುರಂದರವಿಠ್ಠಲನ ಸ್ಮರಣೆಯನು,
ಸರಸ ಸದ್ಭಕ್ತಿಯಿಮ್ ಸವಿ ಮಾಡ ಬಹುದು.

## ಶ್ರಿ ಅನ್ನಪೋರ್ಣೇ ಮಹಾಮಾತೆಯೇ

ಶ್ರಿ ಅನ್ನಪೋರ್ಣೇ ಮಹಾಮಾತೆಯೇ,
ಅಂಬಾ ಶ್ರಿ ಅನ್ನಪೋರ್ಣೇ ಮಹಾಮಾತೆಯೇ.

ಕೋಟಿಭನುಪ್ರಕಾಶಿನೀ, ಸರ್ವಾರಿಶ್ಟ ವಿನಾಶಿನೀ.

ಹೇಮಕಿರೀಟ ಧಾರಿಣೀ, ಕಾಮರುಪಿಣಿ ಕಾತ್ಯಾಯನೀ,
ದೇವದೇವೀಸುತ ಸಹವಾಸಿನೀ, ಖ್ಯಾಮಾ–ಪೀಢಾ ಪರಿಹಾರಿಣೀ.

ಅತಳ–ಸುತಳ–ರಸ–ಪಾತಾಳ ಅಷ್ಠದಿಗ್ಗಜಚಿತ್ರಿತ ಆಲಯವಾಸಿನೀ,
ಇಷ್ಟದೇವೀ ಹೊರನಾಡಕ್ಷೆತ್ರದೀ, ಶ್ರೆಷ್ಠ ಕುಂಭಕೃತ ಯಂತ್ರಮಧ್ಯದೀ.

# ಅಂತಕನ ದೂತರಿಗೆ

ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ,
ಚಿಂತೆಯನುಬಿಟ್ಟು ಶ್ರಿಹರಿಯ ನೆನೆ ಮನವೆ.

ದಿವರಾತ್ರೆ ಯೆನ್ನದೇ ವಿಶಯ ಲಂಪಟನಾಗಿ,
ಸವಿ ಓಟಗಳ ಉಂಡು ರಮಿಸಬೇಡಾ.
ಅವನ ಕೊಂದಿವನ ಕೊಂದು ಅರ್ಥವನು ಗಳಿಸುವೊಡೆ,
ಜವನ ದೋತರು ಬರುವಹೊತ್ತ ನೇನರಿಯೇ?

ವೊನ್ನೆ ಮದುವೆಯನಾದೆ ಕರೆವುದೊಂದೆರಡೆಮ್ಮೆ,
ನೆನ್ನೆ ಕೊಂಡೆನು ಕ್ಷೆತ್ರ ಫಲವು ಬಹುದು.
ಹೊಣ್ಣು-ಹಣ ಉಂಟೆನಗೆ ಸಾಯಲಾರೆನು ಎನಲು,
ಬೆನ್ನು ಬಿದುವನೆ ಮೃತ್ಯು ವ್ಯರ್ಥ ಜೀವಾತ್ಮಾ.

ಹೊಸ ಮನೆಯ ಕತ್ತಿದ್ದೇನು ಗ್ರುಹಶಸ್ತಿ ಮನೆಯೊಳಗೆ,
ಬಸುರಿ ಹೆಂಡತಿ ಮಗನ ಮದುವೆ ನಾಳೆ.
ಹಸನಾಗಿ ಇದೆ ಬದುಕು ಸಾಯಲಾರೇನು ಎನಲು,
ಹುಸುರಿಗರಿಯದೆ ಬಿಡರು ಯಮನ ಬರುವಾಗಾ.

ಪುತ್ರ ಹುಟ್ಟಿದ ದಿವಸ ಹಾಲು ಊಟದ ಹಬ್ಬ,
ಮತೊಬ್ಬ ಮಗನ ಉಪನಯನ ನಾಳೆ,
ಅತ್ತಿಯಾಗಿದೆ ಬದುಕು ಸಾಯಲಾರೇನು ಎನಲು,
ಮೃತ್ಯು ಹೆಡತಲೆಯಲ್ಲಿ ನಗುತಿಪ್ಪುದರಿಯೆ?

ಅಟ್ಟಡೀಗೆ ಉಣಲಿಲ್ಲ ಇಷ್ತ ದರುಶನವಿಲ್ಲ,
ಕೊಟ್ಟ ಸಾಲವ ಕೇಳ್ವ ಒತ್ತನರಿಯೇ.
ಕಟ್ಟಲೆ ತುಂಬಿದಮೇಲೇ ಕ್ಷಣಮಾತ್ರ ಇರಲಿಲ್ಲ,
ಅಷ್ಟರೊಳು ಪುರಂದರವಿಠ್ಠಲಯೆನು ಮನವೆ.

# ಅಂತರಂಗದ ಕದವು

ನವರತ್ನಗಳು ಕಂಡ–ಕಂಡ ಠಾವಿನಲುಂಟೆ,
ನವವಿಧ ಭಕುತಿಗಳು ಕಂಡ–ಕಂಡಲ್ ಉಂಟೆ,
ದೆವಾ ನಿನ್ನ ಭಕುತಿ ಕಂಡರೆ ಬಾರದು ಕಲಿತರೆ ಬಾರದು,
ಪುರಂದರವಿಠ್ಠಲ ನಿನ್ನ ದಯವಾಗದನಕಾ.

ಅಂತರಂಗದ ಕದವು ತೆರೆಯಿತಿಂದು,
ಯೆಂತು ಪುಣ್ಯದ ಫಲವು ಪ್ರಾಪ್ತಿ ದೊರಕಿತೊ ಎನಗೆ.

ಹರಿ ಕರುಣವೆಂಬಂಥ ಕೀಲಿ ಕೈ ದೊರಕಿತು,
ಗುರು ಕರುಣವೆಂಬಂಥ ಶಕ್ತಿಯಿಂದ.
ಪರಮ ಭಾಗವತರ ಸಹವಾಸದಲಿ ಪೋಗಿ,
ಹರಿಸ್ಮರಣೆಯಿಂದ ಬೀಗ ಮುದ್ದೆಯ ತೆಗೆದೆ.

ಸ್ವಮೂರ್ತಿ ಗಣ ಮಧ್ಯ ಸಚ್ಚಿದಾನಂದೈಕ,
ರಮೆ ಧರೆಯರಿಂದಲಾಲಿಂಗಿತ್ವದಿ.
ಕಮಲಾಜಾಜಿಗಲಿಂದ ತುತಿಸಿಕೊಳ್ಳುತ ಹೃದಯ
ಕಮಲದ ಒಳಗಿರುವ ವಿಜಯ ವಿಠ್ಠಲನ ಕಂಡೆ.

## ಅಪಮೃತ್ಯು ಪರಿಹರಿಸೊ

ಅಪಮೃತ್ಯು ಪರಿಹರಿಸೊ ಅನಿಲದೇವಾ.
ಕೃಪಣವತ್ಸಲನೆ ಕಾವರಕಾಣೆ ಜಗದೊಳಗೆ.

ನಿನಗಿನ್ನು ಸಮರಾದ ಅನಿಮಿತ್ತ ಬಾಂಧವರು,
ಯೆನಗಿಲ್ಲ ಆವಾವ ಜನುಮದಲ್ಲಿ.
ಅನುದಿನವು ಯೆಮ್ಮನು ಉದಾಸೀನ ಮಾಡುವುದು,
ಅನುಚಿತವು ಜಗದಿ ಸಜ್ಜನ ಶಿಖಾಮಣಿಯೇ.

ಜ್ನಾನಾಯುರೂಪಕನು ನೀನಗುದೊ ವಾಣಿ,
ಪಂಚಾನನಾದ್ಯಮರಿಗೆ ಪ್ರಾಣ ದೇವಾ.
ದೀನವತ್ಸಲನೆಂದು ನಾ ನಿನ್ನ ಮೊರೆ ಹೊಕ್ಕೆ,
ದಾನವಾರನ್ಯ ತ್ರಿಷಾಣು ಸರ್ವದಯೆಮ್ಮ.

ಸಾಧನ ಶರೀರವಿದು, ನೀ ದಯದಿ ಕೊಟ್ಟದ್ದು,
ಸಾಧಾರಣವಲ್ಲ ಸಾಧುಪ್ರಿಯನೇ.
ವೇದವಾದೋದಿತ ಜಗನ್ನಾಥವಿಠ್ಠಲನ,
ಪಾದ ಭಜನೆಯನಿತ್ತು ಮೋದ ಕೊಡು ಸತತಾ.

## ಅರವಿಂದಾಲಯೆ ತಾಯೆ

ಅರವಿಂದಾಲಯೆ ತಾಯೆ, ಶರಣು ಹೊಕ್ಕೇನು ಕಾಯೆ.
ಶ್ರಿರಮಣನ ಪ್ರಿಯೆ, ಜಗಂಮಾತೆ!

ಕಮಲಾ ಸುಗಂಧೀಯೆ, ಕಮಲಾದಳ ನೆತ್ರೆ.
ಕಮಲಾ ವಿಮಲಾ ಶೊಭಿತೆ.
ಕಮನೀಯಾ ಹಸ್ತಾ ಪಾದ, ಕಮಲ ವಿರಾಜಿತೆ,
ಕಮಲೆ ಕಾಯೆ ಎನ್ನನು, ಶ್ರಿ ಲಕುಮಿಯೆ.

ನಿನ್ನ ಕರುಣಾ ಕಟಾಕ್ಷ ವಿಕ್ಷನದಿಂದಲಿ,
ತನು ಮನಗಳ ಯೇರಿತೆ.
ಧನ್ಯ ವಿರಾಜಿತೆ, ಅಜಭವಾದಿಗಳ,
ಪ್ರಸನ್ನೆ ಕಾಯೆ ಎನ್ನನು, ಶ್ರಿ ಲಕುಮಿಯೆ.

ಹರಿ ನಿನ್ನ ಪುರದಲ್ಲಿ ಧರಿಸಿದನೆಂಬಂಥ,
ಗರುವದಿ ಮರೆಯಲಿರೆ.
ನಿರತ ನಿನ್ನಯ ಮುದ್ದು ಪುರಂದರವಿಠ್ಠಲನ,
ಚರಣಕಮಲವ ತೋರಿಸೆ, ಶ್ರಿ ಲಕುಮಿಯೆ.

# ಬಾರಮ್ಮಾ ನಾವಿಬ್ಬರಾಡುವಾ

ಬಾರಮ್ಮಾ ನಾವಿಬ್ಬರಾಡುವಾ,
ಮುಕ್ತಿ ಸಾಧನಂಗಳ ಬೇಗ ಬೇದುವಾ.

ಕಾಡುವ ಕಪಿಶಯನಂಗಳ ಬೇಡುವ,
ಜ್ಞಾನ ಮಂಟಪದಲ್ಲಿ ಜೋಡೀ ಕೂಡಾಡುವ.

ಮೂರು ಮನೆಯು ಭೇದವ ಮಾಡಿ,
ಮತ್ತೈದೆಂಟು ಮನೆ ಇತ್ತಾಡುವಾ.

ಪುಂಡರೀಕಾಕ್ಷ ಶೆಶನ ಮೇಲೇ,
ಭೂಮಂಡಲದೊಳಗೆ ಬ್ರಹ್ಮಾಣ್ಡವು,
ಶಂಖ ಚಕ್ರಾಂಕಿತ ಪುರಂದರವಿಠಲನ್ನ,
ಜ್ಞಾನ ಮಂಟಪದಲ್ಲಿ ಕೂಡೀ–ಕೊಂಡದುವ.

# ಬಾರೆ ಭಗ್ಯದನಿಧಿಯೇ

ಬಾರೆ ಭಗ್ಯದನಿಧಿಯೇ, ಕರವೀರ ನಿವಾಸಿನಿ ಸಿರಿಯೇ.
ಬಾರೆ ಬಾರಿಗೆ ಶುಭ ತೋರೆ ನಮ್ಮನ್ನೀಗೆ.

ನಿಗಮವೇದ್ಯಳೆ ನೀನು, ನಿನ್ನ ಪೊಗಳರಾರೆನೆ ನಾನು,
ಮಗನ ಪರಾಧವ ತೆಗೆದೆಣಿಸದೆ ನೀ,
ಲಗುಬಗೆ ಇಂದಲೀ ಪನ್ನಫವೇಣೀ.

ಲೋಕಮಾತೆಯೆ ನೀನು, ನಿನ್ನ ತೋಕನಲ್ಲವೇ ನಾನು,
ಆಕಳ ಕರುವಿನ ಸ್ವೀಕರಿಸಿದಪರಿ,
ನೀ ಕರುಣದಿ ಕಾಲಾಕೆ ನಮ್ಮನಿವೇ.

ಕಡೆಗೆ ನಮ್ಮ ನಿವಾಸ, ನಿನ್ನ ಒಡೆಯ ಅನಂತಾದ್ರೀಶ,
ಒಡೆಯ ಇದ್ದಲ್ಲಿಗೆ ಮಡದಿ ಬಾಗುದು,
ನಡೆತೆ ಉಚಿತವಿದು ನಡೆ ನಮ್ಮನೀಗೆ.

## ಬಾರೆ ನಮ್ಮನಿತನಕ

ಬಾರೆ ನಮ್ಮನಿತನಕ ಭಾಗ್ಯದಾದೇವೀ,
ಬಾರೆ ನಮ್ಮನಿತನಕ, ಬಹು ಕರುಣದಿಂದಲಿ,
ಜೋಡಿ ಕರಗಳ ಎರಗುವೆ ಚರಣಕ್ಕೆ.

ಜರದ ಪೀತಾಂಬರ ನಿಲಿಗೆಗಳಲಿಯುತ,
ತರಳನ ಮ್ಯಾಲೆ ತಾಯಿ ಕರುಣಿಸಿ ಬೇಗನೆ.

ಹರಡಿ ಕಂಕಣದುಂಡು ಕರದಲ್ಲೇ ಹೊಳೆಯುತ,
ಸರಿಗಿ ಸರಹು ಚಂದ್ರ ಹಾರಗಳ್ ಅಲೆಯುತ.

ಮಂಗಳಾಂಗಿಯೇ ನಿನಗೊಂದಿಸಿ ಎರಗುವೆ,
ಇಂದಿರೇಶನ ಕೂಡಿ ಇಂದು ನಮ್ಮನಿತನಕ.

## ಬಾರೋ ಬೇಗ ಬಾರೋ

ಬಾರೋ ಬೇಗ ಬಾರೋ, ನೀಲ ಮೇಘ ವರ್ಣಾ,
ಬಾರೋ ಬೇಗ ಬಾರೋ, ವೇಲಾಪುರದಾ ಚನ್ನಾ.

ಇಂದಿರೆರಮಣಾ ಗೋವಿಂದಾ, ಬೇಗ ಬಾರೋ,
ನಂದನಕಂದ ಮುಕುಂದಾ, ಬೇಗ ಬಾರೋ.

ಧೀರಾ ಉದಾರಾ ಗಂಭೀರಾ, ಬೇಗ ಬಾರೋ,
ಮಾರಾಲಂಕಾರಾ ರಘುವೀರಾ, ಬೇಗ ಬಾರೋ,
ಪೃಥ್ವಾ ಅನಿರುಧ್ಧಾ ನಿರವದ್ಯಾ, ಬೇಗ ಬಾರೋ,
ಅತ್ತಾನೇನಿದ್ದಾ ಸುಪ್ರಸಿದ್ಧಾ, ಬೇಗ ಬಾರೋ.

ರಂಗಾ ಉತ್ತುಂಗಾ ನರಸಿಂಗಾ, ಬೇಗ ಬಾರೋ,
ಮಂಗಳ ಮಹಿಮ ಶುಭಾಂಗಾ, ಬೇಗ ಬಾರೋ,
ಐಯ್ಯಾ ವಿಜಯ ಸಹಾಯಾ, ಬೇಗ ಬಾರೋ,
ಅಹ್ಯತ್ರಿವಾಸಾ ಹಯವದನಾ, ಬೇಗ ಬಾರೋ.

# ಬಾರೋ ಕೃಷ್ಣೈಯ್ಯಾ

ಬಾರೋ ಕೃಷ್ಣೈಯ್ಯಾ ನಿನ್ನ ಭಕ್ತರ ಮನೇಗೀಗ, ರಂಗೈಯ್ಯಾ!

ಬಾರೋ ನಿನ್ನ ಮುಖ ತೋರೋ,
ನಿನ್ನ ಸರಿ ಆರೋ ಜಗಧರಾಶೀಲನೇ!

ಅಂದುಗೆಪಾಡಗವು ಕಾಲಂದುಗೆ ಕಿರು ಗೆಜ್ಜೆ,
ಧಿಂಧಿಮಿ ಧಿಮಿಧಿಮಿ ಧಿಮಿಕೆನುತಾ, ಪೊಂಕೊಳಲನೂದುತಾ ಬಾರೈಯ್ಯಾ.

ಕಂಕಣ ಕರದಲ್ಲಿ ಹೊಣ್ ಉಂಗುರ ಹೊಳೆಯುತಾ,
ಕಿಂಕಿಣಿ ಕಿಣಿಕಿಣಿ ಕಿಣಿರೆನುತಾ.
ಪೊಂಗಳಲನೂದುತಾ ಬಾರೈಯ್ಯಾ, ಬಾರೋ ಕೃಷ್ಣೈಯ್ಯಾ.

ವಾಸಾ ಉಡುಪಿಲೀ ನೆಲೆ ಆದಿಕೆಶವನೇ,
ದಾಸಾ ನಿನ್ನ ಪದ ದಾಸಾ.

# ಬದುಕಿದೇನು

ಬದುಕಿದೇನು ಬದುಕಿದೇನು ಭವವೆನಗೆ ಹಿಂಗಿತು,
ಪದುಮನಾಭನ ಪಾದದೊಲುಮೆ ಯೆನಗಾಯಿತು.

ಹರಿ ತೀರ್ಥ ಪ್ರಸಾದ ಎನ್ನ ಜಿಹ್ವೆಗೊದಗಿತು,
ಹರಿಯ ನಾಮಾಮೃತ ಕಿವಿಗೊದಗಿತು.
ಹರಿಯ ದಾಸರು ಎನ್ನ ಬಂಧು-ಬಳಗಾದರು,
ಹರಿಯ ಶ್ರಿಮುದ್ರೇ ಆಭರಣವಾಯಿತು.

ಮುಕುತರಾದರು ಯೆನ್ನ ನೂರೊಂದು ಕುರರವರು,
ಮುಕುತಿ ಮಾರ್ಗಕ್ಕೆ ಯೋಗ್ಯ ನಾನಾದೆನೋ.
ಅಕಳಂಕ ಶ್ರಿಹರಿಯಾ ಭಕುತಿಗೆ ಮನವೆಳೆದು,
ರುಕುಮಿಣೀಯರರಾ ಕೈವಶರು ಆದೆನಗೆ.

ಇಂದೆನ್ನ ಜೀವಕ್ಕು ಸಕಲ ಸಂಪದವಾಯ್ತು,
ಮುಂದೆನ್ನ ಜನ್ಮ ಸಫಲವಾಯ್ತು,
ತಂದೆ ಶ್ರಿ ಕಾಗಿನೆಲೆ ಆದಿಕೆಶವರಾಯಾ,
ಬಂದೆನ್ನ ಹೃದಯದಲಿ ನೆಲೆಆಗಿ ನಿಂದಾ.

## ಬಾಗಿಲಲ್ಲಿ ಬಿದ್ದಿಹ ಭಜಕನು ನಾನು

ನಿನ್ನನ್ನೆ ನಂಬಿದೆ ಕೃಷ್ಣ, ಅನ್ಯರೊಬ್ಬರ ಕಾಣೇ.
ಪನ್ನಂಘಶಯನ ಶ್ರಿವಕ್ಷ ಬಾರೋ.
ಇರುಳು-ಹಗಲು ನಿನ್ನ ಚರಣಕ್ಕೆ ಮೊರೆ ಹೊಕ್ಕೇ,
ಸರಿಯಾರು ಏರೇಳು ಭುವನದೊಳು, ಹಯವದನಾ?

ಬಾಗಿಲಲ್ಲಿ ಬಿದ್ದಿಹ ಭಜಕನು ನಾನು,
ಗೋಪಾಲ ಭೂಪಾಲ ಕಾಯ್ಯೆಯ್ಯ ನೀನು.

ಯೋಗದ ಪಥಗಳನು ಯೇನೊಂದು ಅರಿಯೆನು,
ನೀ ಗತಿ ಯೆಂದು ಬಂದು ಕೂಗುವೇನು ಹರಿಯೇ!

ಭೊಗವನು ಬಯಸುವೇ ಬಗೆಬಗೆಯಲೀ ರತಿಯ,
ರೋಗ ಬಲವಾಯಿತು ತಿದ್ದೆನ್ನ ಮತಿಯ.

ಆಗಮ ಸಿದ್ಧ ಸುಗುಣಪೂರ್ಣ ಶ್ರಿಲೋಲಾ,
ಬೇಗ ಸಲಹೋ ಮಮ ಸ್ವಾಮಿ ಹಯವದನಾ.

# ಬಾಲಕೃಷ್ಣನೇ ಬಾರೋ

ಬಾಲಕೃಷ್ಣನೇ ಬಾರೋ, ಬೇಗ ಬಾರೋ.
ಬಾಲಕೃಷ್ಣನೇ ಬಾರೋ, ಕಾಲಗಳಗನಿಡುವೆ,
ಕೋಲುಗು ಗುರಿ ಚೆಂಡು ನಿನಗೆ ಇಟ್ಟಿರುವೆ.

ಅಣ್ಣೈಯ ಬಲರಾಮ ಬೆಡುವನ್ನೈಯ್ಯಾ, ಸಣ್ಣವ ನೀ ಬಾರೆಲೋ.
ಎನ್ನ ಸಾಕು ಮಾಡದೆ ಒಡ ಬೇಡವೊ ಈಗ,
ಬಣ್ಣಿಸಿ ತೂಗುವೆ ಗಮ್ಮನೆ ಮಲಗೋ.

ಯೋಗಿಗಳರಸೇ ನಿನಗೇ ನಾ, ಜೋಗುಳ ಪಾಡುವೆನೊ.
ನಾಗಭುಷಣ ಬಂದು ಅಂಜಿವುಸ ನಿನ್ನನ್ನಾ,
ಜೋಗಿಹಣಿ ಕಾಪುವ ಕಣ್ಣು ಮುಚ್ಚಿ ಕೊಳ್ಳೋ.

ಭಕ್ತವತ್ಸಲ ಎನ್ನಲೀ ನಿನ್ನ ನಾ ಮಗುಯೆಂದು ಕರೆಯಲೇ?
ಅಗಣಿತಮಹಿಮನೆ ಜಗ ಮೊಹಿಪರ್‍ೈಯ್ಯ ರಂಗ,
ಮಗುವಲ್ಲವೋ ತಂದೆ ಪುರಂದರವಿಠ್ಠಲೈಯ್ಯ!

# ಬಲವು ಬಲವೆನಿನ್ನ

ಬಲವು ಬಲವೆನಿನ್ನ ಬಲವಲ್ಲದೆ ಮಿಕ್ಕ,
ಬಲಗಳುಂಟೆ ಬಣಗು ಗ್ರಹಗಳಿಂದ.

ಹರಿಯ ನಿನ್ನ ಕೃಪೆಯೆನಗೆ ಚಂದ್ರ–ತಾರಾ ಬಲವು,
ಹರಿ ನಿನ್ನ ಕರುಣವೇ ರವಿಯ ಬಲವು,
ಹರಿ ನಿನ್ನ ಮೋಹವೇ ಯೆನಗೆ ಗುರು–ಭೃಗು ಬಲವು,
ಹರಿ ನಿನ್ನವೊಲುಮೆಯೇ ಶನಿಯ ಬಲವು.

ಮಂಗಳ ಮಹಿಮ ನಿನ್ನ ಅಂಗ ದರುಶಣ ಸುಖದಾ,
ಮಂಗಳನ ಬಲವು ಯೆನ್ ಅಂಗಕ್ಕೆ ಸದಾ.
ರಂಗ ನಿನ್ನಯ ಚರಣ ಕಂಗಳಲಿ ನೋಡುವುದು,
ಹಿಂಗದೆ ಸುಖವನೀನ ಸೌಮ್ಯ ಬಲವೈಯ್ಯಾ.

ಆದಿ ಮೂರುತಿ ನಿನ್ನಾ ಅರಿವುದೇ ರಾಹು ಬಲ.
ಆದಿ ಮೂಲನೆ ನಿನ್ನ ಗುಣ ಕಥನವಾ,
ಆದರಿಸಿ ಕೊಂಡಾಡುತಿಹುದೆನಗೆ ಕೇತು ಬಲ,
ಆದಿ ಮಹಿಮನೇ ಮಹಾ ಪುರಂದರವಿಠ್ಠಲಾ.

# ಬಲ್ಲವಗಿಲ್ಲಿದೆ ವೈಕುಂಠಾ!

ಬಲ್ಲವಗಿಲ್ಲಿದೆ ವೈಕುಂಠಾ!
ಬಲ್ಲವಗೆಲ್ಲಾ ಶ್ರಿಹರಿ ಪೂಜೆ!

ಹರಿ ಚರಾಚರ ಸರ್ವಜಗದ್ಭರಿತಾ,
ಮುರಹರನಿದ್ದುದೇ ವೈಕುಂಠ.
ನರಹರಿಯಲಿ ನವವಿಧ ಭಕುತಿಗೆ,
ಸರಿ ಸಮ ವೆಂದೆಂದಿ ಇಲ್ಲವೆಂದು.

ಜಾಗರಾದಿಗಳಲ್ಲಿ ವಿಶ್ವಾದಿ ಮೂರುತಿ,
ಯೋಗಿ ಶ್ರಿ ಕೃಷ್ಣನೇ ವಿಶಯಂಗಳಾ,
ಭೊಗಿಪನೆಂಬ ಯೊಗಿಗೆ ವಿಹಿತ,
ಭೊಗಂಗ ಎಲ್ಲ ಯಾಗಂಗ ಎಂದು.

# ಬಂದಾ ಮನ್ಮಾನಸಕ್ಕೆ

ಬಂದಾ ಮನ್ಮಾನಸಕ್ಕೆ ಶ್ರಿಹರಿ,
ಇಂದಿರೇ ರಮಣ ಮುಕುಂದಾನಂದದಿ.

ಥಳಥಳಿಸುವ ನವರತ್ನ ಕಿರೀಟವು,
ಹೊಳೆವ ಮಕರಕುಂಡಲ ಧ್ವಜವು.
ತುಳಸಿ ಮಾಲೆ ವನಮಾಲೇ ಇಂದೊಪ್ಪುತ,
ಬಲು ತೇಜಸ್ಸಿಗೆ ತೆಜೋಮಯನಾದ.

ಲಲನೆ ರುಕ್ಮಿಣಿ ಸತ್ಯಭಾಮೇ ದಿಂದೊಡಗೂಡಿ,
ನಲಿದಾಡುತ ಯೆನ್ನ ಹೃದಯದಲಿ.
ಬಲು ಬಲು ವಿಗಢ ಅಜ್ನಾನಾಂಧಕಾರದ,
ಕುಲವ ನೋಡಿಸಿ ಮದ್ ಕುಲದ್ಯೆವ ಮೂರುತಿ.

ಯೆಶ್ಟು ಜನುಮದಾ ಪುಣ್ಯ ಬಂದೊದಗಿತೋ,
ಯೆಶ್ಟು ಧನ್ಯರೋ ನಮ್ಮ ಹಿರಿಯರು,
ಯೆಶ್ಟು ದೇವತೆಗಳು ನಮಗೆ ಹರಸಿದರೋ,
ದೃಷ್ಠಿಗೋಚರ ನಮ್ಮ ವ್ಯಾಸ ವಿಠ್ಠಲಾ.

## ಬಂದನೇನೇ ರಂಗ

ಬಂದನೇನೇ ರಂಗ ಬಂದನೇನೇ,
ತಂದೆ ಬಾಲಕೃಷ್ಣ, ನವನೀತ ಚೋರ!

ಘಿಲುಘಿಲಿಘಿಲುರೆಂಬ ಪೊಂನೊಂದಿಗೆ ಗೆಜ್ಜೆ,
ಹೊಳೆಹೊಳೆಯುವ ಬಾರವನೂರುತಾ,
ನಲಿನಲಿದಾಡುವ ಉಂಗುರ ಅರಳೆಲೆ,
ಥಲಥಲಥಲ ಹೊಳೆಯುತ ಶ್ರಿಕೃಷ್ಣ.

ಕಿಣಿಕಿಣಿಕಿಣಿರೆಂಬ ಕರದ ಕಂಕಣ,
ಝಣಝಣಝಣರೆಂಬೊ ನಡುವಿನ ಗಂಟೆ,
ಧಣಧಣಧಣರೆಂಬ ಪಾದವ ತೊಡವಿನ,
ಮಿಣಮಿಣ ಕುಣಿದಾಡುತ ಶ್ರಿಕೃಷ್ಣ.

ಹಿಡಿಹಿಡಿಹಿಡಿ ಎಂದು ಪುರಂದರವಿಠಲನ,
ದುಡುದುಡುದುಡದುಟನೆ ಓಡುತಾ,
ನಡಿನಡಿನಡಿ ಎಂದು ಮೆಲ್ಲನೆ ಪಿಡಿಯಲು,
ಬಿಡಿಬಿಡಿಬಿಡಿದ ಮಯಾಯೆನ್ನುತ.

# ಬಂದನೇನೇ ಸುಂದರ ಶ್ರಿರಾಮಚಂದಿರ

ಬಂದನೇನೇ, ಸುಂದರ ಶ್ರಿರಾಮಚಂದಿರ ಬಂದನೇನೇ.

ಸಿರಿವತ್ಸಧಾರನು ಶ್ರಿತಜನೋದ್ಧಾರನು,
ಮಾರಸುಂದರನು ಮಾಮನೋಹರನು.

ಕೋಮಲ ಗಾತ್ರನು ಕಮಲ ಕಳತ್ರನು,
ಕಮಲಾಪ್ತ ತೇಜನು ವಿಮಲ ಸತ್ಪಾತ್ರನು.

ಸಾಸಿರನಾಮನು ಭಾಸುರ ವದನನು,
ಈಶ ವಂದಿತನು ಶೆಶ ವಿಠ್ಠಲನು.

# ಬಂದೇವಯ್ಯಾ ಗೋವಿಂದ ಶೆಟ್ಟಿ

ಬಂದೇವಯಾ ಗೋವಿಂದ ಶೆಟ್ಟಿ,
ನಿಮ್ಮ ಹರಿವಾಣ ತೀರ್ಥ ಪ್ರಸಾದ ಉಂಟೆನಲಾಗಿ.

ಅಪ್ಪವು ಅಥಿರಸ ತುಪ್ಪ ಚಿನ್ನೀ ಪಾಲು,
ಒಪ್ಪುವ ಸಕ್ಕರೆ ಆಲಕ್ಕಿಯು,
ಅಪರೂಪವಾದ ಕಜ್ಜಾಯಾ ರಾಸಿಗಳ,
ಸೊಪ್ಪನ್ನ ದೇಶಕ್ಕೆ ಮಾರುವ ಶೆಟ್ಟಿ.

ಒಡೆದ ಮಡಕೇಯಲ್ಲಿ ಅರೆದು ನಾಮವ ಮಾಡಿ,
ಕೊಡುವೇನೀ ಕಾಸಿಗೆ ಒಂದೊಂದನೂ.
ಒಡಲು ತುಂಬಿಮಿಕ್ಕ ಒಗರ ಮಾರಿಸಿ,
ಒಡೆವೆಯ ಗಳಿಸುವ ಕಡು ಲೋಭಿ ಶೆಟ್ಟಿ.

ಶೆಶಗಿರಿಯಲ್ಲಿ ವಾಸ ಮಾಡಿ ಕೊಂಡು,
ದೇಶಕ್ಕೆ ಪ್ರಸಾದ ನಡೆಸೂವ ಶೆಟ್ಟಿ,
ಆಸೆ ಮಾಡಿ ಹಣ-ಕಾಸು ಗಳಿಪ,
ಆದಿಕೇಶವ ನಾರಾಯಣ ತಿಮ್ಮಪ್ಪ ಶೆಟ್ಟಿ.

# ಬಂದು ನಿಲ್ಲೋ

ಬಲಿಯ ಮನೆಗೆ ವಾಮನ ಬಂದಂತೆ,
ಬಘೀರಥಗೆ ಶ್ರಿ ಗಂಗೆ ಬಂದಂತೆ,
ಮುಚುಕುಂದಗೆ ಶ್ರಿ ಮುಕುಂದ ಬಂದಂತೆ,
ವಿದುರನ ಮನೆಗೆ ಶ್ರಿ ಕೃಷ್ಣ ಬಂದಂತೆ,
ವಿಭೀಷಣನ ಮನೆಗೆ ಶ್ರಿ ರಾಮ ಬಂದಂತೆ,
ನಿನ್ನ ನಾಮವು ಬಂದು ಎನ್ನ ನಾಲಿಗೆಯಲಿ ನಿಂದು,
ಸಲಹಲಿ ಶ್ರಿ ಪುರಂದರವಿಠಲಾ.

ಬಂದು ನಿಲ್ಲೋ ಕಣ್ಣ ಮುಂದೆ, ಬಂದು ನಿಲ್ಲೋ.
ಬಂದು ನಿಲ್ಲೋ, ನಿನ್ನ ಪಾದಕ್ಕೆ ವಂದಿಪೆ,
ಇಂದಿರಾ ರಸಾತ್ಗೋವಿಂದ ಮುಕುಂದನೆ.

ಅರಳಿದ ಚೆಂದಾವರೆಯ ಧಿಕ್ಕರಿಸುವ,
ಚರಣಾರವಿಂದವ ನಿರತ ತೋರಿಸುಪೆ,
ನೀಲಾಲಕಾಮಕರ ಕುಂಡಲ ಮಂಡಿತ,
ಮೇಲಾದ ರಾಕೇಂದು ಮುಖವ ತೋರುತಲಿ.

ಪದುಮನಾಭನೆ ನಿನ್ನ ಸದಯನೆನ್ನುತೆ ಎನ್ನ,
ಹೃದಯದೊಳಗೆ ಇತ್ತು ಮುದದಿ ಭಜನೆ ಮಾಳ್ಪೆ.
ಅಜಭವಾದಿಗಳಿಗೆ ನಿಜವ ತೋರುವಂಥ,
ಭಜಿಪಾ ಭಕ್ತರಿಗೊಡೆಯ ವಿಜಯವಿಠ್ಠಲ ರಂಗಾ.

## ಬಾರೋ ನಮ್ಮಾ ಮನೆಗೆ

ಬಾರೋ ನಮ್ಮಾ ಮನೆಗೆ, ಗೋಪಾಲ ಕೃಷ್ಣ!

ಗೊಲ್ಲ ಬಾಲಕರನ್ನು ನಿಲ್ಲಿಸಿ ಹೆಗಲೇರಿ,
ಗುಲ್ಲು ಮಾಡದೆ ಮೊಸರೆಲ್ಲ ಕುಡಿದ ಕೃಷ್ಣ.

ಮೂಜಗವನೆಲ್ಲ ಬೊಜ್ಜೆ ಒಳಗೆ ಇಟ್ಟು,
ಗೆಜ್ಜೆಯ ಕಟ್ಟಿ ತಪ್ಪು ಹೆಜ್ಜೆಯನು ಇಕ್ಕುತಾ,
ಅಂಗನೆಯರ ವ್ರತ ಭಂಗವ ಮಾಡಿದಾ,
ರಂಗವಿಠ್ಠಲ ಭವ ಭಂಗವ ಮಾದುವಾ.

# ಬರುವುದೆಲ್ಲ ಬರಲೀ

ಬರುವುದೆಲ್ಲ ಬರಲೀ, ಸಿರಿ ಹರಿಯ ಕರುಣವಿರಲೀ!
ಗುರುಗಳ ಚರಣ ಸರೋರುಹ ಮಧುರಸ,
ತರತರ ತಪದೀ ಮೈಮರೆತಿರಲಿ.

ಸತಿಯ ಮತಿಯು ಕೆಡಲೀ, ಸುತರತಿಪತಿತರಾಗಿ ಬರಲೀ,
ಜೊತೆಯೊಳಿದ್ದ ಹಿತ ಪ್ರತಿಕೂಲನಾಗಲಿ,
ವತನ ಕೆಡುವ ಪ್ರಯತ್ನವು ಬರಲೀ.

ಅರಸು ಕರೆಸದಿರಲೀ, ಸತಿ ಸರಸ ಸುರಿಸದಿರಲೀ,
ನರಸಖನಿಗೆ ಭಾರ ಸಮರ್ಪಿಸಲಿ,
ವಿರಸ ಮಾಡಿ ಮನೆ ಮುರಿಸುತಬರಲೀ.

ಮಾನ ಮಾಡದಿರಲೀ ಜನರಪಮಾನ ಮಾಡಿ ನಗಲೀ,
ಜ್ಞಾನಹೀನನೆಂದ್ ಎನುತ ನಿಂದಿಸಲಿ,
ಶ್ರೀನಿಧಿ ಗೋಪಾಲವಿಠಲನು ತೆರಿಲೀ.

# ಬೆಳಗು ಝಾವದಿ ಬಾರೋ

ಬೆಳಗು ಝಾವದಿ ಬಾರೋ ಹರಿಯೇ,
ನಿನ್ನ ಚರಣ ತೊಳೆದು ಜಲವ ಪಾನ ಮಾಡುವೆ ನಾ.

ನೀರ ಒಳಗೆ ನಿಂತು ಕೊಂಬೇ,
ಬೆನ್ನ ಭರ ಹೊತ್ತರೆ ನಗುವಳೂ ನಿನ್ನ ರಂಭೆ.
ಮೊರೆ ತಗ್ಗಿಸಿದರೆನೆಂಬೇ,
ಜಗದಿ ನಾರಸಿಂಹನಾಗಿ ಪೂಜೆಯಾ ತುಂಬೇ.

ಬಲಿಯ ದಾನವ ಬೇಡಿದ್ಯಲ್ಲೋ,
ಕ್ಷಾತ್ರ ಕುಲವ ಸವರೇ ಕೊಡಲಿಯನು ಪಿಡಿದಿ ಅಲ್ಲೋ.
ಬಲವಂತ ನಿನಗಿದಿರು ಇಲ್ಲೋ,
ನಿನ್ನ ಲಲನೆಯಾ ತಂದು ರಾಜ್ಯವನಾಳಿದ್ಯಲ್ಲೋ.

ಗೋಕುಲದೊಳು ನೀ ಇದ್ದಿಯಲ್ಲೋ,
ಲೋಕ ಸಾಕುಮಾಡಲು ಬುದ್ಧ ರುಪನಾಡ್ಯಲ್ಲೋ.
ಯೇಕೆ ಹಯವನು ಏರಿದ್ಯಲ್ಲೋ,
ನಮ್ಮ ಸಾಕುಗಾ ಹಯವದನ ನೀನೆ ಬಲ್ಯಲ್ಲೋ.

# ಬೇವು ಬೆಲ್ಲದೊಳಿಡಲೇನು ಫಲಾ

ಬೇವು ಬೆಲ್ಲದೊಳಿಡಲೇನು ಫಲಾ?
ಹಾವಿಗೇ ಹಾಲೆರೆದೇನು ಫಲಾ?

ಕುಟಿಲವ ಬಿಡದಿಹ ಕುಜನರು ಮಂತ್ರವ,
ಪಠನೆಯ ಮಾಡಿದರೇನು ಫಲಾ?
ಸಟೆಯನ್ನಾಡುವ ಮನುಜರು ಮನದಲಿ,
ವಿಠಲನ ನೆನೆದರೆ ಏನು ಫಲಾ?

ಕಪಟತನದಿ ವಂಚಿಸುವ ಮನುಜರು,
ಜಪಗಳ ಮಾಡಿದರೆ ಏನು ಫಲಾ?
ಕುಪಿತ ಬುದ್ಧಿಯನು ತ್ಯಜಿಸದೆ ನಿತ್ಯದಿ,
ಉಪವಾಸ ಇದ್ದರೆ ಇನ್ನೇನು ಫಲಾ?

ಮಾತಾ–ಪಿತರನು ಬಳಲಿಸುವಾ ಮಗ,
ಯಾತ್ರೆಯ ಮಾಡಿದರೇನು ಏನು ಫಲಾ?
ಘಾತಕ ತನವನು ಬಿಡದೆ ನಿರಂತರ,
ಗಿತೆಯನೋದಿದರೇನು ಫಲಾ?

ಪತಿಯನು ನಿಂದಿಸಿ ಬೊಗಳುವ ಸತಿಯಳು,
ವ್ರತಗಳ ಮಾಡಿದರೇನು ಫಲಾ?
ಅತಿಥಿಗಲ್ ಎಡೆಯಲಿ ಭೆದವ ಮಾದುತ,
ಗತಿಯನು ಬಯಸಿದರೆ ಏನು ಫಲಾ?

ಹೀನ ಕೃತ್ಯಂಗಳ ಮಾಡುತ ನದಿಯಲಿ,
ಸ್ನಾನವ ಮಾಡಿದರೇನು ಫಲಾ?
ಶ್ರಿನಿಧಿ ಪುರಂದರವಿಠಲನ ನೆನೆಯದೆ,
ಮೌನವ ಮಾದಿದರೇನು ಫಲಾ?

# ಭಾಗ್ಯದ ಲಕ್ಷ್ಮಿ ಬಾರಮ್ಮಾ

ಭಾಗ್ಯದ ಲಕ್ಷ್ಮಿ ಬಾರಮ್ಮಾ,
ನಮ್ಮಮ್ಮ ಶ್ರಿ ಸೌಭಾಗ್ಯದ ಲಕ್ಷ್ಮಿ ಬಾರಮ್ಮಾ.

ಹೆಜ್ಜೆಯ ಮೇಲೇ ಹೆಜ್ಜಯನಿಕ್ಕುತ,
ಗೆಜ್ಜೆಯ ಕಾಲಿನ ನಾದವ ತೋರುತ,
ಸಜ್ಜನ–ಸಾಧೂ ಪೂಜೆಯ ವೇಳೆಗೆ,
ಮಜ್ಜಿಗೆ ಒಳಗಿನ ಬೆಣ್ಣೆಯಂತೆ.

ಕನಕ ವೃಷ್ಟಿಯ ಕರೆಯುತ ಬಾರೇ,
ಮನ ಕಾಮನೆಯ ಸಿದ್ಧಿಯ ತೋರೇ,
ದಿನಕರ ಕೋಟೀ ತೇಜದಿ ಪೊಳೆಯುವ,
ಜನಕರಾಯನಕುಮಾರಿ ಬೇಗ.

ಶಂಕೆ ಇಲ್ಲದ ಭಾಗ್ಯವ ಕೊಟ್ಟು,
ಕಂಕಣ ಕೈಯ್ಯ ತಿರುಹುತ ಬಾರೇ,
ಕುಂಕುಮಾಂಕಿತೇ ಪಂಕಜಲೋಚನೇ,
ವೆಂಕಟರಮಣನ ಬಿಂಕದ ರಾಣಿ.

ಅತ್ತಿತ್ತಗಲದೆ ಭಕ್ತರ ಮನೆಯೊಳು,
ನಿತ್ಯ ಮಹೋತ್ಸವ ನಿತ್ಯ ಸುಮಂಗಳ,
ಸತ್ಯವ ತೋರುತಾ ಸಾಧು–ಸಜ್ಜನರ,
ಚಿತ್ತದಿ ಹೊಳೆಯುವ ಪುತ್ಥಳಿ ಗೊಂಬೆ.

ಸಕ್ಕರೆ ತುಪ್ಪ ಕಾಲುವೆ ಹರಿಸಿ,
ಶುಕ್ರವಾರದ ಪುಜೆಯ ವೇಳೆಗೆ,
ಅಕ್ಕರೆಯುಳ್ಳ ಅಳಗಿರಿ ರಂಗನ,
ಚೊಕ್ಕ ಪುರಂದರವಿಠಲನ ರಾಣಿ.

# ಭಕ್ತಜನ ಪಾಲಕಾ

ಭಕ್ತಜನ ಪಾಲಕಾ, ಭಕ್ತಿ ಸುಖ ದಾಯಕಾ,
ಮುಕ್ತೇಶ ದೀನಬಂಧೋ, ಕೃಷ್ಣ.
ಯುಕ್ತಿಯಲಿ ನಿನ್ನಂಥ ದೇವರನು ನಾ ಕಾಣೇ,
ಸತ್ಯವತೀಸುತನೇ ಕಾಯೋ, ಕೃಷ್ಣ.

ಆನಂದತೀರ್ಥ ಮುನಿಯ ಪಾದಿಪದ ಸಂಗ,
ಆನಂದದಲಿ ನಿಲ್ಲಿಸೋ, ಕೃಷ್ಣ.
ದೀನಜನ ಮಂದಾರ ನೀನೆಂದು ನಂಬಿದೆನೋ,
ಸಾನುರಾಗದಲಿ ಕಾಯೊ, ಕೃಷ್ಣ.

ಕೆಟ್ಟ ಜನರ ಸಂಗ ಇಷ್ಟು ದಿನವೂ ಮಾಡಿ,
ಭ್ರಷ್ಟನಾಗಿ ಪೋದೇನೋ, ಕೃಷ್ಣ.
ಬೆಟ್ಟದೊಡೆಯನೇ ನಿನ್ನ ಮುಟ್ಟಿ ಭಜಿಸುವ ಭಾಗ್ಯ,
ಇಷ್ಟಗಳ ಎನಗೆ ಕೊಡಿಸೋ, ಕೃಷ್ಣ.

ಅಜ ಜನಕರಜ ವರದಾ, ಬುಜಗಶಯನನೇ ನಿನ್ನ,
ಭಜಿಪ ಭಗ್ಯವನೇ ಕೊಡಿಸೋ, ಕೃಷ್ಣ.
ನಿಜವಾಗಿ ನಿನ್ನೊರತು ಸಲಹುವರ ನಾ ಕಾಣೇ,
ವಿಜಯವಿಠ್ಠಲರೇಯನೇ, ಕೃಷ್ಣ.

# ಭಕ್ತರೆನ್ನುವ ಕಡಲ

ಭಕ್ತರೆನ್ನುವ ಕಡಲ ಉಕ್ಕಿ ಹರಿಯಿಸುವಂಥ,
ಹುಣ್ಣಿಮೇಯ ಚಂದಿರನು, ಸುಗುಣಗಳ ಮಂದಿರನು.
ಸಂತಸದ ಸೆಲೆ ಇಂದ ತುಂಬಿರುವ ರಮೆ ಅರಸ,
ಸಂತತವು ನಮ್ಮನ್ನು ಸಲಹುತಿರಲಿ.
ರಮೆ ಜೊನ್ನವಕ್ಕಿ ನೀನ್ ಅವಳ ಬೆಳದಿಂಗಳು,
ಖಳರೆಂಬ ಹಾವುಗಳ ಸುಡುವ ಕಡಲಿನ ಕಿಚ್ಚು,
ನೀನು ಸಜ್ಜನರೆಂಬ ದಾರಿದರ ನಿಲುದಾಣ,
ನಾರಾಯಣನೆ ನಿನಗೆ ನನ್ನ ನಮನಂ.

ಚೇತನಮಚೇತನಂ ಎಲ್ಲ ಬಗೇ ಏ ಜಗದ,
ನಿರ್ಮಿಸುತ ಪಾಲಿಸುತ ರಮಿಪ ಕಂಸಾರಿಗೆ,
ಮಾತು ಮನ ಮುಟ್ಟದಿಹಾ ಹಿರಿಯ ಸಂಸಾರಿಗೆ,
ರಮೆಯ ರಮಿಸುವ ಹರಿಗೆ ನನ್ನ ನಮನಂ.
ಎಲ್ಲ ಗುಣಗಳ ತುಂಬು ನೆಲಯು ತಾನಾದರು,
ಸಂತತವು ಇಂದಿರೆಯ ಅರೆಬಿರಿದ ನಗುಮುಗುಳಿ,
ನೊಡವೆರಸಿ ಬರುವಂಥ ಚೆಲುನೋಟದಾಟಕ್ಕೆ,
ಸಂತಸದಿ ನಲಿವಂಥ ಹರಿಗೆ ನಮನಂ.

ಎಲ್ಲವು ಅವನ ವಶ, ಅವನಾರ ವಶನಲ್ಲ,
ಎಲ್ಲವನು ಗೆದ್ದವನು, ಯಾರಿಗು ಸೋತಿಲ್ಲ,
ಎಲ್ಲವನು ಮಾಡಿದನು, ಯಾರವನ ಮಾಡಿಲ್ಲ,
ಅಂಥ ರಮೆ ಅರಸನಿಗೆ ನನ್ನ ನಮನಂ.
ಗುಣದೂರನಾದರು, ಸದ್ಗುಣ ಸಮೂಹದಿಂ,
ತುಂಬಿ ತುಳುಕುವ ಮೂರುತಿ, ಜಗದಾದಿ ಕಾರಣಂ,
ಶತ್ರುಗಳ ಗಡಣವನು ತರಿದ ವಿಕ್ರಮಶಾಲಿ,
ಓ ವಾಸುದೇವನೇ ನಿನಗೆ ನಮನಂ.

ಸ್ರಿಷ್ಠಿ ಆಗುವ ಮುನ್ನ ಕಡಲಲ್ಲಿ ನಲಿದವನು,
ಅರಿಗಳನು ತರಿದವನು ಸುರರಿಗಧಿನಾಯಕ,
ಬುಡವಿರದ ಅಜ್ಞಾನದಂತ್ಯವನು ತೋರಿಸುವ,
ಬಾಳ್ಗಡಲ ನಾವಿಕನೇ ನಿನಗೆ ನಮನಂ.
ಹುಟ್ಟು ಸಾವಿರದವಗೆ ಏ ಜಗದ ಜನಕನಿಗೆ,
ಯೆಳ್ಳ ದಾನವರನ್ನು ಸದ ಬಡಿದ ಪೌರುಷಕ್ಕೆ,
ಬ್ರಹ್ಮಾದಿ ಸುರರಿಂದ ಪೂಜೆ ಕೊಳುವಾತನಿಗೆ,
ಗರುಡವಾಹನ ನಿನಗೆ ನನ್ನ ನಮನಂ.

ಜಗದ ಕಾರಣರಾದ ಸುರರಿಗೂ ಕಾರಣ,
ಉದಿಸುತಿಹ ಸುರ್ಯನೊಲು ಭಾಸ್ಕರಾಕಾರಂ,
ಪೊಳುಗುಳದ ಜೇತಾರ ರಮೆ ಅರಸನೊಬ್ಬನೇ,

ಶರಣಾದ ಸಜ್ಜನರ ಸಲಹುವರಿ ದೈವಂ.
ತುಂಬು ನಲುವನು ಹೊತ್ತು ಸಂತತವು ಹರಿದುಬಹ,
ಇಂದಿರೆಯ ಚೆಲು ನೋಟ ಸವಿಯುತಿಹ ಮೂರುತಿಗೆ,
ನಾವು ಬಯಸಿದುದನ್ನು ಕೊಡಳೆಂದು ನಿಂತವಗೆ,
ಹರಿಯ ಪರಿಪೋರ್ಣನಿಗೆ ನನ್ನ ನಮನಂ.

ಇಂಥ ಗುಣಗಳ ನಿಲಯ, ಯೆಲ್ಲರಿಂದಲು ಹಿರಿಯ,
ಪರಮಪುರುಷನು ವಿಷ್ಣು ನಮ್ಮ ಕಾಪಾಡಲಿ.
ಅಂಥ ಪುರುಷೋತ್ತಮಗೆ ಸಿರಿಯನೆದೆಯಲಿ ಪೊತ್ತ,
ಶ್ರೀ ಹರಿಗೆ ಸರ್ವದಾ ನನ್ನ ನಮನಂ.

# ಭಕುತಿ ಸುಖವೋ

ಭಕುತಿ ಸುಖವೋ ರಂಗಾ, ಮುಕುತಿ ಸುಖವೋ,
ಭಕುತಿ ಸುಖವೊ, ಮುಕುತಿ ಸುಖವೊ, ಯುಕುತಿವಂತರೆಲ್ಲ ಹೇಳಿ.

ಭಕುತಿ ಮಾಡಿದ ಪ್ರಹ್ಲಾದ ಮುಕುತಿಯನ್ನು ಪಡೆದು ಕೊಂಡಾ,
ಮುಕುತಿ ಬೇಡಿದ ಧ್ರುವರಾಯ ಯುಕುತಿಯಿಂದ ಹರಿಯ ಕಂಡಾ.

ಭಕುತಿ ಮಾಡಿದ ಅಜಾಮಿಳನು ಅಂತ್ಯದಲ್ಲಿ ಹರಿಯ ಕಂಡಾ,
ಮುಕುತಿ ಬೇಡಿದ ಕರಿರಾಜಾ ದುರಿತಗಳನು ಕಳೆದುಕೊಂಡಾ.

ಭಕುತಿ–ಮುಕುತಿ ದಾತ ನಮ್ಮ ಲಕುಮಿ ಆರಸ ವಿಜಯ ವಿಠ್ಠಲ,
ಶಕುತನೆನುತ ತಿಳಿದು ನಿತ್ಯ ಭಕುತಿ ಇಂದ ಭಜನೆ ಮಾಡಿರೋ.

# ಭಳಿರೆ ಭಳಿರೆ ನಾರಸಿಂಹ

ಶ್ರೀ ರಮಣಿಕರ ಕಮಲ ಪೂಜಿತ,
ಚಾರು ಚರಣ ಸರೋಜಾ,
ಬ್ರಹ್ಮ ಸವೀರವಾಣಿ ಫಣೀಂದ್ರವೀಂದ್ರ,
ಭವೇಂದ್ರ ಮುಖವಿನುತಾ,
ನೀರಜ ಭವಾಂಡೋದಯ ಸ್ತಿಥಿ ಕಾರಣನೇ,
ಕೈವಲ್ಯ ದಾಯಕ, ನಾರಸಿಂಹನೇ,
ನಮಿಪೆ ಕರುಣಿಪುದೆಮಗೆ ಮಂಗಳವ.

ಭಳಿರೆ ಭಳಿರೆ ನಾರಸಿಂಹ ಮಹಸಿಂಹ,
ಮಲಮಲಮಲತವರ ವೈರಿ ಉರಿಮಾರೀ.

ಮಗನ ಗಾನಗಗಳಲ್ಲಾಡಿದ್ ಚತುರ್ದಶ,
ಜಗಜಗಜಗವೆಲ್ಲ ಕಂಪಿಸಿ ಕಂಬಾಹೇ,
ಹಗೆಹಗೆಹಗೆಬಲವ ದೆಶೆಗೆಡಿಸಿ ರೋಷಗಿಡಿ,
ಉಗು ಉಗು ಉಗುಳುತ್ತ ಬಂದ ನಾರಸಿಂಹ.

ಬಿಗಿಬಿಗಿಬಿಗಿದು ಹುಗ್ಗು ಗಂಟನೆ ಹಾಕಿ,
ಹೊಗೆಹೊಗೆಹೊಗೆಸುತ್ತಿ ಸರ್ವರಂಜೆ,
ನೆಗನೆಗನೆಗನೆಗೆದು ಕುಪ್ಪಣಿಸಿ ಅಸುರನ್ನ,
ಮಗುಮಗುಮಗು ಬೇಡಿಕೊಂಡ ನಾರಸಿಂಹ.

ಉಗುಉಗುಉಗರಿಂದ ಕ್ರೂರನ್ನ ಹೇರೊಡಲ,
ಬಗಬಗಬಗಬಗದು ರಕುತ ವನ್ನು,
ಉಗಿಉಗಿಉಗಿಉಗಿದು ಚೆಲ್ಲಿ ಕೊರಳಿಗೆ ಕರುಳ,
ತೆಗೆತೆಗೆತೆಗೆತೆಗೆದು ಇಟ್ಟ ನಾರಸಿಂಹ.

ಯುಗಯುಗಯುಗದೊಳಗೆ ಪ್ರಣತಾರ್ತಿಹರ ನೆಂದು,
ಝುಗರಝುಗಝುಗರಝುಗಿಪ ಮಕುಟ ತೂಹೇ,
ನಗುನಗುನಗುನಗುತ ಸುರರು ಗಗನದಿ ನೆರೆದು,
ಮಿಗಿಮಿಗಿಮಿಗಿಲೆನೆ ನಾರಸಿಂಹ.

ಒಂದೊಂದೊಂದೊಂದು ಮುನಿಗಳಿಗೆ ಒಲಿದು,
ಅಂದಂದಂದಂದಿಗಾಯಕ ಒಲಿದು,
ಅಂದಂದವಕಾವ ಚೋಳಂಗಿರಿ,
ಮಂದಿರನೆ ವಿಜಯ ವಿಠ್ಠಲ ನಾರಸಿಂಹ.

# ಭಾರವೇ ಭಾರತೀರಮಣಾ

ಭಾರವೇ ಭಾರತೀರಮಣಾ?
ನಿನಗೆ ನಾ ಭಾರವೇ ಭಾರತೀರಮಣಾ?

ಲಂಕಾ ನಾಥನ ಬಿಂಕವ ಮುರಿದು,
ಅಕಳಂಕ ಚರಿತನಾ ಕಿಂಕರನೆನಿಸಿದೇ.
ಪಂಕಜಾಕ್ಷಿಯೇ ಅಂಕಿತದುಂಗುರ ವಿತ್ತು,
ಶಂಕೆ ಇಲ್ಲದೆ ನೀ ಲಂಕೆಯ ದಹಿಸಿದೆ.

ಸೋಮಕುಲದಿ ನಿಸ್ಸೀಮ ಮಹಿಮನೆನಿಸಿ,
ಕಾಮ ಸಬಕನ ನಿರ್ಧೂಮ ಮಾಡಿದೆ,
ಕಾಮಿನಿ ಮೋಹಿಸೇ ಪ್ರೇಮದಿ ಸಲಹಿದೇ,
ಕಾಮರಸಾಖ್ಯನ ಸೇವೆಯ ಮಾಡಿದೆ.

ವೇದವ್ಯಾಸರ ಪೂಜೆಯ ಮಾಡಿ,
ಮೋದದಿಂದ ಬಹು ವಾದಗಳಾಡಿ,
ಅಧಮ ಶಾಸ್ತ್ರಗಳ ಹೋಮವ ಮಾಡಿ,
ವಿಜಯ ವಿಠ್ಠಲನಾ ಸೇವಕನೆನಿಸಿದೆ.

# ಭೂಷಣಕ್ಕೆ ಭುಷಣ

ಭೂಷಣಕ್ಕೆ ಭುಷಣ ಇದು ಭೂಷಣ,
ಶೇಶಗಿರಿವಾಸ ಶ್ರೀ ವರವೆಂಕಟೇಶಾ.

ನಾಲಿಗೇಗೆ ಭೂಷಣ ನಾರಾಯಣನ ನಾಮ,
ಕಾಲಿಗೆ ಭೂಷಣ ಹರಿ ಯತ್ರೆಯು.
ಆಲಯಕ್ಕೆ ಭೂಷಣ ತುಲಸಿ ವೃಂದಾವನ,
ವಿಶಾಲ ಕರ್ಣಕ್ಕೆ ಭೂಷಣ ವಿಷ್ಣು ಕಥೆಯು.

ದಾನವೆ ಭೂಷಣ ಇರುವ ಹಸ್ತಂಗಳಿಗೆ,
ಮಾನವೆ ಭೂಷಣ ಮಾನವರಿಗೆ.
ಜ್ನಾನವೆ ಭೂಷಣ ಮುನಿ-ಯೋಗಿವರರಿಗೆ,
ಮಾನಿನಿಗೆ ಭೂಷಣ ಪತಿ-ಭಕ್ತಿಯು.

ರಂಗನನ ನೋಡುವುದೆ ಕಂಗಳಿಗೆ ಭೂಷಣ,
ಮಂಗಳಾಂಗಗೆ ಮಣಿವ ಶಿರ ಭೂಷಣ.
ಶ್ರಿಂಗಾರ ತುಲಸಿಮಣಿ ಕೊರಳಿಗೆ ಭೂಷಣ,
ರಂಗವಿಠ್ಠಲಾ ನಿಮ್ಮ ನಾಮ ಅತಿ ಭೂಷಣ.

# ಬಿಡುವೇನೇನಯ್ಯಾ ಹನುಮಾ

ಬಿಡುವೇನೇನಯ್ಯಾ ಹನುಮಾ, ಸುಮ್ಮನೆ ಬಿಡುವೇನೇನಯ್ಯಾ.

ಬಿಡಿವೆನೇನೋ ಹನುಮ ನಿನ್ನ,
ಅಡಿಗಳಿಗೇ ಶಿರವಾ ಕಟ್ಟಿ,
ಒಡೆಯನಲ್ಲಿ ಜ್ಞಾನ ಭಕುತಿಯ,
ಕೊಡುವತನಕ ಸುಮ್ಮನೆ ನಿನ್ನ.

ಹಸ್ತವನ್ನು ಯೆತ್ತಿದರೇನು,
ಹಾರಾತ್ಕಾಲನು ಇಟ್ಟರೇನು,
ವೃತ್ಯನೂ ನಿನ್ನವನೂ ನಾನು,
ಹಸ್ತಿವರದನ ತೋರುವ ತನಕಾ.

ಹಲ್ಲು ಮುಡಿಯಾ ಕಚ್ಚಿದರೇನು,
ಅಂಜುವೇನೇ ನಿನಗೆ ನಾನು,
ಫುಲ್ಲನಾಭನಲ್ಲಿ ಯೆನ್ನ,
ಮನಸ ನೀ ನಿಲ್ಲಿಸ ತನಕ.

ಡೊಂಕು ಮೋರೇ ಬಾಲವ ತಿದ್ದೀ,
ಹುಂಕರಿಸಿದರೆ ಅಂಜುವನಲ್ಲ,
ಕಿಂಕರ ನಿನ್ನವನು ನಾನು,
ಪುರಂದರವಿಠಲನ ತೋರುವ ತನಕ.

## ಬಿನ್ನವಿಸಿ ಬೇಡಲೂ

ಬಿನ್ನವಿಸಿ ಬೇಡಲೂ ಬಿನ್ನಾಳ ಬಿಡಲಿಲ್ಲಾ,
ಬಂದೆನ್ನ ಮನದಲ್ಲಿ ಕಾಡುತಿಹ ಶಿವನೇ.

ಒಂದು ಕ್ಷಣ ನಿನ್ನಲ್ಲಿ ಒಂದು ಕ್ಷಣ ನನ್ನಲ್ಲಿ,
ಎನ್ನ ಮನ ಇಂಟಾಗಿ ಹರಿದಾಡುತಿಹುದೈಯ್ಯಾ.

ಅಂತರಂಗದಿ ಯೆಲ್ಲ ಕಾದುಬೆಂದಿಹುದು,
ನೀ ನಿಂತಾಗರೇ ಕ್ಷಣದಿ ಚಿಂತೆ ನಿಲ್ಲುವುದು.
ಕಂತುಹರ ನೀನೆನ್ನ ಬಾಳ ಬೆಳಕಾಗಿ ನಿಂದು,
ಇಂತು ಬೇಡುತಿಹೆ ನಿನ್ನಾ ದೇವಿಸುತ ನಾನಿಂದು.

# ಬ್ರಹ್ಮಾಂಡದೊಳಗೆ ಅರಸಿನೋಡಲು

ಬ್ರಹ್ಮಾಂಡದೊಳಗೆ ಅರಸಿನೋಡಲು ನಮ್ಮೂರೇ ವಾಸೀ,
ರಮೆಯ ಅರಸನು ಸರ್ವದ ವಾಸಿಪ ಸುಮ್ಮಾನದೀ ತಾನೂ.

ಜನನ-ಮರಣವಿಲ್ಲ ಉನ್ನುವ ದುಃಖವಿಲ್ಲ,
ಅನುಜ-ತನುಜರು ಅಲ್ಲಿಲ್ಲಾ, ಅನುಮಾನದ ಸೊಲ್ಲೇ ಇಲ್ಲ.

ನಿದ್ರೆಯು ಅಲ್ಲಿಲ್ಲಾ ರೋಗೋಪದ್ರಗಳಿಲ್ಲ,
ಕ್ಷುದ್ರ ಜನಂಗಳು ಅಲ್ಲಿಲ್ಲಾ, ಸಮುದ್ರ ಶಯನ ಬಲ್ಲಾ ಯೆಲ್ಲಾ.

ಸಾಧು ಜನರ ಕೂಡೇ ಮೋಕ್ಷಕೆ ಸಾಧನ ಮಾಡೇ,
ಮಾಧವ ಪುರಂದರವಿಠ್ಠಲ ರಾಯನು ಆದರಿಸುವನಲ್ಲೇ ಬಲ್ಲೇ.

# ಬ್ರಹ್ಮಸುತ ಕೇತುಗಣ

ಬ್ರಹ್ಮಸುತ ಕೇತುಗಣ ನಮಿಪೆ ನಾ ನಿನಗೆ,
ನಮಿಪೆ ನಾ ನಿನಗೆ, ನಮಿಪೆ ನಾ ನಿನಗೆ.

ವರ ಶಕ್ತಿ ಶೂಲಗದೆ ಖಟ್ವಾಂಗಗಳನೇ,
ಧರಿಸಿದ ವರ ಚತುರ್ಭುಜ ಧಾರನೇ.
ಅರುಣವರ್ಣದ ಹತ್ತು ಕುದುರೆಗಳ ಹೂಡಿದ,
ಸ್ವರ್ಣ ರಥದಿಂ ಸ್ವರ್ಣಗಿರಿಯ ಸುತ್ತುವವನೇ.

ಹಲವು ವರಗಳ ಬೇಡಿ ಫಲವೇನು ದೇವಾ,
ಕುಲದ ಕೀರ್ತಿಗೆ ಯೆನ್ನ ಕೇತುವೆನಿಸೈಯ್ಯಾ.
ಕುಲಪರ್ವತಗಳಿರುವ ಕಾಲಕ್ಕೂ ಅಳಿಯದೆ,
ನಿಲುವ ಉನ್ನತ ವಿಫುಲ ಯಶವನೀಡೈಯ್ಯಾ.

# ಬುದ್ಧಿ ಪೇಳಬಾರದೇನೆ

ಬುದ್ಧಿ ಪೇಳಬಾರದೇನೆ ಗೋಪ್ಯಮ್ಮ ಕೃಷ್ಣಗೆ?
ಮುದ್ದು ಮಾಡೋದ್ಯಾಕೆ ಜಾಣೆ ಬಾಲಕೃಷ್ಣಗೆ?

ಬುದ್ಧಿ ಪೇಳದಿದ್ದಕಾರಣ, ಸದ್ದು ಮಾಡದೆ ಮುದ್ದು ಕೃಷ್ಣನು,
ಕದ್ದು ಬೆಣ್ಣೆಯ ಮೆದ್ದೂ ಮನೆಯೊಳಗಿದ್ದ ಬಾಂಡಗಳ್ ಒದ್ದು ಕೆಡಗಿದಾ.

ಮಿಕ್ಕ ಮಕ್ಕಳಂದದಿ ಕೃಷ್ಣನು ಚಿಕ್ಕವನೇನೇ?
ಅಕ್ಕರದಿ ಕುಚಗಳ ಪಿಡಿದು ಸಿಕ್ಕದೋಡುವನೇ?
ದಕ್ಕದಿರುವ ರಕ್ಕಸರುಗಳ ಸೊಕ್ಕು ಮುರಿದಾ ಸಿಕ್ಕುಗಾರ,
ಕೇಳಕ್ಕ ಕೃಷ್ಣಗೆ ತಕ್ಕ ನೀತಿಯ ಧಕ್ಕನೆ ಪೇಲ್ ಧಿಕ್ಕರಿಸೀನೀ.

ಸೀರೆ ದಳದಾಮ್ಯಾಲಿಟ್ಟು ನಿರಿನಾಟಗಳಾ ಮಾಡೇ,
ವಾರಿಯೊಳಿರಲು ಚೋರ ನಿನ್ನ ಕಿಶೋರ ಅಲ್ಲಿಹನೇ.
ಸೀರೆಗಳನು ಅಪಹಾರ ಮಾಡಿದ ಜಾರನಾ ಚೋರನಾ ಇವನ,
ಅಪಾರ ಲೂಟಿಗಳಾ ನಾವು ಪೇಳಲಲವೇ ನೀರಜಾಕ್ಷಿ.

ಕೇಳು ಕೃಷ್ಣನ ದುಡುಕುಗಳನ್ನು ವಿಶಾಲ ನೇತ್ರೆಯೊಳೇ,
ಜಾಲಮಾಡೂದ್ಯಾಕೆ ಈ ಪರಿ ಲೋಲಹಾರಣೇ,
ಬಾಲಕನ ಘನದಾಳಿಗಳೀಗ ತಾಳಲಾರದೆ ಕಾಲಿಗೆರಗುವೆ,
ಪೇಳಿದಾನುಡಿ ಆಲಾಲಿಸಿ ಈಚಾಳಿ ಬಿಡಿಸೇ ಗೋಪಾಲವಿಠಲನಾ.

## ಬುದ್ಧಿಮಾತು ಹೇಳಿದರೆ ಕೇಳಬೇಕಮ್ಮಾ

(ಮಗಳೆ!) ಬುದ್ಧಿಮಾತು ಹೇಳಿದರೆ ಕೇಳಬೇಕಮ್ಮಾ,
ಮನದಿ ಶುದ್ಧಳಾಗಿ ಗಂಡನೊಡನೆ ಬಾಳಬೇಕಮ್ಮಾ.

ಅತ್ತೆ-ಮಾವಗಂಜಿ ಕೊಂಡು ನಡೆಯ ಬೇಕಮ್ಮಾ,
ಚಿತ್ತದೊಲ್ಲಭನ ಅಕ್ಕರೆಯನ್ನು ಪಡೆಯ ಬೇಕಮ್ಮಾ.
ಹೊತ್ತು-ಹೊತ್ತಿಗೆ ಮನೆಯ ಕೆಲಸವನು ಮಾಡ ಬೇಕಮ್ಮಾ,
ಹತ್ತು ಮಂದಿ ಒಪ್ಪುವ ಹಾಗೇ ನುಡಿಯ ಬೇಕಮ್ಮಾ.

ಉಟ್ಟು ಕೊಂಬುವ ನಂಟರೊಡನೇ ದ್ವೇಶ ಬೇಡಮ್ಮಾ,
ಅಟ್ಟು ಉಂಬುವ ಕಾಲದಲ್ಲಿ ಆಟ ಬೇಡಮ್ಮಾ.
ಹಟ್ಟಿ ಬಾಗಿಲಲ್ಲಿ ಬಂದು ನಿಲ್ಲ ಬೇಡಮ್ಮಾ,
ಕಟ್ಟಿ ಆಳುವ ಗಂಡನೊಡನೇ ಸಿಟ್ಟು ಬೇಡಮ್ಮಾ.

ನೆರೆಹೊರಯವರಿಗೆ ನ್ಯಾಯವನ್ನು ಹೇಳ ಬೇಡಮ್ಮಾ,
ಬರುವ ಕೋಪ-ಮತ್ಸರವನ್ನು ಮಾಡ ಬೇಡಮ್ಮಾ.
ಪರರ ನಿಂದಿಪ ಹೆಂಗಳೊಡನೆ ಸೇರ ಬೇಡಮ್ಮಾ,
ಗುರು ಪುರಂದರವಿಠ್ಠಲನ್ನ ಮರೆಯ ಬೇಡಮ್ಮಾ.

## ಬುಧನೆನಿಸೋ ಎನ್ನಾ ಬುಧನೇ

ಬುಧನೆನಿಸೋ ಎನ್ನಾ ಬುಧನೇ,
ವದನದಿ ಸವಿ ನುಡಿ ನುಡಿಸೋ ಘನ್ನಾ.

ಸ್ವರ್ಣಕಾಂತಿಯ ಚೆಲುವ ಮಂಮಥಕಾಯಾ,
ಇಂದು ನಂದನ ಬಾರೋ ಇಂದಿರೇಶನ ಪ್ರಿಯಾ.

ಹತ್ತಾರು ಬಣ್ಣದ ಹತ್ತು ಕುದುರೆ ಹೂಡಿ,
ಹತ್ತಿ ಮಹಾರಥ ಸುತ್ತುವೆ ಹೊನ್ನ ಬೆಟ್ಟ,
ಅಸಿಖೆಡಗದಾ ಭಯ ಭೂಶಿತ ವರಹಸ್ತಾ,
ಎಸೆವ ಪೀತಾಂಬರ ಮರಕತ ಹಾರಯುಕ್ತಾ.

## ಚಂಚಲಿಸದಿರೂ

ಚಂಚಲಿಸದಿರೂ ಚತುರನಾಗೋ ಮನವೆ,
ವಂಚನಿಲ್ಲದೆ ಹರಿಗೆ ಅರ್ಪಿಸೋ ಮನವೆ.

ಆರು ನಿನ್ನವರೆಂಬಿ ಅವರ ದಲುವರೋ ಮುನ್ನ,
ಭೂರಿ ಸಂಚಿತ ಸಂಪದೆರವಾಗ್ವದೋ.
ಜಾರುತಿದೆ ಆಯುಶ್ಯ ಕ್ಷಣಲವ ಎನಗೊಡದೆ,
ನಾರಸಿಂಹನ ನಂಬೋ ನಿಷ್ಠೆಯಲಿ ಮನವೆ.

ಅಲ್ಪಸುಖಕಾಗಿ ನೀ ಅನೇಕ ಸುಖ ಮರೆವರೇ,
ಕಲ್ಪ-ಕಲ್ಪಕೇ ನಿರಯ ಉಣಿಸ ಬಹುದೊ.
ಅಲ್ಪರುಪದೇಶದಲಿ ಬ್ರಾಂತನಾಗದೇ,
ಶೇಶ ಕಲ್ಪನ್ನ ಮೊರೆ ಹೋಗೂ ಮರೆಯದಲಿ ಮನವೆ.

ನಿನ್ನಿಂದ ಭವ ಬಂಧನ ನಿನ್ನಿಂದ ಮೋಚನ,
ನಿನ್ನಿಂದ ಪ್ರಸನ್ನೆ್ವಂಕಟೆಶನೊಲುಮೇ,
ಎನ್ನದಣಿಸದಿರಿಂದು ಇದರಿಂದ ತಪ್ಪಿದರೇ,
ಘನ್ನ ಗುರು ಮಧ್ವೇಶನಾಣೆ ನಿನಗೆ ಗುರು.

## ಚಂದವ ನೋಡಿರೇ

ಚಂದವ ನೋಡಿರೇ ಗೋಕುಲ ನಂದನ ಮೂರುತಿಯಾ,
ಅಂದುಗೇ ಪಾಡಗ ಗೆಜ್ಜೆಯ ಧರಿಸಿ,
ಧೀಂಧೀಂಧಿಮಿಕೆಂದು ಕುಣಿಯುವ ಕೃಷ್ಣನಾ.

ಕೊರಳ ಪದಕ ಹಾರಬಿಹಿದು, ತರಳರೆಲ್ಲರ ಕೂಡಿಕೊಂಡು,
ಕುರುಳುಗೂದಲು ಅರಳೆಲೆಯು,
ಥಳಥಳಥಳಿಸುತ ಮೆರೆವಾ ಕೃಷ್ಣನಾ.

ಬಲುಸ್ಥೈರ್ಯದಿಂದಲಿ ನಲಿವಾ, ಪುರಂದರವಿಠಲರಾಯಾ,
ಫಲವು ಸುಖವಾ ನಮಗಿಟ್ಟಾ,
ಜಲಜಲೋಚನ ಬಾಲಕೃಷ್ಣನಾ.

# ಚಂದ್ರಾ ಗುಣಸಾಂದ್ರಾ

ಚಂದ್ರಾ ಗುಣಸಾಂದ್ರಾ ರಾಘವೇಂದ್ರಾ,
ಸದ್ವೈಷ್ಣವ ಗುರುದಕೆ.

ಶ್ರೀ ರಘುರಾಮ ಪದಾಂಬುಜ ಬೃಂದಾ,
ಮಾರುತಿ ಮತ ಶುಭ ವಾರಿನಿಧಿಯೇ ಪೂರ್ಣಾ.

ವರದ ಗೋಪಾಲವಿಠಲನ ವಾರುತೆಯೇ,
ಹರುಷ ಪಡುವ ಹರಿ ಭಕುತ ಚಕೋರಗೇ.

# ಚಂದ್ರಾ ವಿಭೂಷಣ

ನಮಸ್ತೇ ಪ್ರಾಣೆಶ ಪ್ರಣತವಿಭವಾಯ ಅವನಿಮಗಾಹ,
ನಮಃ ಶ್ರೀಮನ್ ರಾಮಪ್ರಿಯತಮ ಹನೂಮನ್ ಗುರುಗುಣಾ,
ನಸ್ತುಭ್ಯಮ್ ಭೀಮ ಪ್ರಬಲತಮ ಕೃಷ್ಣೇಶ್ಚ ಭಗವನ್,
ನಮಃ ಶ್ರೀಮನ್ ಮಧ್ವ ಪ್ರದಿಶ ಸುದ್ರಿಶಂನೋ ಜಯಜಯಾ.

ಚಂದ್ರಾ ವಿಭೂಷಣ ಚಂದ್ರ ಪುರೋಗ್ಯೈರ್, ವಂದ್ಯ ಪದಾಮ್ ಗುರುಹಮ್ ಭವ ಮಾನಮ್,
ಆನಂದ ತೀರ್ಥ ಮಹಾಮುನಿ ರಾಜಮ್, ಗೋವಿಂದ ಭಕ್ತ ಶಿಖಾಮಣಿ ಮೀರೇ.

ಪ್ರಾಣ ಗಣಾಧಿಪ ಕಿಂಭುವಿ ವಾಣೀ ಪ್ರಾಣ ಸಮಂದಯ ಯಾಹ್ಯ ವಹೀರ್ಣಮ್,
ಆನಂದ ತೀರ್ಥ ಮಹಾಮುನಿ ರಾಜಮ್, ಗೋವಿಂದ ಭಕ್ತ ಶಿಖಾಮಣಿ ಮೀರೇ.

ಶ್ರೀ ಹನುಮಂತ ಅನಂತ ಭುಜಿಶ್ಯಮ್ ಲಂಘಿತ ಸಿಂಧು ಮುದಸ್ತ ಮಹೀರ್ತಮ್,
ಆನಂದ ತೀರ್ಥ ಮಹಾಮುನಿ ರಾಜಮ್, ಗೋವಿಂದ ಭಕ್ತ ಶಿಖಾಮಣಿ ಮೀರೇ.

ಭೀಶಣ ದುಷ್ಟ ಕುಲಾಂತಕ ಭೀಮಮ್ ಭೀಮಮಭೀತಿದ ನಿಶ್ಕಜನಾನಾಮ್,
ಆನಂದ ತೀರ್ಥ ಮಹಾಮುನಿ ರಾಜಮ್, ಗೋವಿಂದ ಭಕ್ತ ಶಿಖಾಮಣಿ ಮೀರೇ.

ಶಾಂತಮನಂತನೆ ಶಾಂತ ಸಮಾಹ್ವೇ ಶಾಂತ ಕುಲೇಖಿತು ಲೇಖಿಲ ಜಾತಮ್,
ಆನಂದ ತೀರ್ಥ ಮಹಾಮುನಿ ರಾಜಮ್, ಗೋವಿಂದ ಭಕ್ತ ಶಿಖಾಮಣಿ ಮೀರೇ.

## ಚಂದ್ರಚೂಡ ಶಿವಶಂಕರ

ಚಂದ್ರಚೂಡ ಶಿವಶಂಕರ ಪಾರ್ವತಿ ರಮಣನೇ ನಿನಗೇ ನಮೋ ನಮೋ.
ಸುಂದರ ಮೃಗವರ ಪಿನಾಕ ದನುಕರ ಗಂಗಾ ಶಿರಗಜ ಚರ್ಮಂಬರಧರ.

ನಂದಿವಾಹನಾ ನಂದದಿಂದ ಮೂಜಗದಿ ಮೆರೆವನೂ ನೀನೇ,
ಅಂದು ಅಮೃತಘಟ ದಿಂದುದಿಸಿದ ವಿಷ ತಂದು ಭುಜಿಸಿದವ ನೀನೇ,
ಕಂದರ್ಪನ ಕ್ರೋಧದಿಂದ ಕಣ್ತೆರೆದು ಕೊಂದ ಉಗ್ರನೂ ನೀನೇ,
ಇಂದಿರೇಶ ಶ್ರೀ ರಾಮನ ಪಾದವ ಚಂದದಿ ಪೊಗಳುವ ನೀನೇ.

ಬಾಲಮೃಕಂಡಜನ ಕಾಲನು ಎಳೆವಾಗ ಪಾಲಿಸಿದವನು ನೀನೇ,
ವಾಲಯದಿ ಕಪಾಲ ಪಿಡಿದು ಭಿಕ್ಷವ ಬೇಡೋ ದಿಗಂಬರನು ನೀನೇ,
ಕಾಲಕೂಟವನು ಪಾನ ಮಾಡಿದ ನೀಲಕಂಠನು ನೀನೇ,
ಜಾಲಮಾಡಿದಾ ಗೋಪಾಲನೆಂಬ ಹೆಣ್ಣಿಗೆ ಮರುಳಾದವನು ನೀಣೇ.

ಧರೆಗೆ ದಕ್ಷಿಣಕಾವೇರಿ ತೀರ ಕುಂಭ ಪುರವಾಸನೂ ನೀನೇ,
ಕೊರಳೊಳು ರುದ್ರಾಕ್ಷಿ ಭಸ್ಮವ ಧರಿಸಿದ ಪರಮ ವೈಷ್ಣವ ನೀನೇ,
ಕರದಲಿ ವೀಣೆಯ ನುಡಿಸುವ ನಮ್ಮ ಉರಗ ಭೂಷನನು ನೀನೇ,
ಗರುಡಗಮನ ಶ್ರೀ ಪುರಂದರವಿಠಲಗೇ ಪ್ರಾಣಪ್ರಿಯನು ನೀನೇ.

# ಚಂದ್ರಮನೇ ಕಣ್ಮನ ಕಾಹ್ಲಾದಕರನೇ

ಚಂದ್ರಮನೇ ಕಣ್ಮನ ಕಾಹ್ಲಾದಕರನೇ,
ಇಂದ್ರನಪೋಲ್ವ ಸಂಪದ ನೀಡುವಾ.

ಮನಸಿಜ ಜನಕನ ಮನಸಿಲುದಿಸಿ ನಮ್ಮಾ,
ಮನಸಿಗೆ ನೆಮ್ಮದಿ ತರುವನೇ ಬಾ.
ಮನಸಿನ ದೇವಗೆ ಶಿರೋಮಣಿ ತಾರೆಯರ,
ಮನಸೆಳೆವಾ ಪ್ರನಯದರಸೇ ಬಾ.

ಚಿನ್ನದ ಬೆಟ್ಟವ ತಿರುಗುವನೇ ಬಾ,
ಚೆನ್ನಿಗನೇ ಬಾ, ಚಂದಮಾಮನೇ ಬಾ.
ಚೆನ್ನೆ ಮಹ ಲಕುಮಿ ಮಾತೆ ಅಣ್ಣನೇ ಬಾ,
ಚೆನ್ನಾಗಿ ಸೊದೆಯನು ಸೂಸುವನೇ ಬಾ.

# ಚಿಂತೆಯಾಕೇ ಮಾಡತಿದ್ದೀ

(ಪ್ರಾಣೀ) ಚಿಂತೆಯಾಕೇ ಮಾಡತಿದ್ದೀ ಚಿನ್ಮಯನಿದ್ದಾನೇ,
ಚಿಂತಾರತ್ನವೆಂಬೋ ಅನಂತನಿದ್ದಾನೇ.

ಎಳ್ಳು ಮೊನೆಯಾ ಮುಳ್ಳು ಕೊನೆಯಾ, ಹೊಳ್ಳು ಬಿಡದೇ ಒಳಗೆ–ಹೊರಗೆ,
ಎಲ್ಲ ಠಾವಿನಲ್ಲಿ ಲಕುಮೀನಲ್ಲನಿದ್ದಾನೇ.

ಹಿಂದೆ ನಿನ್ನಾ ಸಲಹಿದರ್ ಯಾರೋ, ಮುಂದೆ ನಿನ್ನಾ ಪೊಲುವವರ್ ಯಾರೋ,
ಅಂದಿಗಿಂದಿಗೆಂದಿಗೂ ಗೋವಿಂದನಿದ್ದಾನೇ.

ಗೋಪ್ತಾ ತ್ರಿಜಗದ್ ವ್ಯಾಪ್ತಾ ಭಜಕರ ಆಪ್ತನೆನಿಸೀ ಸ್ತಂಭದಲ್ಲಿ,
ಪ್ರಾಪ್ತನಾದ ಪ್ರಹ್ಲಾದನ ಪರಮಾಪ್ತನಿದ್ದಾನೇ.

ಮುಕ್ಕಣ್ಣ ದೇವರ್ಕಳಿಗೇ ಸಿಕ್ಕಿದ್ದ ಸೆರೆಯನ್ನು ಬಿಡಿಸಿ,
ಚಿಕ್ಕವರಿಗೆ ಅಚಲ ಪದವಿಯ ದಕ್ಕಿಸಿದ್ದಾನೇ.

ನಾನು ನನ್ನದು ಯೆಂಬುದ ಬಿಟ್ಟು ಹೀನವಿಷಯಂಗಳನು ಜರಿದು,
ಜ್ಞಾನಗಮ್ಯ ಕಯೋೇಯೆನಲೂ ಪೂರ್ಣನಿದ್ದಾನೇ.

ಸುತ್ತ ಬಂದ ದುರಿತಗಳನು ಕತ್ತರಿಸಿ ಕಡಿಧಾಕು ವಂಥ,
ಹೆತ್ತ ತಾಯಿ–ತಂದೆ ತವರೂ ಹತ್ತಿರಿದ್ದಾನೇ.

ಬಲ್ಲಿದ ಭಜಕರ ಹೃದಯದಿ ನಿಂತು ಮುದ್ದು ಪುರಂದರವಿಠಲ ನಿಂತು,
ಸೊಲ್ಲು–ಸೊಲ್ಲಿಗವರ ಬಯಕೆ ಸಲಿಸುತಿದ್ದಾನೇ.

# ಚೋರಗೆ ಚಂದ್ರೋದಯ ಸೊಗಸುವುದೇ

ಚೋರಗೆ ಚಂದ್ರೋದಯ ಸೊಗಸುವುದೇ, ಜಾರಗೆ ಸೂರ್ಯೋದಯ ಸೊಗಸುವುದೇ,
ಶ್ರೀ ರಮಣನ ಕಥೆಯು ಕಳ್ಳಗೆ ಮೆಚ್ಚುವುದೇ!
ನಾರಿಗೆ ನಯವಿಲ್ಲದ ಚೆಲುವಿಕೆಯು, ಹರಿಸ್ಮರಣವಿಲ್ಲದ ಹಾಡಿಕೆಯು,
ಅರಣ್ಯ ರೋದನಾ, ಪುರಂದರವಿಠಲಾ!

# ದಾರಿಯ ತೋರೋ ಗೋಪಾಲಾ

ದಾರಿಯ ತೋರೋ ಗೋಪಾಲಾ, ವಾರಿಜನಾಭಶ್ರೀ ವೈಕುಂಠ ಲೋಲಾ!

ಸಿಕ್ಕಿದೆ ಭವ-ಪಾಶದೊಳಗೆ ನಾ ಲೆಕ್ಕವಿಲ್ಲದ ಜಂತುಗಳಿಗೆ,
ದಿಕ್ಕೊಬ್ಬರಿಲ್ಲ ಎನಗೆ, ಇಂಥ ದಿಕ್ಕೇಡಿತನ ಕಳೆದು ಕರುಣಿಸು ಎನಗೆ.

ಗಜರಕ್ಷಕನು ನೀನೆಂದು ದೇವಾ, ಅಜ-ರುದ್ರಾದಿಗಳಂದು,
ನಿಜವಾಗಿ ಪೊಗಳಿದರಂದು, ನಿನ್ನ ಸುಜನರ ನೋಡ್ಯೆಯ್ಯಾ ಕೇಳಿದೆ ನಾನಿಂದು.

ವರದ ಶ್ರೀಹಯವದನನೇ ಬಾರೈ ನೀ, ಕರೆದೆನ್ನ ದಾರಿಯ ತೊರೈ,
ಪರಮ ಭಕ್ತರೊಳ್ ಇನ್ಯಾರೈ, ಚೆಲುವ ಪರಪುರುಷ ನೀನಲ್ಲದೆ ಇನ್ಯಾರೈ.

# ಡಂಗುರಾವಾ ಸಾರೀ ಹರಿಯಾ

ಡಂಗುರಾವಾ ಸಾರೀ ಹರಿಯಾ ಡಿಂಗರೀಗರೆಲ್ಲರೂ,
ಮಂಡಲಕ್ಕೆ ಪಂಡುರಂಗವಿಠ್ಠಲ ಪರ ದೈವವೆಂದೂ.

ಒಡಲಜಾ ಘಟೆಯಾ ಮಾಡೀ ನುಡಿವ ನಾಲಿಗೆಯ ಪಿಡಿದು,
ಬಿಡದೆ ಥಣಾರ್-ಥಣರ್ ಎಂದು ಬಡಿದು ಚಪ್ಪಾಳಿಕ್ಕುತಾ.

ಹರಿಯು ಮುಡಿದಾ ಹೂವ ಹಾರೀ ಪಾನದಲ್ಲಿ ಹೊತ್ತುಕೊಂಡು,
ಹರುಷದಿಂದಾ ಆಡಿ-ಪಾಡಿ ಕುಣಿದು ಚಪ್ಪಾಳಿಕ್ಕುತಾ.

ಇಂತು ಸಕಲ ಲೋಕಕ್ಕೇ ಲಕ್ಷ್ಮೀಕಾಂತನಲ್ಲದಿಲ್ಲ ವೆಂದೂ,
ಸಂತತಮ್ ಭಜಿಸುತಾ ನಿಶ್ಚಿಂತ ಪುರಂದರವಿಠಲನೆಂದೂ.

ಡಂಗುರಾವಾ ಸಾರೀ ಹರಿಯಾ ಡಿಂಗರೀಗರೆಲ್ಲರೂ,
ಮಂಡಲಕ್ಕೆ ಪಂಡುರಂಗವಿಠ್ಠಲ ಪರ ದೈವವೆಂದೂ.

## ದಾಸ ದಾಸರ ಮನೆಯ ದಾಸಾನುದಾಸಾ

ದಾಸ ದಾಸರ ಮನೆಯ ದಾಸಾನುದಾಸಾ,
ಶ್ರೀಶ ಶ್ರೀರಂಗಾ ನಿಮ್ಮ ಮನೆಯ ದಾಸಾ.

ಶಂಕು ದಾಸರ ಮನೆಯ ಮಂಕು ದಾಸ ನಾನ್ಯೆಯಾ,
ಮರುಳು ದಾಸಾ.
ಸಂಕೀರ್ತನೇಯ ಮಾಡಿ ನೆನೆವ ಭಕ್ತರ ಮನೆಯ,
ಬಿಂಕದಿ ಬಾಗಿಲ ಕಾಯ್ವ ಬಡ ದಾಸ ನಾನ್ಯೆಯ್ಯ.

ಕಾಳಿದಾಸರ ಮನೆಯ ಕೀಳು ದಾಸ ನಾನ್ಯೆಯ್ಯ,
ಆಳು ದಾಸಾ, ಮೂಲ ದಾಸಾ.
ಫಾಲಾಕ್ಷ ಸಖ ನಿನ್ನ ಭಜಿಪ ಭಕ್ತರ ಮನೆಯ,
ಆಳಿನಾ ಮನೆಯ ಅಡಿ ದಾಸ ನಾನ್ಯೆಯ್ಯ,
ಆಳಿನಾ ದಾಸನ ಅಡಿ ದಾಸ ನಾನ್ಯೆಯ್ಯ.

ಹಲವು ದಾಸರ ಮನೆಯ ಹೊಲೆ ದಾಸ ನಾನ್ಯೆಯ್ಯ,
ಕುಲವಿಲ್ಲದ ದಾಸ ಕುರುಬ ದಾಸಾ.
ಛಲದಿನಿನ್ನ ಭಜಿಸುವರ ಮನೆಯ ಮಾದಿಗ ದಾಸ,
ಸಲೆಮುತ್ತಿ ಪಾಲಿಸೆನ್ನ ಒಡೆಯ ಕೆಷವ ನಿನ್ನ,
ದಾಸ ದಾಸರ ಮನೆಯ ದಾಸಾನುದಾಸಾ,
ಶ್ರೀಶ ಶ್ರೀರಂಗಾ ನಿಮ್ಮ ಮನೆಯ ದಾಸಾ.

# ದಾಸನಾಗುವುದಕೇ ಏಸು ಜನ್ಮದ ಸುಕೃತ

(ನಿನ್ನ) ದಾಸನಾಗುವುದಕೇ ಏಸು ಜನ್ಮದ ಸುಕೃತ.
ಭಾಸುರ ರವಿಕೋಟಿ ಶ್ರೀಷ ಗುಣವಂತ,
ನಿನ್ನ ದಾಸನಾಗುವುದಕೇ ಏಸು ಜನ್ಮದ ಸುಕೃತ.
ಶ್ರೀಷ ಗುಣವಂತ ನಾಶರಹಿತ,
ನಿನ್ನ ದಾಸನಾಗುವುದಕೇ ಏಸು ಜನ್ಮದ ಸುಕೃತ.
ನಿನ್ನ ದಾಸರ ದಾಸ್ಯವ ಲೇಸಾಗಿ ಕೊಡು ಕಂಡ್ಯ, ಪುರಂದರವಿಠಲಾ!

# ದಾಸರೆಂದರೇ ಪುರಂದರದಾಸರ್ಯೆಯ್ಯಾ

ದಾಸರೆಂದರೇ ಪುರಂದರದಾಸರ್ಯೆಯ್ಯಾ,
ವಾಸುದೆವ ಕೃಷ್ಣನ್ನ ಸೂಸಿ ಪೋಜಿಸುವಾ.

ದ್ರಾಸ ಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕೂ,
ದಾಸನೆಂದು ತುಳಸಿಮಾಲೆ ಧರಿಸೀ,
ಬೇಸರಿಲ್ಲದೆ ಅವರ ಕಾಡಿ–ಬೇಡಿ ಬಳಲಿಸುತಾ,
ಕಾಸು ಗಳಿಸುವ ಪುರುಷ ಹರಿದಾಸನೇ?

ಡಂಭಕದಿ ಹರಿ ಸ್ಮರಣೆ ಮಾಡಿ ಜನರ ಮುಂದೆ,
ಸಂಭ್ರಮದಿ ತಾನುಂಬ ಊಟ ಬಯಸಿ,
ಅಂಬುಜೋದ್ಭವ ಪಿತನ ಆಗಮಗಳರಿಯದೇ,
ತಂಬೂರಿ ಮೀಟದವ ಹರಿದಾಸನೇ?

ನೀತಿ ಅಲ್ಲವನರಿತು ನಿಗಮ ವೇದ್ಯನ ನಿತ್ಯ,
ವಾತ–ಸುತ ನಲ್ಲಿಹನ ವರ್ಣಿಸುತಲಿ,
ಗೀತ–ನರ್ತನ ದಿಂದ ಕೃಷ್ಣನ್ನ ಪೂಜಿಸುವ,

# ದಯವಿರಲಿ ದಯವಿರಲಿ ದಾಮೋದರಾ

ದಯವಿರಲಿ ದಯವಿರಲಿ ದಾಮೋದರಾ,
ಸಯವಾಗಿ ಬಿಡದೆನ್ನ ಸಾಕು ಶ್ರೀ ಕೃಷ್ಣಾ.

ಹೋಗಿ ಬರುವೇನೈಯ್ಯ ಹೋದಹಾಗೆಲ್ಲ,
ಸಾಗುವಾನಲ್ಲ ನಾ ನಿನ್ನ ಬಿಟ್ಟು,
ತೂಗಿ ತೊಟ್ಟಿಲು ಕೊನೆಗೆ ಸ್ಥಳದಲ್ಲಿ ನಿಲ್ಲುವದು,
ಹ್ಯಾಗೆ ನೀ ನಡದಂತೆ ಹಾಗೆ ನಾ ನಡಕೊಂಬೆ.

ಇದ್ದಲ್ಲೆ ಎನ್ನನ್ನುದ್ಧರಿಪ ಶಕ್ತಿ,
ಅಸಾಧ್ಯ ನಿನಗೆಂದು ಬಂದವನಲ್ಲ,
ನದ್ಯಾದಿ ಕ್ಷೇತ್ರ ಮೂರ್ತಿಗಳಲ್ಲಿ ನಿಜ ಜ್ಞಾನ,
ವೃದ್ಧ ಜನರ ಹುಡುಕಿ ನಿನ್ನ ತಿಳಿಯಲು ಬಂದೆ.

ಯೆನಗೆ ಆವದು ಬಲ್ಲೇ ಎಲ್ಲೆಲ್ಲಿ ಪೋದರು,
ಕ್ಷಣ ಬಿಡದೆ ನಿನ್ನ ನೋಳ್ಪ ಜ್ಞಾನವ ಕೊಡೋ,
ಚಿನುಮಯ ಮೂರುತಿ ಗೋಪಾಲವಿಠ್ಠಲಾ,
ಘನಕರುಣಿ ಮಧ್ವ ಮುನಿ ಮಂದಿರ ನಿವಾಸಾ.

# ದೇವ ಬಂದಾ

ದೇವ ಬಂದಾ, ನಮ್ಮ ಸ್ವಾಮಿ ಬಂದಾ,
ದೇವರ ದೇವ ಶಿಖಾಮಣಿ ಬಂದಾ.

ಉರುಗಶಯನ ಬಂದ, ಗರುಡಗಮನ ಬಂದಾ,
ನರಗೊಲಿದವ ಬಂದಾ, ನಾರಾಯಣ ಬಂದಾ,
ಮಂದರೋದ್ಧರ ಬಂದಾ, ಮಾಮನೋಹರ ಬಂದಾ,
ಬೃಂದಾವನ ಪತಿ ಗೋವಿಂದ ಬಂದಾ.

ಪಕ್ಷಿವಾಹನ ಬಂದಾ, ಲಕ್ಷ್ಮೀರಮಣ ಬಂದಾ,
ಅಕ್ಷಯಫಲದಾ ಲಕ್ಷ್ಮಣಾಗ್ರಜ ಬಂದಾ,
ನಿಗಮಗೋಚರ ಬಂದಾ, ನಿತ್ಯತೃಪ್ತನು ಬಂದಾ,
ನಗೆಮುಖ ಪುರಂದರವಿಠಲಕ ಬಂದಾ.

# ದೇವ ಗುರುವೇ ಗುರುವೇ

ದೇವ ಗುರುವೇ ಗುರುವೇ, ನಮ್ಮನ್ನು ಪೊರೆವೇ,
ಅರಿವ ನೀವೇ, ಸರ್ವ ಸೌಭಾಗ್ಯ ತರುವೇ.

ದಂಡ–ಕಮಂಡಲು ಜಪ ಮಾಲೆ ಹಿಡಿವೇ,
ಪೊನ್ನಕಾಂತಿಯಾ ಮೈಯಿಗೆ ಪೊಂಬಟ್ಟೆ ಉಡುವೇ,
ಪುಣ್ಯ ಕರ್ಮಕೆ ನೀ ಪ್ರೇರಣೆಯ ಕೊಡುವೇ,
ಸದ್ಪುತ್ರ–ಸಂತತಿ ನೀಡಿ ಕಾಪಾಡುವೇ.

ವೇದ ಓದಿಸುವೇ, ಮಾತುಗಾರಿಕೇಯ ನೀವೇ,
ಲಕ್ಷ ದೋಷವ ಕಳೆಯೆ ಕೇಂದ್ರದಿ ನಿಲುವೇ,
ಪೊನ್ನ ಕುದುರೆಯ ಕಟ್ಟಿ ಪೊನ್ನ ತೆರನೇರಿ,
ಪೊನ್ನಗಿರಿಯನು ಸುತ್ತಿ ಪುಣ್ಯವನೆ ತರುವೇ.

## ದೇವಾದಿ ದೇವ ಶ್ರೀ ವಾಸುದೇವ

ದೇವಾದಿ ದೇವ ಶ್ರೀ ವಾಸುದೇವ,
ಕಾವು ಮ್ಮೆಯನನ್ನು ಕರುಣಾಲವಾಲ.

ಏ ವೇಳ ನಾ ಆರು ಶತ್ರು ಲಾನೂ,
ನೀವೆ ಪರ ದ್ರೋನಿ ನಿಜ ಭಕ್ತು ಚೇಸೀ.

ಮೀ ಚೇಸಿನ ಪೂಜ ಫಲಮು,
ನಾಕು ??ಚೂಲ ಪುಣ್ಯ ಫಲಮು,
ಶ್ರೀ ಜಾನಕೀಷ ಈ ಜನ್ಮಮಿಚ್ಚಿ,
ನನ್ನು ಧನ್ಯುನೀಗ ಭುವಿ ಚೇಸಿ ಸೇವಿ.

## ದೇವಕಿಗೆ ಸಂತಸವನುಣಿಸಿದ

ದೇವಕಿಗೆ ಸಂತಸವನುಣಿಸಿದ ನಂದಗೋಪನ ಕಂದನೇ,
ವೃಂದವನದೊಳು ಮುದದಿ ನೆಲೆಸಿದ ಗೋಕುಲದ ತಂಗದಿರನೇ.

ಕಂದ ಫಲಗಳ ಸವಿದವನೆ ಲೋಕೈಕ ಸುಂದರ ಮೂರುತೀ,
ಹಸುಗಳನು ಕಾಯ್ದು ವನೆಯೆಲ್ಲರು ಮಣಿದ ಪಾದವು ನಿನ್ನದು.

ಪಾರ್ಥನಿಗೆ ಸಾರಥ್ಯ ವಹಿಸಿದೆ ಕೈಲಿಕೊರಸಿ ನಂದಕಾ,
ಚಂದ ನದಿ ಚೆಲುಗೊಂಡ ದೇಹನೆ ಚೆಲುವೆಯರ ಮನದಲ್ಲನೇ.

ತಾವರೆಯ ನಡು ವೆಸಳಿನಂದ ಚೆಲುವ ಕಂಗಳ ಚೆನ್ನನೇ,
ಮಂದರವ ಹೊತ್ತವನೆ ಓಹೋ, ವಂದಿಸುವೆ ಗೋವಿಂದನೇ.

ಪ್ರಳಯ ಕಾಲದ ಕಪ್ಪು ಕಡಲಲಿ ಮೀನರೂಪದಿ ವಿಹರಿಸೀ,
ಮೇಘಗಳ ತಂದಿತ್ತ ನಾಥನೆ ನಿನಗೆ ಮಣಿವನು ನಾಲ್ಮೊಗಮ್.

ಕೂರ್ಮರೂಪವ ತಳೆದು ಬೆನ್ನಲಿ ಮಂದರಾದ್ರಿಯ ಧರಿಸಿದೇ,
ಎಲ್ಲ ಲೋಕಗಳನ್ನು ಹೊತ್ತಿಹ ನೀನು ಸುರರಿಗು ಆಸರೇ.

ಅಳೆದು ಸೂಕರಂಥು ರೂಪವ ದಾನವನ ಕರಿದಾತನೇ,
ಭೂಮಿಯನು ಹೊತ್ತವನೆ ನೆಲಸಿವೇ ಯಜ್ನಗಳು ನಿನ್ನಂಗದೀ.
ಓ ದೇವ ನರಸಿಂಹರೂಪನೇ, ರಿಪುವ ಸೀಳಿದ ವೀರನೇ,
ಎಲ್ಲ ಭಯವನು ಕಳೆವ ನೀ ನರಸಕ್ಕಿಗರ ಸಂಬಂಧಿಕಾ.

ಚೆಲುವ ವಾಮನ ರೂಪ, ವಿಪ್ರರ ಬಟುವಿನಂತವತರಿಸಿದೇ,
ದೈತ್ಯ ಕುಲಸಂಹಾರ ನೀ ನರ–ಸುರರ ಸೌಖ್ಯದ ಕಾರಣಾ.

ಭೃಗು ಕುಲೋತ್ತಮ ಕೊಡಲಿ ರಾಮನೆ ಬೆಳಗುತಿಹ ತೇಜಸ್ವಿಯೇ,
ಕ್ಷತ್ರಿಯರ ಕುಲ ಕರಿದ ವೀರನೆ, ನಿನ್ನ ಕಿಂಕರ ಶಂಕರಾ.

ರಘುಕುಲೋದ್ಭವ ರಾಮಚಂದ್ರನೆ ರಾಕ್ಷಸರ ಸಂಹಾರನೇ,
ನೀನು ಹನುಮನ ಸ್ವಾಮಿ, ಸೀತೆಯ ವಗೆಯ ಕದ್ದ ಮನೋಹರಾ.

ದೇವಕಿಯೊಳ್ ಅವತರಿಸಿರುವ ಲೋಕೈಕ ಸುಂದರ ಮೂರುತೀ,
ರುಗ್ಮಿಣಿಯ ಕೈ ಹಿಡಿದ ನೀ ನಲ ಪಾಂಡವರ ಹಿತ ಬಾಂಧವಾ.

ದೈತ್ಯರಿಗೆ ಮೋಹವನು ಬರಿಸಿದ ನಿತ್ಯ ಸುಖದಾಕಾರನೇ,
ಬುದ್ಧ ರೂಪನೆ ದೇವ ನೀ ನಲ ತಿಳಿವ ಕರುಣಿಸುವಾತನೂ.
ದುಷ್ಟ ತರಿದು ಕೊಲ್ಲುತ ಧರ್ಮವನು ಬೆಳಗಿಸುತಲೀ,
ತ್ರಿತಯುಗಕೆ ವೀರ್ಯವನು ಬಿತ್ತುವ ಕಲ್ಕಿ ರೂಪನೆ ವಂದನಮ್.

ಮಧ್ವ ಮುನಿ ಒರೆದಂತ ದೇವನ ಗುಣವ ಹಾಡುವ ಗೀತವೂ,
ಪಾಪಗಳ ಪರಿಹರಿಸಿ ಮಂಗಳ ನಿತ್ಯ ಸುಖವನ್ನೀವುದೂ.

# ದೆವಕಿ ನಂದನ

ದೆವಕಿ ನಂದನ ಹರಿವಾಸುದೇವ!
ದೆವಕಿ ನಂದನ ಹರಿವಾಸುದೇವ!

ಕಂಸಮರ್ದನ ಹರಿ ಕೌಸ್ತುಭಾಭರಣ,
ಹಂಸವಾಹನ ಮುಖ ವಂದಿತ ಚರಣ.

ಮಕರಕುಂಡಲ ಧರ ಶತರವಿಭಾಸ,
ರುಕುಮಿಣಿ ವಲ್ಲಭ ಸಕಲ ಲೋಕೆಶ.

ವರ ವೇಲಾಪುರ ಚೆನ್ನಪ್ರಸನ್ನ,
ಪುರಂದರವಿಠಲ ಸದ್ಗುಣಪೂರ್ಣ.

## ದೇವಕಿನಂದನ ನಂದಕುಮಾರ

ದೇವಕಿನಂದನ ನಂದಕುಮಾರ, ವೃಂದಾವನಾಂಜನ ಗೋಕುಲ ಚಂದ್ರ.
ಕಂದ ಫಲಾಶನ ಸುಂದರ ರೂಪ, ನಂದಿತ ಗೋಕುಲ ವಂದಿತ ಪಾದ,
ಇಂದ್ರ ಸುತಾವಕ ನಂದಕ ಹಸ್ತ, ಚಂದನ ಚರ್ಚಿತ ಸುಂದರಿ ನಾಥ.

ಇಂದೀವರೋದಹ ದಳ ನಯನಾ, ಮಂದರಧಾರಾ ಗೋವಿಂದ ವಂದೇ,
ಮತ್ಸ್ಯಕ ರೂಪ ಲಯೋದ ವಿಹಾರಿನ್, ವೇದ ವಿನೇತ್ರ ಚತುರ್ಮುಖ ವಂದ್ಯಾ,
ಕೂರ್ಮ ಸ್ವರೂಪಕ ಮಂದರಧಾರಿನ್, ಲೋಕ ವಿಧಾರಕ ದೇವ ವರೇಣ್ಯಾ.

ಸೂಕರ ರೂಪಕ ದಾನವ ಶತ್ರು, ಭೃಣಿ ವಿಧಾರಕ ಯಜ್ನವರಾಂಗ,
ದೇವ ನೃಸಿಂಹ ಹಿರಣ್ಯಕ ಶತ್ರೋ, ಸರ್ವ ಭಯಾಂತಕ ದೈವತ ಬಂಧೋ,
ವಾಮನ ವಾಮನ ಮಾಡವ ವೇಶಾ, ದೈತ್ಯ ಕುಲಾಂತಕ ಕಾರಣ ಭೂತಾ.

ರಾಮ ಭೃುಗೊದ್ವಹ ಸೂರ್ಜಿತೆ ಗೀತ್ರೇ, ಕ್ಷತ್ರ ಕುಲಾಂತಕ ಶಂಭೂ ವರೇಣ್ಯಾ,
ರಾಘವ ರಾಘವ ರಕ್ಷಸ ಶತ್ರೋ, ಮಾರುತಿವಲ್ಲಭ ಜಾನಕಿಕಾಂತಾ,
ದೇವಕಿನಂದನ ಸುಂದರ ರೂಪ, ರುಗ್ಮಿಣಿವಲ್ಲಭ ಪಾಂಡವ ಬಂಧೋ.

ದೈತ್ಯ ವಿಮೋಹಕ ನಿತ್ಯ ಸುಖಾದೇ, ದೇವ ಸುಬೋಧಕ ಬುದ್ಧ ಸ್ವರೂಪಾ,
ದುಷ್ಟ ಕುಲಾಂತಕ ಕಲ್ಕಿ ಸ್ವರೂಪಾ, ಧರ್ಮ ವಿವರ್ಧನ ಮೂಲ ಯುಗಾದೇ,
ಆನಂದತೀರ್ಥ ಕ್ರಿತ ಹರಿ ಗಾಥಾ, ಪಾಪಹರಾ ಶುಭ ನಿತ್ಯಸುಖಾರ್ಥಾ.

# ದೇವೀ ನಮ್ಮ ದ್ಯಾವಾರು ಬಂದಾರು

ದೇವೀ ನಮ್ಮ ದ್ಯಾವಾರು ಬಂದಾರು,
ಬನ್ನೀರೆ, ನೋಡ ಬನ್ನೀರೆ.

ಕೆಂಗಣ್ಣ ಮೀನಾನಾಗಿ ನಮ ರಂಗ ಗುಂಗಾಡಿ ಸೋಮನ ಕೊಂದಾಂಮ್ಯಾ,
ಗುಂಗಾಡಿ ಸೋಮನ ಕೊಂದೂ ವೇದವ ಬಂಗಾರದೊಡಗೀ ಇತ್ತಾಂಮ್ಯಾ.

ದೊಡ್ಡ ಮಡುವಿನೊಳಗೇ ನಮ ರಂಗ ಗುಡ್ಡವ ಹೊತ್ತುಕೊಂಡು ನಿಂತಾಂಮ್ಯಾ,
ಗುಡ್ಡವ ಹೊತ್ತುಕೊಂಡು ನಿಂತೂ ಸುರರನು ದೊಡ್ಡರನ್ನೂ ಮಾಡಾಂಮ್ಯಾ.

ಚೆನ್ನ ಕಾಡಿನ ಹಂದಿಯಾಗಿ ನಮ ರಂಗ ಚಿನ್ನದ ಕಣ್ಣನ ಕೊಂದಾಂಮ್ಯಾ,
ಚಿನ್ನದ ಕಣ್ಣನ ಕೊಂದೂ ಭೂಮಿಯ ವನ್ನಜ ಸಂಭವಗ್ ಇತ್ತಾಂಮ್ಯಾ.

ಸಿಟ್ಟಲಿ ಸಿಂಹನಾಗಿ ನಮ ರಂಗ ಹೊಟ್ಟೆಯ ಕರುಳಾ ಬಗೆದಾಂಮ್ಯಾ,
ಹೊಟ್ಟೆಯ ಕರುಳಾ ಹಾರವ ಮಾಡೀ ಪುಟ್ಟಗೆ ವರವಾ ಕೊಟ್ಟಾಂಮ್ಯಾ.

ಹುಡುಗ ಹಾರುವನಾಗೀ ನಮ ರಂಗ ಬೆಡಗೀಲಿ ಮುಗಿಲೀಗೆ ಬೆಳದಾಂಮ್ಯಾ,
ಬೆಡಗೀಲಿ ಮುಗಿಲೀಗೆ ಬೆಳದೂ ಬಲಿಯನ್ನು ಅಡಿಗಿಂದ ಪಾತಾಳಕ್ಕೊತ್ತಾಂಮ್ಯಾ.

ತಾಯ ಮಾತಕೇ ಸಾಸಿರತೋಳಿನ ಆವಿನ ಕಳ್ಳನ ಕೊಂದಾಂಮ್ಯಾ,
ಆವಿನ ಕಳ್ಳನ ಕೊಂದು ಭುಮಿಯಾ ಅವನೀ ಸುರರೀಗಿತ್ತಾಂಮ್ಯಾ.

ಪಿಂಗಳ ಕಣಿನ ಕೊಂಗಗಳ ಕೂಡಿ ಚಂದನೆ ಲಂಕೇಗೆ ಪೋದಾಂಮ್ಯಾ,
ಚಂದನೆ ಲಂಕೇಗೆ ಪೋಗೀ ನಮ ರಂಗ ಹೆಂಗಾಸು ಕಳ್ಳನ ಕೊಂದಾಂಮ್ಯಾ.

ಕರಿಯ ಹೊಳೆಯಲ್ಲಿ ತುರುಗಳ ಕಾಯುತ ಉರಗನ ಮಡುವಾ ಕುಮಕಾಂಮ್ಯಾ,
ಉರಗನ ಹೆಡೆಮೇಲೆ ಹಾರಾರಿ ಕುಣಿವ್ಯಾಗ ನಾರೇರಿ ಗೊರವಾ ಕೊಟ್ಟಾಂಮ್ಯಾ.

ಭಂಡನಂದದೀ ಪುಂಡರೀಕಾಕ್ಷನು ಕಂಡ–ಕಂಡಲ್ಲಿಗೆ ತಿರುಗಾಂಮ್ಯಾ,
ಕಂಡ–ಕಂಡಲ್ಲಿಗೆ ತಿರುಗೀ ತ್ರಿಪುರರ ಹೆಂಡ್ದಿರನೆಲ್ಲಾ ಕೆಡಿಸಾಂಮ್ಯಾ.

ಚೆಲುವ ಹೆಂಡತೀ ಕುದುರೆಯ ಮ್ಯಾಡೀ ಒಳ್ಳೆಯರಾವುತ ನಾದಾಂಮ್ಯಾ,
ಒಳ್ಳೆಯರಾವುತ ನಾವಿ ನಮ ರಂಗ ಡೊಳ್ಳ ಹೊಟ್ಟೆಯ ಮೇಲ್ ಒದ್ದಾಂಮ್ಯಾ.

ಡೋಲಿನಮೇಲ್ ಕೈಯ್ಯ ಭರಮಪ್ಪ ಹಾಕ್ಯಾನು ತಾಳವ ಶಿವನಪ್ಪ ತಟ್ಟಾಂಮ್ಯಾ,
ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನು ಚೆಲುವ ಕನಕಪ್ಪ ಕುಣಿದಾಂಮ್ಯಾ.

# ಧನ ನಿಲ್ಲದೈಯ್ಯ

ಧನ ನಿಲ್ಲದೈಯ್ಯ, ಸಾಧನ ನಿಲುವದೈಯ್ಯ.
ತನು ನಿಲ್ಲದೈಯ್ಯ, ದಾತನು ಎನಿಸೈಯ್ಯ.

ಹಣ ಪುಟ್ಟುವುದು ಸುಗುಣ ಪುಟ್ಟದೈಯ್ಯ,
ಗುಣನಿಧಿ ಹರಿಯ ನೀನೆಣಿಸಿ ಬಾಳೈಯ್ಯ.

ಜನರು ಬರುವರು ಸಜ್ಜನ ಬಾರರೈಯ್ಯ,
ಅನುಸರಿಸುತ ಜೀವನ ಪೊರೆ ಐಯ್ಯ.

ಭಾಗ್ಯನಿಧಿ ವಿಠ್ಠಲನ ಆಜ್ಞೆ ಇದೈಯ್ಯ,
ಸುಜನರ

# ಧನವ ಸಂರಕ್ಷಿಸುವ ಫಣಿ

ಇಟ್ಟಿಕಲ್ಲನು ಭಕುತಿಯಿಂದಲಿ ಕೊಟ್ಟ ಭಕುತಗೆ, ಮೆಚ್ಚಿ ತನ್ನನೆ ಕೊಟ್ಟಾ,
ಬಡಬ್ರಾಹ್ಮಣನ ಒಪ್ಪಿಡಿಯವಲಿಗ ಕಿಳಾರ್ಧಾ,
ಕೆಟ್ಟಮಾತುಗಳೆನದೆ ಚೈದ್ಯನ ಹೊಟ್ಟೆಯೊಳಗಿಂಬಿಟ್ಟ,
ಬಾಣದಳಿಟ್ಟ ಭೀಷ್ಮನ ಅವಗುಣಗಳೆನಿಸಿದನೇನೊ ಕರುಣಾಳೂ?

ಧನವ ಸಂರಕ್ಷಿಸುವ ಫಣಿ ತಾನುಣದೆ,
ಮತ್ತೊಬ್ಬರಿಗೆ ಕೊಡದ್ ಅನುದಿನದಿ ನೋಡುತ,
ಸುಖಿಸುವಂದದಿ ಲಕುಮಿವಲ್ಲಭರೂ.
ಪ್ರಣತರನು ಕಾದಿಹನು ನಿಶ್ಕಾಮನದಿ ನಿತ್ಯಾನಂದಮಯ,
ದುರ್ಜನರ ಸೇವೆಯನೊಲ್ಲನಪ್ರತಿ ವಲ್ಲಾ ಜಗಕ್ಕೆಲ್ಲಾ.

ಜನನಿಯನು ಕಾಣದಿಹ ಬಾಲಕ ನೆನೆ–ನೆನೆದು,
ಹಲುಗುತಿರೇ ಕತ್ತಲೆ ಮನೆಯೋಳಡಗಿದ್ದವನ ನೋಡುತ,
ನಗುತ ಹರುಷದಲಿ.

ತನಯನಮ್ ಬಿಗಿದಪ್ಪಿರಂಬಿಸಿ ಕನಲಿಕೆಯ ಕಳೆವಂತೆ,
ಮಧುಸೂದನನು ತನ್ನವರಿದ್ದೆಡೆಗೆ ಬಂದೊದಗಿ ಸಲಹುವನೂ.

ಬಾಲಕನ ಕಲಭಾಷೆ ಜನನಿಯು ಕೇಳಿ ಸುಖಿಪಡುವಂತೆ,
ಲಕುಮೀ ಲೋಲ ಭಕುತರು ಮಾಡುತಿಹ ಸಂಸ್ತುತಿಗೇ ಹಿಗ್ಗುವನೂ.
ತಾಳ ತನ್ನವರಲ್ಲಿ ಮಾಡ್ವ ಅವಹೇಳನವ ಹೆದ್ದೈವ,
ವಿದುರನ ಆಲಯದಿ ಹಾಲುಂಡೋ ಕುರುಕನ ಮಾನವನೇ ಕೊಂಡಾ.

Incomplete

# ಧಣಿಯ ನೋಡಿದೆ ನಾ ವೆಂಕಟನಾ

ಧಣಿಯ ನೋಡಿದೆ ನಾ ವೆಂಕಟನಾ,
ಮನದಣಿಯ ನೋಡಿದೆ ಶಿಖಾಮಣಿ ತಿರುಮಲನಾ.

ಕೇಸಕ್ಕಿ ಅನ್ನವ ಉಂಬುವನ,
ಬಡ್ಡಿ ಕಾಸು ಬಿಡದೆ ಹೊನ್ನ ಗಳಿಸುವನ,
ದೋಸೆ ಅನ್ನವ ಮಾರಿಸುವನ,
ತನ್ನ ದಾಸರ ಮ್ಯಾಳದಿ ಕುಣಿದಾಡುತಿಹನ.

ಘಂಟಿನೊಲ್ಲಿ ಹೊರುವವನ,
ಹೊರಗ್ ಹೊಂಟು ಹೋಗಿ ಬೇಟೆಯಾಡ್ವನ,
ಘಂಟೆ ನಾದಕ್ಕೆ ನಲಿಯುವನ,
ಭೂವೈಕುಂಠ ವಿದೆಂದು ಹಸ್ತವ ತೋರುತಿಹನ.

ಬೆಟ್ಟದೊಳಗೆ ಇರುತಿಹನ,
ಮನ ಮುಟ್ಟಿ ಭಜಿಪರಿಗೆ ಇಷ್ಟವ ಸಲಿಸುಹನ,
ಕೊಟ್ಟ ವರವ ತಪ್ಪದವನ,

# ಧರ್ಮಕ್ಕೆ ಕೈ ಬಾರದೀಕಾಲಾ

ಧರ್ಮಕ್ಕೆ ಕೈ ಬಾರದೀಕಾಲಾ,
ಪಾಪ ಕರ್ಮಕ್ಕೆ ಮನ ಸೋಲೋದ್ ಈ ಕಲಿಕಾಲಾ.

ದಂಡ–ದ್ರೋಹಕ್ಕೆ ಉಂಟು, ಕುಂಡು–ಪೋಕರಿಗುಂಟು,
ಹೆಂಡತಿ–ಮಕ್ಕಳಿಗೆ ಇಲ್ಲ್ ಈ ಕಾಲ,
ದಿಂಡೇರಿಗುಂಟು ಜಗಭಂಡರಿಗುಂಟು,
ಅಂಡಲೇವರಿಗೆ ಇಲ್ಲವೀ ಕಾಲ.

ಮತ್ತೆ ಸುಳ್ಳರಿಗುಂಟು, ನಿತ್ಯ ಹಾದರಕುಂಟು,
ಉತ್ತಮರಿಗೆ ಇಲ್ಲವೀ ಕಾಲ,
ತೊತ್ತೇರಿಗುಂಟು ತಾಟಕಿಗುಂಟು,
ಹೆತ್ತ ತಾಯಿಗೆ ಇಲ್ಲವೀ ಕಾಲ.

ರುಸಿ ದಿಟವಾಯಿತು, ರಸ ಕಸವಾಯಿತು,
ಸೊಸೆ ಅತ್ತೆ ದಂಡಿಸುವುದ್ ಈ ಕಾಲ,
ವಿಸಜಾಕ್ಷ ಪುರಂದರವಿಠಲನ ಮನದಲ್ಲಿ,
ಸ್ತುತಿಸುವವರಿಗೇ ಇಲ್ಲವೀ ಕಾಲ.

# ಧರ್ಮಸ್ಥಳ ಶ್ರೀಕ್ಷೇತ್ರಾಧಿಪತೇ

ಧರ್ಮಸ್ಥಳ ಶ್ರೀಕ್ಷೇತ್ರಾಧಿಪತೇ,
ಭವ ಶರಣಮ್ ಭವಮೇ ನಮತೇ.

ಸ್ಫಟಿಕಾ ಮಲರುಚಿ ಶುಭವ ಪುಷೇ,
ನಮೋಸ್ತು ಹಾಟಕ ಜಟಾ ಬಿಭಾಸೇ.
ಜಟಾ ಗಲತ್ಸುರ ಸರಿದಮ್ಭೋ ಮಲ,
ಧಾರಾ ಪಾವಿತ ಜಗತೇ ಭವತೇ.

ದಮರುನಿ ನಾದ ಪೂರಿತ ನಭಸೇ,
ನಮೋಸ್ತು ತಾಂಡವ ಕೃದ್ವಪುಷೇ.
ಅಂತೇ ಲೋಕತ್ರಯಕವಲೀಕ್ರಿಲ್,
ಲಲಾಟ ಲೋಚನ ತನೂನ ಪಾತೇ.

ಸುಧಾಂಷು ಲೇಖಾ ಮಂಡಿತ ಶಿರಸೇ,
ನಮೋಸ್ತು ಲೋಕ ಶಂಕರ ಮನಸೇ.
ಸಹಸ್ರ ಲೋಚನ ಮುಖ ನಿರ್ಜರ ಕರ,
ಸೇವಿತ ಪದ ಹೇ ಉಮಾ ಪತೇ.

# ಧರ್ಮವೇ ಜಯವೆಂಬ ದಿವ್ಯ ಮಂತ್ರ

ಧರ್ಮವೇ ಜಯವೆಂಬ ದಿವ್ಯ ಮಂತ್ರ,
ಮರ್ಮವನ್ನರಿತು ಮಾಡಲು ಬೇಕು ತಂತ್ರ.

ವಿಷವಿಕ್ಕಿದವಗೆ ಷಡ್ ರಸವ ಉಣಿಸಲು ಬೇಕು,
ದ್ವೇಶ ಮಾಡಿದವನ ಪೋಷಿಸಲು ಬೇಕು,
ಹುಸಿ ಆಡಿ ಕೆಡಿಸುವನ ಹಾಡಿ ಹರಸಲು ಬೇಕು,
ಮೋಸ ಮಾಡುವನ್ನ್ ಹೆಸರು ಮಗನಿಗಿಡ ಬೇಕು.

ಹಿಂದೆ ನಿಂದಿಪರನ್ನು ವಂದಿಸುತಲಿರ ಬೇಕು,
ಬಂಧನದೊಳ್ ಇಟ್ಟವರ ತೆರೆಯ ಬೇಕು,
ಕೊಂದ ವೈರಿಯ ಮನೆಗೆ ನಡೆದು ಹೋಗಲು ಬೇಕು,
ಉಂದೆಣಿಸುವವರ ಗೆಳೆತನ ಮಾಡ ಬೇಕು.

ಕೊಂಢೊಯ್ದು ಬಡಿಯುವರ ಕೊಂಡಾದುತಿರ ಬೇಕು,
ಕಂಡು ಸಹಿಸದವರ ಕರೆಯ ಬೇಕು,
ಪುಂಡರೀಕಾಕ್ಷ ಶ್ರೀ ಪುರಂದರವಿಠಲನ್ನ,
ಕೊಂಡಾಡಿ ತಾ ಧನ್ಯ ಆಗ ಬೇಕು.

# ಧವಳ ಗಂಗೆಯ ಗಂಗಾಧರ ಮಹಾಲಿಂಗ

ಧವಳ ಗಂಗೆಯ ಗಂಗಾಧರ ಮಹಾಲಿಂಗ,
ಮಾಧವನ ತೋರಿಸ್ಯೆಯ್ಯ ಗುರುಕುಲೋತ್ತುಂಗ.

ಅರ್ಚಿಸಿದವರಿಗೆ ಅಭೀಷ್ಟವ ಕೊಡುವಾ,
ಹೆಚ್ಚಿನ ಅಭಗಳ ತರಿದು ಬಿಸುಟುವಾ,
ದುಷ್ಚರಿತಗಳೆಲ್ಲ ದೂರದಲ್ ಇಡುವಾ,
ನಮ್ಮಚ್ಯುತ ಗೆಲ್ಲದ ಅಸುರರ ಬಡಿವಾ.

ಮಾರನ ಗೆದ್ದ ಮನೋಹರ ಮೂರ್ತಿ,
ಸಾಧು–ಸಜ್ಜನರಿಗೆ ಸುರಚಕ್ರವರ್ತಿ,
ಧಾರುಣಿ ಒಳಗೆ ತುಂಬಿದೆ ನಿಮ್ಮ ಕೀರ್ತಿ,
ಮುರಾರಿಯ ತೋರಿಸ್ಯೆಯ್ಯ ನಿಮಗೆ ಶರಣಾರ್ಥಿ.

ಚೆನ್ನಪ್ರಸನ್ನ ಶ್ರೀ ಹಯವದನನ್ನಾ,
ಅನುದಿನ ನೆನೆವಂತೆ ಮಾಡೋ ನೀ ಎನ್ನಾ,
ಅನ್ಯನಲ್ಲವೋ ನಾನು ಗುರುವೆಂಬೆ ನಿನ್ನಾ,
ಇನ್ನಾರರು ತೊರೋ ಧೀರ ಮುಕ್ಕಣ್ಣಾ.

## ದೃಷ್ಟಿ ನಿನ್ನ ಪಾದದಲ್ಲಿ

ದೃಷ್ಟಿ ನಿನ್ನ ಪಾದದಲ್ಲಿ ನೆಡೊ ಹಾಗೇ,
ಧರೆ ದುಷ್ಟಜನ ಸಂಗಗಳ ಬಿಡೊ ಹಾಗೇ,
ಕೆಟ್ಟ ಮಾತು ಕಿವಿಯಿಂದ ಕೇಳಧಾಗೇ,
ಮನ ಕಟ್ಟಿ ಸದಾ ನಿನ್ನ ಧ್ಯಾನ ಬಿಡಧಾಗೇ.

ದಿಟ್ಟನಾಗಿ ಕೈಯ್ಯನೆತ್ತಿ ಕೊಡೋ ಹಾಗೇ,
ಶ್ರೀ ಕೃಷ್ಣ ನಿನ್ನ ಪೂಜೆಯನು ಮಾಡೋ ಹಾಗೇ,
ಭ್ರಷ್ಟನಾಗಿ ನಾಲ್ವರೊಳು ತಿರುಗದ ಹಾಗೇ,
ಬಲು ಶಿಷ್ಟಜನ ಸೇವೆಯನು ಮಾಡೋ ಹಾಗೇ.

ಹುಟ್ಟಿಸಿದ ತಾಯಿ-ತಂದೆ ಅಲ್ಲೋ ನೀನೂ,
ಒಂದು ಹೊಟ್ಟೆಗಾಗಿ ದೈನ್ಯವ ಪಡ ಬೇಕೇ ನಾನೂ,
ಪಟ್ಟೆ ಪಟ್ಟಾವಳಿ ಬೇಡಲಿಲ್ಲ ನಾನೂ,
ಯೆನ್ನ ಗುಟ್ಟು ಅಭಿಮಾನಗಳ ಕಾಯೋ ನೀನೂ.

ನಟ್ಟ ನೀರೊಳಗೇ ಏಸಲಾರೆ ನಾನೂ,
ಎತ್ತಿ ಕಟ್ಟೆ ಸೇರಿಸ ಬೇಕೈಯ್ಯ ನೀನೂ,
ಬೆಟ್ಟದಂಥ ಪಾಪವ ಹೊತ್ತಿರುವೇ ನಾನೂ,
ಅದ ಸುಟ್ಟುಬಿಡು ಪುರಂದರವಿಠ್ಠಲಾ ನೀನೂ.

# ದೃಷ್ಟಿ ತಾಗಿತೇ

ದೃಷ್ಟಿ ತಾಗಿತೇ ನಮ್ಮ ಕೃಷ್ಣ ರಾಯಗೇ,
ಸೃಷ್ಠಿ ಅಲ್ಲಿ ನಾರಿಯರು ಕಣ್ಣಿಟ್ಟು ಹೀರುವರು ಕಾಣೇ.

ಬಿಟ್ಟ ಕಣ್ಣ ಮುಚ್ಚಲಿಲ್ಲ ಮುಟ್ಟದೊಳ ಬೆನ್ನ ಮುಳ್ಳ,
ಇಷ್ಟು ಗಂಟಲೊಳು ಗುಲು ಗುಟ್ಟಿ-ಗುಟ್ಟಿತೇನಮ್ಮ,
ತರೆದ ಬಾಯ ಮುಚ್ಚಲಿಲ್ಲ ಕಿರಿಗಾಯಿತು ತನುವಿದೆಲ್ಲ,
ಭರದಿ ಪೆತ್ತ ತಾಯ ಕಂಡರೆ ಸೇರಲೊಲ್ಲನೇ.

ಅನ್ನವನ್ನು ಉಣ್ಣಲಿಲ್ಲ ಎನ್ನ ಮನೆ ಬೆಣ್ಣೆಯೆಲ್ಲ,
ಚೆನ್ನ ವಸ್ತ್ರ ಹೊದಿಸಲೂ ತಾನೊಲ್ಲನೇ,
ರಾಜರಾಜರಲ್ಲಿ ತೇಜಿ ಮಾಜಿ ರಥವ ನಡೆಸೀ,
ಮಾಜಿ ವಾಜಿಯನ್ನು ಹತ್ತು ಯೆಂದರೆ ಯಾಕೆ ಒಲ್ಲನೇ.

ಅರಿತವರ್ಯಾರು ಮಂತ್ರ-ತಂತ್ರ ಕರೆದು ಭಸಿತ ಹಾಕಿರಮ್ಮ,
ಧರೆಯೊಳು ಪುರಂದರವಿಠಲನ ಸ್ಮರಣೆ ಮಾಡಿದರಿಂದ.

## ದ್ರೋಹಿಗಳ ವಿವರವನು ನಾ ಪೇಳ್ವೆನೈಯ್ಯ

ದ್ರೋಹಿಗಳ ವಿವರವನು ನಾ ಪೇಳ್ವೆನೈಯ್ಯ!

ಊಡಿದೆಡೆಯಲಿ ಕಪಟ ವೆಸಗುವವನೇ ದ್ರೋಹಿ,
ಮಾಡಿದುಪಕಾರವನು ಮರೆವವನೆ ದ್ರೋಹಿ,
ಚಾಡಿ ಕೊಂಡಗಳಾಡಿ ನಡೆವವನೆ ದ್ರೋಹಿ,
ರೂಢಿಯೊಳು ಬಾಳುವರ ಸಹಿಸದವನೇ ದ್ರೋಹಿ.

ಸತಿಯಿದ್ದು ಪರ ಸತಿಯ ಬಯಸುವವನೇ ದ್ರೋಹಿ,
ಹೆತ್ತವರೊಡನೇ ಕಲಹ ಮಾಡುವನೆ ದ್ರೋಹಿ,
ಯತಿಗಳನು ವಂದೆಸಮ ನಿಂದಿಸುವನೇ ದ್ರೋಹಿ,
ಸತಿಯನ್ನು ಪರರವಶಗೈವವನೆ ದ್ರೋಹಿ.

ಹೊನ್ನಿದ್ದು ಅನ್ನದಾನ ಮಾಡದವನೇ ದ್ರೋಹಿ,
ತನ್ನ ಗುರು ಸತಿಯ ಬಯಸುವವನೇ ದ್ರೋಹಿ,
ಸನ್ನುತಾಂಗ ಕಾಗಿನೆಲೆ ಆದಿಕೇಷವನ,
ತನ್ನೊಳಗೆ ತಾ ತಿಳಿದು ಸುಖಿಸದವ ದ್ರೋಹಿ.

# ದುಮ್ಮಿ ಸಾಲೆನ್ನಿ

ದುಮ್ಮಿ ಸಾಲೆನ್ನಿ ಚಿಕ್ಕ ತಮ್ಮಗಳಿರ ಗೊಲ್ಲತೇರ,
ಹರ್ಮ್ಯ ಪೊಕ್ಕು ಅವರ ಮುಡಿಗೆ ಪೆರ್ಮೆ ಇಂದ ಭಸ್ಮ ಸೂಸಿ.

ಶಂಖ ನಾದ ಕೊಳಲು ಭೇರಿ ಪೊಂಕದಿ ಪಂಚ ಮಹಾವಾದ್ಯದೀ,
ಅಂಕ ವತ್ಸಲನ ನಿರಾತಂಕ ದಿಂದ ಹಿಡಿವ ಬನ್ನೀ.

ಯೆರೆಳೆಗಣ್ಣಿನಾ ಬಾಲೆಯರುಗಳಿಮ್ ಹರುಷದಿಂದ ಬಂದು ನಿಂತು,
ವರದ ಕೇಷವನ ಮೇಲೆ ಪರಿದು ಸೂಸಿ ಭಸ್ಮವ.

ಗಂಧ ಕಸ್ತೂರಿ ಪುನುಗು ಚಂದದಿಂದ ಲೇಪ ಮಾಡಿ,
ನಂದಗೋಪಸುತನ ಮೇಲೇ ತಂದು ಸೂಸಿ ಭಸ್ಮವ.

ವಾದಿರಾಜಗೊಲಿದು ಬಂದು ಸೋದೆಪುರದಲಿ ನಿಂತು,
ಮೋದೀ ಹಯವದನ ಮೇಲೇ ಪರಿದು ಸೂಸಿ ಭಸ್ಮವ.

# ದೂರು ಮಾಡುವರೇನೇ

ದೂರು ಮಾಡುವರೇನೇ ರಂಗೈಯ್ಯನ, ದೂರು ಮಾಡುವರೇನೇ?

ದೂರು ಮಾಡುವರೇನೇ ಚಾರು ಮಂದಿ ಒಳಗೆ,
ಮೂರು ಲೋಕಕ್ಕೆ ಮುದ್ದು ತೋರೋ ರಂಗೈಯ್ಯನ.

ನಂದಗೋಕುಲದಲ್ಲಿ ಮಂದೆ ಗೋವುಗಳ,
ಮುಂದೆ ಕೊಳಲನೂದಿ ಚಂದದಿ ಬರುವನ,
ನಂದಗೋಕುಲದಲ್ಲಿ ಕಂದರ ಒಡಗೂಡಿ,
ನಂದದಿ ಕೊಳಲ ಊದುವ ರಂಗೈಯ್ಯನ.

ಕಳ್ಳತನದಲ್ಲಿ ಗೊಲತೆರ ಮನೆ ಪೊಕ್ಕು,
ಗುಲ್ಲು ಮಾಡದೇ ಅವರ ಗಲ್ಲ ಕಚ್ಚಿದನೆಂದು,
ಕಾಮದಿಂದಲಿ ನಿನ್ನ ಕಳವಳ ಕನಕಾಗಿ,
ಶ್ಯಾಮಸುಂದರ ಶ್ರೀ ಪುರಂದರವಿಠಲನ.

## ಏ ಮುದ್ದು ಕೃಷ್ಣನ

ಏ ಮುದ್ದು ಕೃಷ್ಣನ ಏ ಕ್ಷಣದ ಸುಖವೆ ಸಾಕು,
ಶ್ರೀ ಮಧ್ವ ಮುನಿಯ ಮನೆ ದೈವ ಉಡುಪಿನ ಕೃಷ್ಣ.

ಚೆಲುವ ಚರಣ ದ್ವಂದ್ವ ಜಂಹೇಜಾ ನೂರು ಕಟಿ,
ವಳಿ ಪಂಕ್ತಿ ಜಠರ ವಕ್ಷ ಕಂಬು ಕಂಧರದ,
ನಳಿತೋಳು ಮುದ್ದು ಮುಖ ನಯನ ನಾಸಿಕ ಕರ್ಣ,
ಸುಳಿ ಗುರುಳ ಮಸ್ತಕದ ನಳಿನನಾಭದ ಸೊಬಗ.

ಕಿರು ಗೆಜ್ಜೇ ಕಡೆ ಪೆಂಡೇ ಗಂಟೆ ಕಟಿಸೂತ್ರ,
ವರಹಾರ ಪದಕ ಶ್ರೀ ವತ್ಸ ಕೌಸ್ತುಭ ರತ್ನ,
ಗುರು ಮುದ್ರೇ ಕಂಕಣಾಂಗದ ಕುಂಡಲ ಪ್ರಭೆಯ,
ಸಿರಿನಾಮ ಮಕುಟ ನಾಸಿಕದ ಮಣಿಯ.

ಸಕಲ ದೇವೋತ್ತಮನ ಸರ್ವಗುಣಪೂರ್ಣನ,
ಅಕಳಂಕ ಅಖಿಳಾಗಮಸ್ತುತನ ಅಪ್ರಾಕೃತನ,
ಅಖಿಳ ಜೀವೋತ್ತಮನ ಚೆನ್ನ ಹಯವದನನ,
ಸುಕರ ಕಡೆಗೋಲೂ ನೇಣುಗಳ ಪಿಡಿದಿಪ್ಪವನ.

# ಏ ಮುದ್ದು ಮುಖವೋ

ಜಯ ಇನ ಕುಲೋದ್ಧರಣ ಜಯ ಮುನಿ ಕೃತ ಶರಣಾ,
ಜಯದನುಜ ವಿದಾರಣ ಜಯ ತಮಾ ಹರಣಾ,
ಜಯ ಜಯಾ!

ಏ ಮುದ್ದು ಮುಖವೋ ಮತ್ತೆ ತನುವಿನ ಕಾಂತಿ,
ಏ ಬಿಲ್ಲು ಏ ಬಾಣ ನಿಂತ ಭಾವ.

ಏ ತನುವು ಏ ರಾಣಿ ಏ ಬಂಟ ಏ ಭಾಗ್ಯ,
ಆವ ದೇವರಿಗುಂಟು ಮೂಲೋಕದೊಳಗೇ.
ಜಯ ಜಯಾ!

ಧರೆಯೊಳ್ ಅತಿ ಭಾರವನು ಇಳುಹಿ ಕಮಲಜ ಮುಖ್ಯ,
ಸುರರ ಮೊರೆಯನು ಕೇಳ್ದು ನರರೂಪ ತಾಳ್ದು,
ದಶರಥನ ಗರ್ಭದಲಿ ಜನಿಸಿ ಮುನ್ನ ಮುನಿಯಾ,
ಮನೊರಥವ ತಾ ಕಾಯ್ದು ಪುಣ್ಯ ಚರಿತಾ.

ದೇವರ್ಕಳು ಹರುಷದಲಿ ಪೂಮಳೆಯ ಗರೆಯೇ,
ಭೂಮಿ ಜಯ ಸಹಿತ ಸೌಮಿತ್ರಿ ಒಡಗೂಡೀ,
ಕ್ಷೆಮ ದಿಂದ ಅಯೋಧ್ಯ ಉರದಿ ಸುಖದಲ್ಲಿದ್ದ,
ಸ್ವಾಮಿ ಶ್ರೀ ಹಯವದನ ರಘುಕುಲ ತಿಲಕಾ.
ಜಯ ಜಯಾ!

# ಏ ಪರಿಯ ಸೊಬಗು

ಹೊಕ್ಕುಳಲಿ ಗಂಡು ಪಡೆದವರುಂಟೇ?
ಉಂಗುಟದಲ್ಲಿ ಹೆಣ್ಣು ಪಡೆದವರುಂಟೇ?
ಮಿಕ್ಕಾದ ದೇವರಿಗೆ ಏ ಸೊಬಗುಂಟೇ?
ಮೊರೆ ಹೊಕ್ಕೇ, ಮೊರೆ ಹೊಕ್ಕೇ ಪುರಂದರವಿಠಲಾ.

ಏ ಪರಿಯ ಸೊಬಗು ಇನ್ನಾವ ದೇವರಲಿ ಕಾಣೇ,
ಗೋಪೀಜನಪ್ರಿಯ ಗೋಪಾಲಗಲ್ಲದೇ!

ದೊರೆಯತನದಲಿ ನೋಡೇ ಧರಣಿದೇವಿಗೆ ರಮಣಾ,
ಸಿರಿಯತನದಲಿ ನೋಡೇ ಶ್ರೀಕಾಂತನೂ,
ಹಿರಿಯತನದಲಿ ನೋಡೇ ಸರಸಿಜೋದ್ಭವನ್ಯಯ್ಯಾ,
ಗುರುವುತನದಲಿ ನೋಡೇ ಜಗದಾದಿಗುರೂ.

ಪಾವನತ್ವದಿ ನೋಡೇ ಅಮರ ಗಂಗಾಜನಕಾ,
ದೇವತ್ವದಲಿ ನೋಡೇ ದಿವಿಜರೊಡೆಯ,
ಲಾವಣ್ಯದಲಿ ನೋಡೇ ಲೋಕಮೋಹಕನ್ಯೆಯ್ಯ,
ಆವ ಧೈರ್ಯದಿ ನೋಡೇ ಅಸುರಾಂತಕಾ.

ಗಗನದಲಿ ಸಂಚರಿಪ ಗರುಡದೇವನೆ ತುರಗಾ,
ಜಗತೀಧರ ಶೆಷ ಪರ್ಯಂಕ ಶಯನಾ,
ನಿಗಮ ಗೋಚರ ಪುರಂದರವಿಠಲನಿಗೇ ಅಲ್ಲದೇ,
ಮಿಗಿಲಾದ ದೈವಗಳಿಗೆ ಏ ಭಾಗ್ಯ ಉಂಟೇ!

# ಏಸಬೇಕು ಇದ್ದು ಜೈಸಬೇಕು

ಏಸಬೇಕು ಇದ್ದು ಜೈಸಬೇಕು,
ಹೆಸಿಗೇ ಸಂಸಾರದಲ್ಲಿ ಆಶಾ ಲೇಶ ಮಾಡಧಾಂಗೆ.

ತಾಮರಸ ಜಲದಂತೆ ಪ್ರೇಮ ಬಿಟ್ಟು ಭವದೊಳು,
ಸ್ವಾಮಿ ರಾಮ ನೆನುತ ಪಾಡಿ ಕಾಮಿತ ಕೈ ಕೊಂಬರೆಲ್ಲಾ,
ಏಸಬೇಕು ಇದ್ದು ಜೈಸಬೇಕು.

ಗೇರು ಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಿ,
ಮೀರಿ ಆಸೆ ಮಾಡಧಾಂಗೆ ಧೀರ ಕ್ರುಷ್ಣನ ಭಕುತರೆಲ್ಲಾ.
ಏಸಬೇಕು ಇದ್ದು ಜೈಸಬೇಕು.

ಮಾಂಸದಾಸೆಗೆ ಮತ್ಸ್ಯಸಿಲುಕಿ ಹಿಂಸೆಪಟ್ಟ ಪರಿಯಂತೆ,
ಮೋಸ ಹೋಗಧಾಂಗೆ ಜಗದೀಶ ಪುರಂದರವಿಠ್ಠಲನೆನ್ನುತ.
ಏಸಬೇಕು ಇದ್ದು ಜೈಸಬೇಕು.

## ಏಶ ನಿನ್ನ ಚರಣ ಭಜನೆ

ಏಶ ನಿನ್ನ ಚರಣ ಭಜನೆ ಆಶೆಯಿಂದ ಮಾಡುವೆನು,
ದೋಷರಾಷಿ ನಾಷ ಮಾಡೋ ಶ್ರೀಶ ಕೇಷವಾ.

ಶರಣು ಹೊಕ್ಕೆನ್ಯೆಯ್ಯ ಎನ್ನ ಮರಣ ಸಮಯದಲ್ಲಿ ನಿನ್ನ,
ಚರಣ ಸ್ಮರಣೆ ಕರುಣಿಸ್ಯೆಯ್ಯಾ ನಾರಾಯಣಾ,
ಶೋಧಿಸೆನ್ನ ಭವದ ಕಲುಷ ಬೋಧಿಸ್ಯೆಯ್ಯ ಜ್ನಾನವೆನಗೆ,
ಬಾಧಿಸುವ ಯಮನ ಬಾಧೆ ಬಿಡಿಸು ಮಾಧವಾ,
ಹಿಂದನೇಕ ಯೋನಿಗಳಲಿ ಬಂದು-ಬಂದು ನೊಂದೇ ನಾನು,
ಇಂದು ಭವದ ಬಂಧ ಬಿಡಿಸೋ ತಂದೆ ಗೋವಿಂದಾ.

ಭ್ರಷ್ಟನೆನಿಸ ಬೇಡ ಕೃಷ್ಣಾ ಇಷ್ಟು ಮಾತ್ರ ಬೇಡಿ ಕೊಂಬೇ,
ಶಿಷ್ಠರೊಡನೆ ಇಟ್ಟು ಕಷ್ಟ ಬಿಡಿಸು ವಿಷ್ಣುವೇ,
ಮದನನ್ಯೆಯ್ಯ ನಿನ್ನ ಮಹಿಮೆ ವದನ ದಿಂದ ನುಡುಯು ವಂತೆ,
ಹೃದಯದಲ್ಲಿ ಹುದುಗಿಸ್ಯೆಯ್ಯ ಮಧುಸೂದನಾ,
ಕವಿದು ಕೊಂಡು ಇರುವ ಪಾಪ ಸವೆದು ಹೋಗುವಂತೆ ಮಾಡು,
ಜವನ ಬಾಧೆಯನ್ನು ಬಿಡಿಸೋ ಶ್ರೀ ತ್ರಿವಿಕ್ರಮಾ.

ಕಾಮಜನಕ ನಿನ್ನ ನಾಮ ಪ್ರೇಮದಿಂದ ಪಾಡುವಂಥ,
ನೇಮವೆನಗೆ ಪಾಲಿಸ್ಯೆಯ್ಯ ಸ್ವಾಮಿ ವಾಮನಾ,
ಮೊದಲು ನಿನ್ನ ಪಾದ ಪೂಜೆ ಒದಗುವಂತೇ ಮಾಡೋ ಎನ್ನ,
ಹೃದಯದೊಳಗೆ ಸದನ ಮಾಡೋ ಮುದದಿ ಶ್ರೀಧರಾ,
ಹುಸಿಯನಾಡಿ ಹೊಟ್ಟೆಹೊರೆವ ವಿಶಯದಲ್ಲಿ ರಸಿಕನೆಂದು,
ಹುಸಿಗೆ ಹಾಕದಿರೋ ಯೆನ್ನ ಹೃಷೀಕೇಶನೇ.

ಕಾಮ-ಕ್ರೋಧ ಬಿಡಿಸಿ ನಿನ್ನ ನಾಮ ಜಿಹ್ವೆ ಒಳಗೆ ನುಡಿಸೊ,
ಶ್ರೀ ಮಹಾನುಭಾವನಾದ ದಾಮೋದರಾ,
ಬಿದ್ದು ಭವದ ಅನೇಕ ಜನುಮ, ಬದ್ಧನಾಗಿ ಕಲುಷದಿಂದ,
ಗೆದ್ದು ಕೋಪ ಬುದ್ಧಿ ತೋರೋ ಪದ್ಮನಾಭನೇ,
ಪಂಕಜಾಕ್ಷ ನೀನು ಎನ್ನ ಮಂಕ ಬುದ್ಧಿಯನ್ನು ಬಿಡಿಸಿ,
ಕಿಂಕರನ್ನ ಮಾಡಿ ಕೊಳ್ಳೋ ಸಂಕರ್ಷಣಾ.

ಏಸು ಜನ್ಮ ಬಂದರೇನು ದಾಸನಲ್ಲವೇನು ನಾನು,
ಘಾಸಿಮಾಡದಿರು ಇನ್ನೂ ವಾಸುದೇವನೇ,
ಬುದ್ಧಿ ಶೂನ್ಯನಾಗಿ ಎನ್ನ ಬದ್ಧಕಾಯ ಕುಹಕ ಮನವ,
ತಿದ್ದಿ ಹೃದಯ ಶುದ್ಧ ಮಾಡೋ ಪ್ರದ್ಯುಮ್ನನೇ,
ಜನನಿ ಜನಕ ನೀನೇಯೆಂದು ನೆನೆವೆನ್ಯೆಯ್ಯ ದೀನಬಂಧೋ,
ಎನಗೆ ಮುಕ್ತಿಪಾಲಿಸಿಂದು ಅನಿರುದ್ಧನೇ.

ಹರುಷದಿಂದ ನಿನ್ನ ನಾಮ ಸ್ಮರಿಸುವಂತೆ ಮಾಡು ಕ್ಷೇಮ,

ಇರಿಸು ಚರಣದಲ್ಲಿ ಪ್ರೇಮ ಪುರುಶೋತ್ತಮಾ,
ಸಾಧು ಸಂಗ ಕೊಟ್ಟು ನಿನ್ನ ಪಾದ ಭಜನೆ ಇತ್ತು ಎನ್ನ,
ಭೇದ ಮಾಡಿ ನೋಡದಿರೋ ಹೇ ಅಧೋಕ್ಷಜಾ,
ಚಾರು ಚರಣ ತೋರಿ ಎನಗೆ ಪಾರುಗಾಣಿಸೈಯ್ಯ ಕೊನೆಗೆ,
ಭರ ಹಾಕಿರುವೆ ನಿನಗೆ ನಾರಸಿಂಹನೇ,
ಸಂಚಿತಾದಿ ಪಾಪಗಳು, ಕಿಂಚಿತಾದ ಪೀಡೆಗಳು,
ಮುಂಚಿತಾಗಿ ಕಳೆಯ ಬೇಕೊ ಸ್ವಾಮಿ ಅಚ್ಯುತಾ.

ಜ್ಞಾನ ಭಕುತಿ ಕೊಟ್ಟು ನಿನ್ನ ಧ್ಯಾನದಲ್ಲಿ ಇಟ್ಟು ಸದಾ,
ಹೀನ ಬುದ್ಧಿ ಬಿಡಿಸೋ ಮುನ್ನ ಶ್ರೀ ಜನಾರ್ದನಾ,
ಜಪ-ತಪ-ಅನುಶ್ಠಾನ ವಿಲ್ಲ ಕುಪಥಗಾಮಿ ಆದ ಎನ್ನ,
ಕೃಪೇಯ ಮಾಡಿ ಕ್ಷಮಿಸ ಬೇಕು ಹೇ ಉಪೇಂದ್ರನೇ,
ಮೊರೆಯ ಇಡುವೆನೈಯ್ಯ ನಿನಗೆ ಶರಧಿಶಯನ ಶುಭ ಮತಿಯ,
ಇರಿಸೋ ಭಕ್ತರೊಳು ಪರಮಪುರುಷ ಶ್ರೀಹರೇ.

ಹುಟ್ಟಿಸಲೇ ಬೇಡ ಇನ್ನು ಹುಟ್ಟಿಸಿದಕೆ ಪಾಲಿಸಿನ್ನು,
ಇಷ್ಟು ಮಾತ್ರ ಬೇಡಿಕೊಂಬೆ ಶ್ರೀಕೃಷ್ಣನೇ,
ಸತ್ಯವಾದ ನಾಮಗಳನು ನಿತ್ಯದಲ್ಲಿ ಪಠಿಸುವರಿಗೆ,
ಅರ್ಥಿಯಿಂದ ಸಲಹುತಿರುವ ಕರ್ತೃ ಕೇಷವಾ,
ಮರೆಯದಲೆ ಹರಿಯ ನಾಮ ಬರೆದು-ಓದಿ-ಪೇಳುವರಿಗೆ,
ಕರೆದು ಮುಕ್ತಿಕೊಡುವ ನೆಲೆ ಆದಿಕೇಷವಾ.

# ಈತನೀಗ ವಾಸುದೇವನೂ

ಈತನೀಗ ವಾಸುದೇವನೂ ಲೋಕದೊಡೆಯ,
ಈತನೀಗ ವಾಸುದೇವ ಈ ಸಮಸ್ತ ಲೋಕದೊಡೆಯ,
ದಾಸಗೊಲಿದು ತೇರನೇರಿ ತೇಜಿ ಪಿಡಿದು ನಡೆಸಿದಾತ.

ನರನ ಸುತನ ಅರನ್ಯದಲ್ಲಿ ಗಿರಿಯೊಳ್ ನಿಂತು ತನ್ನ ರೋಶದಿ,
ಶರಗಳನ್ನು ತೀಟುತಿಪ್ಪ ನಾ ಯೋಚಿಸೀ,
ಭರದಿ ಕರೆದು ಕುರುಹ ತೋರಿ ಪತ್ರವನ್ನು ಹಾರಿಸಿದನ,
ಶಿರವ ಛೇದಿಸಿದ ದೇವ ಈತ ಕಾಣಿರೋ.

ದನುಜೆ ಆಳ್ದ ಅಣ್ಣ ನಯನ ಪಿತನ ಮುಂದೆ ಕೌರವೇಂದ್ರನ,
ಅನುಜೆ ಆಳಿದವನ ಶಿರವ ಕತ್ತರಿಸುತಾ,
ಅನುಜೆ ಆಳಿದವನ ಬೆಂಕಿ ಮುಟ್ಟದಂತೆ ಕಾಯ್ದ ರುಕ್ಮನ,
ಅನುಜೆ ಆಲಿದವನ ಮೂರ್ತಿಯನ್ನು ನೋಡಿರೋ.

ಸ್ರಿಷ್ಠಿಕರ್ತಗೆ ಮಗನ ಆದವ ಇಷ್ಟಭೂಷಣ ಅಶನನಾದನ,
ಜೇಶ್ಠ ಪುತಗೆ ವೈರಿ ತೊಡೆಯ ಛೇದಿಸೆಂದು ಬೋಧಿಸಿ,
ಕಷ್ಟವನ್ನು ಕಳೆದು ಭಕ್ತರಿಷ್ಟವನ್ನು ಕಾದ,
ಉತ್ಕ್ರುಷ್ಟ ಮಹಿಮನಾದ ದೇವ ಈತ ಕಾಣಿರೋ.

ಕ್ರೂರನಾದ ಫಣಿಪ ಬಾಣ ತರಣಿಜನು ನಿರೀಕ್ಷಿಸಲು,
ವೀರನೆಚ್ಚ ಯಸುಗೆ ಬಪ್ಪುದನ್ನು ಈಕ್ಷಿಸೀ,
ಧಾರಿಣಿಯ ಪದದಲೌಕಿ ಚರಣ ಭಜಕ ನರನ ಕಾಯ್ದ,
ಭಾರಕರ್ತನಾದ ದೇವ ಈತ ನೋಡಿರೋ.

ಯೋಮಕೇಶನಿಪ್ಪ ದೆಸೆಯ ಆ ಮಹಾಮಹಿಮೆಯುಳ್ಳ,
ಸಾಮಜವನು ಏರಿ ಬರುವ ಶಕ್ತಿಯ ಈಕ್ಷಿಸಿ,
ಪ್ರೇಮದಿಂದ ಉರವನೊಟ್ಟಿ ದಿಂಗರಿಗನ ಕಾಯ್ದ,
ಸಾರ್ವಭೌಮ ವಡಾದಾದಿಕೇಶವನ್ನ ನೋಡಿರೋ.

# ಏಕೆ ನೀನಿಲ್ಲಿ ಪವಡಿಸಿದೇ

ಕ್ಷೀರವಾರಿಧಿ ಶಯನ, ಶಾಂತಾಕಾರ ವಿವಿಧವಿಚಾರ,
ಗೋಪೀಜಾರ ನವನೀತಚೋರ ಚಕ್ರಾಧಾರ ಭವದೂರಾ,
ಮಾರಪಿತಗುಣಹಾರ ಸರಸಾಕಾರ ವಿಪುಸಂಹಾರ,
ತುಂಬುರು ನಾರದ ಪ್ರಿಯ ವರದ,
ರಕ್ಷಿಸು ನಮ್ಮನು ಅನವರತ.

ಏಕೆ ನೀನಿಲ್ಲಿ ಪವಡಿಸಿದೇ,
ಜಗದೇಕ ವಿಖ್ಯಾತ ಪಶ್ಚಿಮ ರಂಗ ಧಾಮಾ.

ತಮನೊಡನೆ ಹೋರಿ ಬೆಟ್ಟವ ಬೆನ್ನಲಿ ಪೊತ್ತು,
ರಮಣಿ ಧರೆಯನು ತಂದ ಆಯಾಸವೋ.
ಅಮರ ವೈರಿಯ ಕರುಳ ಕಿತ್ತಿಕಡಿದ ಹತ್ತಿಯೋ,
ಕ್ಷಮೆಯ ನಡೆದ ಪಾದ ಕಮಲ ನೊಂದೊವೋ ರಂಗಾ.

ಕೊಡವಿ ಪಾಲಕರ ವಂಶವನು ಒಬ್ಬನೆ ಕಡಿದು,
ಕೊಡವಿಯನು ಬಿಸುಟಿ ಮಲಗಿದ ಭಾವವೋ.
ಮಡದಿಯನು ಕದ್ದು ಪೋದ ಅಸುರನ ಶಿರವರಿದು,
ಬಿಡದೆ ಸಾಸಿರ ಗೋಪರೊಡನೇ ಬಳಲಿದೆಯೋ.

ತ್ರಿಪುರದೊಳು ಸತಿಯ ವ್ರತವಳಿದು ಬತ್ತಲೇ ನಿಂತೂ,
ಚಪಲತ್ವದಿಂದ ಮಲಗಿದ ಭಾವವೋ.
ಅಪರಿಮಿತ ಭಕ್ತರನು ನೋಡಬೇಕೆಂದೆನುತ,
ಸುಪವಿಗ್ರ ತನದಿ ಮಲಗಿದ ಭಾವವೋ.

ನಾಲ್ಕುಯುಗವಾದಲ್ಲಿ ಕಡೆಯ ತುರಗವನೇರೀ,
ಸಾಕಾರವಾಗಿ ಮಲಗಿದ ಭಾವವೋ.
ಬೇಕಾದ ಸುರ–ನರರ ಪಾಲಿಸಲು ಬೇಕೆನುತ,
ಆ ಕರುಣದಿಂದ ಮಲಗಿದ ಭಾವವೋ.

ಇನ್ನೆಷ್ಟು ಕಾಲದಲಿ ಮೈ ಮರೆದು ಮಲಗಿದರೇ,
ನಿನ್ನನೆಬ್ಬಿಸುವವರಾರನು ಕಾಣೆನೂ.
ಉನ್ನತದ ಕಾಗಿನೆಲೆ ಆದಿಕೇಷವರಾಯ,
ಚೆನ್ನ ಶ್ರೀರಂಗಪಟ್ಟಣದ ರಂಗೇಶಾ.

## ಏಕೆ ನಿರ್ದಯನಾಗುವೇ

ಏಕೆ ನಿರ್ದಯನಾಗುವೇ ರಂಗೈಯ ರಂಗಾ?

ಏಕೆ ನಿರ್ದಯ ರಂಗಾ, ಕಾರುಣ್ಯ ಪತಿ ಎನ್ನಾ,
ಸಾಕುವುದು ನಿನ್ನ ಭಾರಾ, ಪಾಕಶಾಸನ ವಂದ್ಯಾ.

ಅರಿತು ಪಾಡುವೇನೆಂದರೇ ರಂಗೈಯ್ಯ ನಿನ್ನ ಅರಿತವರಾರೈಯ್ಯ?
ಅರಿಯಲಾಗದೆ ನಿನ್ನ ಪೊಂದುವುದ್ ಹ್ಯಾಂಗೈಯ್ಯ,
ಅರಿಯದವನು ನಾನು ದಾರಿ ತೋರಿಸೊ ನೀನು.

ನಂಬಿಕ್ಕೆ ಇಲ್ಲದಂಥ ಬಿಂಭವ ಪಡೆದೇ, ಡಂಭಕ ಗೊಂಬೆ ಆದೇ,
ಡಂಭತನವ ಬಿಡಿಸೋ ನಿನ್ನಂಘ್ರಿಯ ತೋರಿಸೋ,
ಅಂಬುಜಾಕ್ಷ ತಂದೇ ಪುರಂದರವಿಠಲಾ.

# ಎಲೆ ಮನ ಮುರಾರಿಯನು ಕೊಂಡಾಡೂ

ಎಲೆ ಮನ ಮುರಾರಿಯನು ಕೊಂಡಾಡೂ.

ಕಾಲನ ದೂತರ ಕಾಲಿಗೆ ಬಿದ್ದರೇ ನಾಳೆಗೆ ಬಿಡುವರೆ ನೋಡೋ.
ಎಲೆ ಮನ ಮುರಾರಿಯನು ಕೊಂಡಾಡೂ.

ಮಂದಿಯ ಮಾತಿಗೆ ಎಂದೆಂದು ಮರುಗದೇ, ಮುಂದಿನ ಗತಿ ನೀ ನೋಡೋ,
ರಾಜೀವ ಮುಖಿಯರ ಸೋಜಿಗೇ ಮೆಚ್ಚದೇ ವಿಜಯವಿಠಲನ ಪಾಡೋ.
ಎಲೆ ಮನ ಮುರಾರಿಯನು ಕೊಂಡಾಡೂ.

# ಎಲ್ಲಾಡಿ ಬಂದೇ ಎನ್ನ ಕೃಷ್ಣೈಯ್ಯ

ಎಲ್ಲಾಡಿ ಬಂದೇ ಎನ್ನ ಕೃಷ್ಣೈಯ್ಯ ನೀ,
ಎಲ್ಲಾಡಿ ಬಂದೇ ಎನ್ನ ರಂಗೈಯ್ಯಾ?
ಬಾಲೈಯ್ಯ ನೀನೆನ್ನ ಕಣ್ಣ ಮುಂದಾಡದೆ,
ಎಲ್ಲಾಡಿ ಬಂದೇ ಎನ್ನ ಕೃಷ್ಣೈಯ್ಯ ನೀ,
ಎಲ್ಲಾಡಿ ಬಂದೇ ಎನ್ನ ರಂಗೈಯ್ಯಾ?

ಆಲಯದೊಳಗೇ ನೀನಾಡದೇ ಬೆಣ್ಣೆ,
ಪಾಲು ಸಕ್ಕರೆ ನೀ ಬೇಡದೇ,
ಇಲ್ಲಿ ಬಾಲರಿಂದೊಡಗೂಡಿ ಆಡದೇ,
ಮುದ್ದು ಬಾಲೈಯ್ಯ ನೀನೆನ್ನ ಕಣ್ಣ ಮುಂದಾಡದೆ,
ಎಲ್ಲಾಡಿ ಬಂದೇ ಎನ್ನ ಕೃಷ್ಣೈಯ್ಯ ನೀ,
ಎಲ್ಲಾಡಿ ಬಂದೇ ಎನ್ನ ರಂಗೈಯ್ಯಾ?

ಬಟ್ಟ ಮುತ್ತಿನ ಬೊಗಸೆ ಕಂಗಳೂ,
ಹಣೆಯೊಳ್ ಇಟ್ಟ ಕಸ್ತೂರಿ ತಿಲಕ ರಂದವೂ.
ದಿಟ್ಟತನದಿ ಓಡ್ಯಾಡಲೂ,
ಪುಟ್ಟ ಕೃಷ್ಣೈಯ್ಯ ನೀನೆನ್ನ ಕಣ್ಣ ಮುಂದಾಡದೆ,
ಎಲ್ಲಾಡಿ ಬಂದೇ ಎನ್ನ ಕೃಷ್ಣೈಯ್ಯ ನೀ,
ಎಲ್ಲಾಡಿ ಬಂದೇ ಎನ್ನ ರಂಗೈಯ್ಯಾ?

ಅಷ್ಟದಿಕ್ಕಿಲಿ ಅರಸಿ ಕಾಣದೇ,
ನಾ ದೃಷ್ಟಿಗೆಟ್ಟೆನೊ ನಿನ್ನ ನೋಡದೇ.
ಇನ್ನೆಷ್ಟು ಹೇಳಲಿ ಕೇಳ ಬಾರದೇ?
ರಂಗವಿಠ್ಠಲ ನೀನೆನ್ನ ಕಣ್ಣ ಮುಂದಾಡದೆ,
ಎಲ್ಲಾಡಿ ಬಂದೇ ಎನ್ನ ಕೃಷ್ಣೈಯ್ಯ ನೀ,
ಎಲ್ಲಾಡಿ ಬಂದೇ ಎನ್ನ ರಂಗೈಯ್ಯಾ?

## ಎಲ್ಲಾನೂ ಬಲ್ಲೇನೆಂಬುವರಲ್ಲಾ

ಎಲ್ಲಾನೂ ಬಲ್ಲೇನೆಂಬುವರಲ್ಲಾ ಅವಗುಣ ಬಿಡಲಿಲ್ಲಾ.
ಸೊಲ್ಲಿಗೆ ಶರಣರ ಕಥೆಗಳ ಪೇಳುತ,
ಅಲ್ಲದ ನುಡಿಯನು ನುಡಿಯುವೀರಲ್ಲಾ.

ಕಾವಿಯ ಉಟ್ಟೊ ತಿರುಗುವಿರಲ್ಲ, ಕಾಮವ ಬಿಡಲಿಲ್ಲಾ,
ನೇಮ ನಿಷ್ಠೆಗಳ ಮಾಡುವಿರಲ್ಲ, ತಾಮಸ ಬಿಡಲಿಲ್ಲಾ,
ಆ ವೊಂದರಿಯದೆ ಪರರನು ತಿಳಿಯದೆ,
ಶ್ವಾನನ ಕುಳಿಯಲಿ ಬೀಳುವಿರಲ್ಲಾ.

ಗುರುಗಳ ಸೇವೇ ಮಾಡಿದಿರಲ್ಲ, ಗುರು ತಾಗಲಿಲ್ಲಾ,
ಪರಿ–ಪರಿ ದೇಶವ ತಿರುಗಿದಿರಲ್ಲ, ಪೊರೆಯುವರ್ ಇಲ್ಲಿಲ್ಲಾ,
ಅರಿವೊಂದರಿಯದೆ ಆಗಮ ತಿಳಿಯದೆ,
ನರಕ ಕೂಪದಲಿ ಬೀಳುವಿರಲ್ಲಾ.

ಡಂಭ ಜ್ಞಾನಿಗಳು ಎನಿಸುವಿರಲ್ಲ, ಹಮ್ಮು ಬಿಡಲಿಲ್ಲಾ,
ಸುಮ್ಮನೆ ಯಾಗವ ಮಾಡುವಿರಲ್ಲ, ಸುಳ್ಳನು ಬಿಡಲಿಲ್ಲಾ,
ದಮ್ಮನೆ ಪುರಂದರವಿಠಲನ ಪಾದಕ್ಕೆ,
ಹೆಮ್ಮೆ ಬಿಟ್ಟು ನೀವೆರಗಲಿ ಇಲ್ಲಾ.

# ಎಲ್ಲಾರು ಮಾಡುವುದು ಹೊಟ್ಟೆಗಾಗಿ

ಎಲ್ಲಾರು ಮಾಡುವುದು ಹೊಟ್ಟೆಗಾಗಿ,
ಏಣು ಬಟ್ಟೆಗಾಗಿ, ತುತ್ತು ಹಿಟ್ಟಿಗಾಗಿ.

ವೇದ ಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ,
ಬೋಧನೇಯ ಮಾಡುವುದು ಹೊಟ್ಟೆಗಾಗಿ.
ಚಂಡ ಭಟರಾಗಿ ನಡೆದು, ಕತ್ತಿಡಾಲೂ ಕೈಲೀ ಹಿಡಿದು,
ಕಂಡ ಟುಂಡ ಮಾಡುವುದು ಹೊಟ್ಟೆಗಾಗಿ, ಏಣು ಬಟ್ಟೆಗಾಗಿ.

ಅಂಗಡಿಗಳನ್ನು ಹೂಡೀ ವ್ಯಂಗ್ಯ ಮಾತುಗಳಾಡಿ,
ಭಂಗ ಬಿದ್ದು ಗಳಿಸುವುದು ಹೊಟ್ಟೆಗಾಗಿ.
ಕುಂಟೆ ತುದಿಗೆ ಕೊರಳು ಹಾಕಿ, ಹೆಂಟೆ ಮಣ್ಣು ಸಮ ಮಾಡಿ,
ಘಂಟೆ ಬಡೆದು ಬೆಳಸುವುದು ಹೊಟ್ಟೆಗಾಗಿ, ಏಣು ಬಟ್ಟೆಗಾಗಿ.

ತಾಳ ದಂಡಿಗೆ ಶ್ರುತಿ ಮೇಳ ತಂಬೂರೀ ಕೊಂಡು,
ಸೂಳೆಯಂತೆ ಕುಣಿಯುವುದು ಹೊಟ್ಟೆಗಾಗಿ.
ಸನ್ನ್ಯಾಸಿ ಜಂಗಮ ಜೋಗಿ ಜಟ್ಟಿ ಮುಂಡ ಬೈರಾಗಿ,
ನಾನಾ ವೇಶಗಳೆಲ್ಲ ಹೊಟ್ಟೆಗಾಗಿ, ಏಣು ಬಟ್ಟೆಗಾಗಿ.

ಸಾಂದಣ ಪಲ್ಲಕ್ಕಿ ಏರಿ ಮಂದಿ ಮಾರ್ಬಲ ಕೂಡೀ,
ಚಂದದಿಂದ ಮೆರೆಯುವುದು ಹೊಟ್ಟೆಗಾಗಿ.
ಉನ್ನಂತ ಕಾಗಿನೆಲೆ ಆದಿಕೇಷವನ ಧ್ಯಾನ,
ಮನ ಮುಟ್ಟಿ ಮಾಡುವುದು ಮುಕ್ತಿಗಾಗಿ, ಆನಂದಕಾಗಿ.

## ಎಲ್ಲವ ಪಾಲಿಪ ವೀರನೇ

ಎಲ್ಲವ ಪಾಲಿಪ ವೀರನೇ ಕೇಷವಾ,
ವರುಣನ ಪೂಜೆಯ ಕೊಳ್ಳುವಾ ಪುರುಷೋತ್ತಮನಿಗೆ ನಮನಮ್.
ಕರಣಗಳಿಗೂ ಕಾರಣಾ ಸರ್ವೋತ್ತಮ ನಾರಾಯಣಾ,
ಅಮರರ ದುಃಖನಿವಾರಣಾ ಪರಿಪೂರ್ಣಾತ್ಮಗೇ ನಮನಮ್.

ಬಗೆಯನು ಶೋಧಿಸಿ ದೇವನು ಕರುಣಿಪ ಪಾಪ ವಿರೋಧಿಗೆ,
ಮಾಧವಾ ಮಾಧವಾ ನಿರ್ಮಲಚಿತ್ತಗೇ ನಮನಮ್.
ಗೋಳಿನ ಬಾಳನು ಮುಗಿಸುವಾ ಗೋವಿಂದನೆ ಗೋವಿಂದನೆ,
ಸ್ಕಂದನ ತಂದೆಯ ವಂದನೇ ಕುಳ್ಳುವ ಪಾದಕೇ ನಮನಮ್.

ಸ್ರಿಷ್ಠಿ–ಸ್ತಿತಿ–ಲಯ ಕಾರಣಾ, ಸಜ್ಜನ ವೈರಿ ವಿದಾರಣಾ,
ಸುಖಮಯ ಭಕ್ತಾಲಂಬನಾ ಓ ಗೋ ವಿಷ್ಣುವೇ ನಮನಮ್.
ದಾನವರೆಲ್ಲರ ಸೋಲಿಸಿ ಸುರರಿಗೆ ಸಂತಸ ವೀವಗೇ,
ಭಕ್ತಗೆ ???ವೀವಗೇ ಮಧುಸೂದನನಿಗೆ ನಮನಮ್.

ಕ್ರಮನೀಗಿದ ವಿಕ್ರಮನಿಗೆ ಸ್ರಿಷ್ಠಿ ಕ್ರಮವ ಪಾಲಿಸುವಗೇ,
ಹುಂಕರಿಸುತ ಸಂಕರಿಪಗೇ ತ್ರೈವಿಕ್ರಮನಿಗೇ ನಮನಮ್.
ಸಾಮಪ್ರಿಯನೇ ಚೆಲುವನೇ ಗೋವೋವಾಮನ ವಾಮನಾ,
ಕೊನೆ ತೋರುವ ಕೊನೆ ಅಲ್ಲಿಗ ಶಾಂತಿಪ್ರದನಿಗೇ ನಮನಮ್.

ನೆಲವನು ನೀರನು ??????, ಓ ಶ್ರೀಧರ ಓ ಶ್ರೀಧರಾ,
ಮುಗಲಲಿ ಮೋಡವ ಬರಿಸುವಾ ಸುಖರೂಪನೇ ನಮನಮ್.
ಸುಖಕ್ಕೆ ಬಲಕ್ಕೆ ವಿದ್ಯೆಗಳಿಗೆ ಈಷನಾದ ಹೃಷೀಕೇಶ,
ಎಲ್ಲರಿಗೀಷ ಸುಂದರ ಕೇಶ ಪೊರೆವ ಒಳಧಿಕನೇ ನಮನಮ್.

ತುಂಬಿದ ಲೋಕದ ಭಾರವ ಹೊತ್ತಿದ ಬಹುವಿಧ ರೂಪಗೇ,
ಮಂಗಳಕರ ಅವತಾರಗೇ ಪದ್ಮನಾಭನಿಗೇ ನಮನಮ್.
ಮುಕ್ತ ಜನತೆ ಸುಖವನೀವ ಒಳಗೆ ಹೊರಗೆ ಯೆತ್ತಲಿರುವ,
ಹಿರಿಯರಿಗೂ ಹಿರಿಯನಾದ ದಾಮೋದರನಿಗೇ ನಮನಮ್.

ಆನಂದತೀರ್ಥರೆನ್ನುವಂಥ ಹಿರಿಯ ಮುನಿಯು ಘನತೆವೆತ್ತ,
ಭಕ್ತಿಯಿಂದ ರಚಿಸಿದಂಥ ಹರಿಯ ಮಹಿಮೆಯ ನು?ಇವ??? ಹಾಡು,
ಹರಿಯ ಲೋಕವನ್ನು ತೋರೆ ಸೂರ್ಯನಂಥ ಬೆಳಕಿದು,
ಹರಿಯ ಭಕ್ತಿಯನ್ನು ಬೆಳಗೆ ??????????ಇದು.

# ಎಲ್ಲಿರುವನೋ ರಂಗ

ಎಲ್ಲಿರುವನೋ ರಂಗ ಯೆಂಬ ಸಂಶಯ ಬೇಡ,
ಎಲ್ಲಿ ಭಕುತರು ಕರೆಯೆ ಅಲ್ಲಿ ಬಂದು ಒದಗುವನು.

ತರಳ ಪ್ರಹ್ಲಾದ ಶ್ರೀ ಹರಿ ವಿಶ್ವಮಯನೆಂದು,
ಬರೆದೋದಲ್ ಅವನ ಪಿತ ಕೋಪದಿಂದಾ,
ಸ್ಥಿರವಾದಡ್ ಈ ಕಂಭದಲಿ ತೋರುತೋರೆನಲು,
ಭರದಿ ಬರಲದಕೆ ವೈಕುಂಠ ನೆರೆ ಮನೆಯೇ!

ಕುರುಪತಿಯು ದ್ರೌಪದಿಯ ಸೀರೆಯನು ಸೆಳೆಯುತಿರೆ,
ತರುಣಿ ಹಾ ಕೃಷ್ಣಾ ಯೆಂದರೆ ಕೇಳ್ದೂ,
ಭರದಿಂದ ಅಕ್ಷಯಾಂಬರಭೀಯೇ ಹಸ್ತಿನಾ,
ಪುರಿಗೆ ದ್ವಾರಾವತಿಯು ಕೂಗಳತೆಯೇ!

ಅಣು ಮಹತ್ತಿನ್ ಒಳೆಲ್ಲ ಪರಿಪೂರ್ಣ ವಿಶ್ವಮಯ,
ಗಣನೆ ಇಲ್ಲದ ಮಹಾಮಹಿಮನೆನಿಪ,
ಘನಕೃಪಾನಿಧಿ ಕಾಗಿನೆಲೆ ಆದಿಕೇಷವನು,
ನೆನೆವವರ ಮನದೊಳ್ ಇಹನೆಂಬ ಬಿರುದುಂಟಾಗಿ.

# ಎಲ್ಲಿರುವೆ ತಂದೆ ಬಾರೋ ಮಾರುತಿ

ಎಲ್ಲಿರುವೆ ತಂದೆ ಬಾರೋ ಮಾರುತಿ,
ಎಲ್ಲಿ-ಎಲ್ಲಿ ನೋಡಿದರೆ ಅಲ್ಲಿ ನಿನ್ನ ಕೀರುತಿ,
ಎಲ್ಲಿ ನೋಡಲು ನಿನ್ನ ಕೂಡಿರುವ ಶ್ರೀಪತಿ.

ಅಂದು ರಘುನಂದನಗೆ ವಂದಿಸುತಲ್ ಇಂದಿರೇಯ,
ಕಂಡು ಕೊಂಡಾಡಿದ್ಯಲ್ಲೋ ಮಾರುತಿ.

ರಂಗನ ಅರ್ಧಾಂಗಿಯಲ್ಲಿ ಉಂಗುರವನಿತ್ತು,
ವನಭಂಗವನು ಮಾಡಿದ್ಯಲ್ಲೋ ಮಾರುತಿ.

ಮಂದ ಮತಿ ಇಂದ್ರಜಿತ್ತು ನಿಂದಿಸಲು ನಿಂದು,
ದಶಕಂಧರನ ಗುದ್ದಿದ್ಯಲ್ಲೋ ಮಾರುತಿ.

ರಕ್ಕಸರ ಸೊಕ್ಕಮುರಿದು ಲಂಕೆಗೆ ಉರೀ,
ಇಕ್ಕಿ ಓಡಾಡಿದ್ಯಲ್ಲೋ ಮಾರುತಿ.

ಶೇಶಗಿರಿ ವಾಸನಿಗೆ ದಾಸನೇ ನಿನ್ನಯ,
ದಾಸಗೆ ದಯ ಮಾಡೋ ಮಾರುತಿ.

# ಏಳು ನಾರಾಯಣನೆ

ಏಳು ನಾರಾಯಣನೆ ಏಳು ಲಕ್ಷ್ಮೀ ರಮಣಾ,
ಏಳು ಕಮಲಾಕ್ಷಾ ಕಮಲನಾಭಾ,
ಏಳೈಯ್ಯ ಬೆಳಗಾಯಿತೂ! ಏಳೈಯ್ಯ ಬೆಳಗಾಯಿತೂ!

ಏಳು ನಾರಾಯಣನೆ ಏಳು ಲಕ್ಷ್ಮೀ ರಮಣಾ,
ಏಳು ಶ್ರೀ ಗಿರಿ ಒಡೆಯ ವೆಂಕಟೇಷಾ.
ಕಾಸಿದ್ದ ಹಾಲನ್ನು ಕಾವಡಿಯೊಳ್ ಎಪ್ಪಿಟ್ಟೂ,
ಲೇಸಾಗಿ ಕಡೆದು ಹೊಸ ಬೆಣ್ಣೆ ಕೊಡುವೇ.
ಶೇಶಶಯನನೇ ಏಳು ಸಮುದ್ರಮಥನವ ಮಾಡೂ,
ದೇಶ ಕೆಂಪಾಯಿತು ಏಳೈಯ್ಯ ಹರಿಯೇ.

Incomplete

# ಎಲ್ಯಾಡಿ ಬಂದ್ಯೋ ನೀ ಹೇಳೈಯ್ಯಾ

ಎಲ್ಯಾಡಿ ಬಂದ್ಯೋ ನೀ ಹೇಳೈಯ್ಯಾ,
ನಿಲ್ಲು ನಿಲ್ಲು ಗೋಪಾಲ ಕೃಷ್ಣೈಯ್ಯಾ.

ಮೊಸಲಲಿ ಕಿರು ಬೆವರಿಟ್ಟಿದೇ,
ಅಲ್ಲಿ ಹೊಸ ಪರಿಸುದ್ದಿಯೂ ಹುಟ್ಟಿದೇ.
ಹುಸಿ ಅಲ್ಲ ಈ ಮಾತು ಮುಟ್ಟಿದೇ,
ನಿನ್ನ ನಸು ನಗೆ ಕೇಳ್ಕಿ ಹೆಚ್ಚಿದೇ.

ಬೆರಳ ಉಂಗುರವೆಲ್ಲಿ ಹೋಗಿದೇ,
ನಿನ್ನ ಕೊರಳ ಪದಕವೆಲ್ಲಿ ಮೀಗಿದೇ.
ಸರಕೆಲ್ಲ ಅವಳಲ್ಲಿ ಸಾಗಿದೇ,
ಆ ತರುಣಿ ಮಹಿಮೆ ಹೆಂಗಾಗಿದೇ.

ಕಳ್ಳತನವ ಹೀಗೆ ಮಾಡಿದೇ,
ನಿನ್ನ ಸುಳ್ಳು ಕಡೆಗೆ ನಾ ನೋಡಿದೇ.
ಯೆಲ್ಲರಿಗು ಠಕ್ಕು ಮಾಡಿದೇ,
ಚೆಲ್ವ ರಂಗ ವಿಠ್ಠಲ ನೀ ನಗೆಗಿದಾರ್ಯೇ.

## ಏನ ಬೇಡಲಿ ನಿನ್ನ

ನರ ಬೃಂದಯೆಂಬೋ ಕಾನನದಲ್ಲಿ,
ಶ್ರೀ ಹರಿನಾಮವೆಂಬಂಥ ಕಲ್ಪವೃಕ್ಷ ಹುಟ್ಟಿತ್ತೈಯ್ಯಾ.
ನೆಳಲು ಸೇರಲುಂಟು ಫಲವು ಮೆಲ್ಲಲುಂಟು,
ನಲಿಗೆಯಲಿ ನಾಮತ್ರಯಗಳ್ ಉಂಟು,

ಇದೇ ಮನುಜರ ಮನೆಯ ಕೊನೆಯ ಠಾವು,
ಇದು ಬ್ರಹ್ಮಾದಿಗಳ ಸದಮಲ ಹೃದಯ ಪೀಠ,
ಇದೇ ದ್ವಾರಕೆ, ಇದೇ ಕ್ಷೀರಾಂಬುಧಿ,
ಇದೇ ಪುರಂದರವಿಠಲನ ಮಂದಿರ.

ಏನ ಬೇಡಲಿ ನಿನ್ನ ಬಳಿಗೆ ಬಂದು,
ನೀನಿತ್ತ ಸೌಭಾಗ್ಯ ನಿಬಿಡವಾಗಿದೆ ಎನಗೆ.

ಬಂಧುಗಳ ಕೊಡುಯೆಂದು ಚಂದದಲಿ ಬೇಡುವೆನೇ,
ಬಂಧುಗಳು ಯೇನಿತ್ತರೈ ಗಜರಾಜಗೇ!
ಅಂದಣವ ಕೊಡುಯೆಂದು ಅತಿಶಯದಿ ಬೇಡುವೆನೇ,
ಅಂದಣವ ಏರಿದಾ ನಗುಶ ಯೇನಾದನೈ?

ಬೇಡುವೆನು ನಾನೊಂದ ಬೇಡ ತಕ್ಕುದ ದೇವಾ,
ನೀಡೆ ನೆಂಬುವದು ನಿನ್ನ ಮನದಿಚ್ಛೆಯೇ,
ಮೂಡಲಾದ್ರೀಶ ಶ್ರೀ ಗೋಪಾಲವಿಠಲಾ,
ಬೇಡದಂತೇ ಪರರ ಮಾಡೆನ್ನ ದೊರೆಯೇ.

## ಎನಗೂ ಆಣೇ ರಂಗಾ ನಿನಗೂ ಆಣೇ

ಎನಗೂ ಆಣೇ ರಂಗಾ ನಿನಗೂ ಆಣೇ,
ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೇ.

ನಿನ್ನ ಬಿಟ್ಟು ಅನ್ಯರ ಭಜಿಸಿದರೆ ಎನಗೆ ಆಣೇ ರಂಗಾ,
ಎನ್ನ ನೀ ಕೈ ಬಿಟ್ಟು ಹೋದರೆ ನಿನಗೆ ಆಣೇ.
ತನು-ಮನ-ಧನದಲಿ ವಂಚಕನಾದರೆ ಎನಗೆ ಆಣೇ ರಂಗಾ,
ಮನಸು ನಿನ್ನಲಿ ನಿಲ್ಲಿಸದಿದ್ದರೆ ನಿನಾಗೆ ಆಣೇ.

ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೇ ರಂಗಾ,
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೇ.
ಹರಿನಿನ್ನಾಶ್ರಯ ಮಾಡಾದಿದ್ದರೆ ಎನಗೆ ಆಣೇ,
ಪುರಂದರವಿಠಲ ನೀ ಒಲಿಯದಿದ್ದರೆ ನಿನಗೆ ಆಣೇ.

## ಎಂದಿಗಾದರು ನಿನ್ನ ಪಾದಾರವಿಂದವೆ ಗತಿ

ಎಂದಿಗಾದರು ನಿನ್ನ ಪಾದಾರವಿಂದವೇ ಗತೆಯೆಂದು ನಂಬಿದೆನೊ!

ಬಂಧು–ಬಳಗವ ಬಿಟ್ಟು ಬಂದೆ ನಿನ್ನ ಮನೆಗಿಂದು,
ಮಂದರಧರಾ, ಗೊವಿಂದಾ ಪುರಂದರವಿಠ್ಠಲನೇ ನೀ ಬಂಧು.

ಅನ್ಯರೊಬ್ಬರ ಕಾಣೆ, ಮನ್ನಿಸುವರೆನ್ನ, ಆಪನ್ನ ರಕ್ಷಕನೇ ಪರಿಪಾಲಿಸೂ,
ಇನ್ನು ಪನ್ನಘಶಯನ ಶ್ರಿಪುರಮ್ದರವಿಠಲನೆ ಬಂಧೋ!

ಬಾರಿಬಾರಿಗೆ ನಿನ್ನ ಚರಣಕ್ಕೆ ಶರಣೆಂದೆ, ಭರತೀ ರಮಣನೆ ಬಾರೋ ಮನೆಗಿಂದು.
ತಂದೆ ಶ್ರಿ ಪುರಂದರವಿಠ್ಠಲರಾಯನೆ ಯೆಂದೆಂದಿಗೂ ನೀನೇ ಜಗಕ್ಕೆ ಬಂಧು.

## ಎಂದಿಗಾಗೊದೋ ನಿನ್ನ ದರುಶನಾ

ದೀನ ನಾನು ಸಮಸ್ತ ಜಗಕ್ಕೆ ದಾನಿ ನೀನು,
ವಿಚಾರಿಸಲು ಮತಿ ಹೀನನು ನಾನು.
ಮಹಾಮಹಿಮ ಕೈವಲ್ಯಪತಿ ನೀನು,
ಏನ ಬಲ್ಲೆನು ನಾನು ನೆರೆ ಸುಜ್ಞಾನ ಮೂರುತಿ ನೀನು,
ನಿನ್ನ ಸಮಾನರುಂಟೇ ದೇವಾ,
ರಕ್ಷಿಸು ನಮ್ಮನು ಅನವರತಾ!

ಎಂದಿಗಾಗೊದೋ ನಿನ್ನ ದರುಶನಾ, ಅಂದಿಗಲ್ಲದೇ ಬಂಧ ನೀಗದೋ.
ಗಾನಲೋಲ ಶ್ರೀವತ್ಸಲಾಂಚನ, ದಾನವಾಂತಕ ದೀನರಕ್ಷಕ.
ಆರಿಗೆ ಮೊರೆ ಇಡಲೋ ದೇವಾ, ಕೃಷ್ಣಾ, ಹರೀ!
ಆರಿಗೆ ಮೊರೆ ಇಡಲೋ ದೇವಾ, ನೀ ಸಾರಿ ಬಂದು ಕಾಯೋ ಬೇಗಾ,
ಗಜವ ಪೊರೆದೇ ಗರುಡ ಗಮನನೇ ತ್ರಿಜಗ ಭರಿತ ವಿಜಯವಿಠಲನೆ.

# ಎಂದೀಗೇ ನಿನ್ನ ಪಾದ ಕಾಂಬೇ

ಎಂದೀಗೇ ನಿನ್ನ ಪಾದ ಕಾಂಬೇ ಸ್ವಾಮೀ?

ಎಂದೀಗೇ ನಿನ್ನ ಪಾದ ಕಂಡೇ ಭಕುತಿಯಿಂದ,
ಅಂದೀಗೇ ಭವ-ಪಾಶ ತುಂಡೇ ಸ್ವಾಮೀ.

ಇಂದೀರಾ ದೇವೀ ನಿನ್ನ ಪೊಂದಿದ ಕಾರಣ,
????ಅವನು ಕಾಣಲಿಲ್ಲ ಸ್ವಾಮೀ.

ಬೊಮ್ಮನು ನಿನ್ನನು ಒಮ್ಮೆ ತುತಿಸಲೂ,
ಮೊಮ್ಮಗ ಕುಣಿ-ಕುಣಿದಾಡುವ ಸ್ವಾಮೀ.
ನಿನ್ನ ನಾ ವಾಸುದೇವ ವಿಠಲ ಎನ್ನ,
ಮನದಿ ನೆನೆವುದ ಬಲ್ಲೆಲ್ಲ ಸ್ವಾಮೀ.

# ಎಂದು ಕಾಂಬೆನೆ

ಎಂದು ಕಾಂಬೆನೆ ನಂದಗೋಪನ ಕಂದ ಶ್ರೀ ಗೋವಿಂದನ,
ಮಂದರಾಚಲಧರಾ ಯದುಕುಲ ಚಂದ್ರ ಗುಣಗಳ ಸಾಂದ್ರನ.

ವಿಜಯ ಸೂತನ ವಿಶ್ವ ಪಾಲನ ಭುಜಗವರ ಪರ್ಯಂಕನ,
ರಜನಿ ಚರ ಅಳಿದ ಅಜನ ಜನಕನ ತ್ರಿಜನ ಪತಿ ದ್ವಿಜ ಗಮನನ.

ಹಾಲು ದಧಿ ನವನೀತ ಚೋರನ ಬಾಲಕೃಷ್ಣ ಗೋಪಾಲನ,
ಶೈಲ ಬೆರಳ್ ಇಳಿತಾಳಿ ಗೋಕುಲ ಪಾಲಿಸಿದ ಪರಮಾತ್ಮನ.

ಭಾಮೆ–ರುಕ್ಮಿಣಿ ರಮಣ ರಂಗನ ಸಾಮಗಾನ ವಿಲೋಲನ,
ಶ್ರೀಮದಾನಂದ ಮುನಿ ಕರಾರ್ಚಿತ ಶ್ಯಾಮಸುಂದರ ವಿಠಲನ.

## ಏನೇ ಮನವಿತ್ತೆ ಲಲಿತಾಂಗೀ

ಏನೇ ಮನವಿತ್ತೆ ಲಲಿತಾಂಗೀ,
ಅಸಮಾನ ಗೋವುಗಳ ಕುಲವಿಲ್ಲದವನೊಳು.

ಮಗಗೆ ಮೈದುನನಾದ ಮಗಳಿಗೆ ಪತಿಯಾದ,
ಮಗಳಿಗಳಿಯನಾದ ಅಳಿಯಗಳಿಯನಾದ.

ಮಗಳ ಮಗಗೆ ಮೈದುನನಾಗಿ ಮಾವನ,
ಜಗವರಿಯಲು ಕೊಂದ ಕುಲಗೇಡಿ ಗೋವುಗಳ.

ಅತ್ತೆಗೆ ವಲ್ಲಭನಾದ ಭೃತ್ಯರಿಗಾಳಾದ,
ಚಿತ್ತವೊಲಿದು ಚೆನ್ನಾದಿಕೇಷವನೊಳು.

# ಏನೆಂದು ಕೊಂಡಾಡಿ

ಏನೆಂದು ಕೊಂಡಾಡಿ ಸ್ತುತಿಸಲೋ ದೇವಾ,
ನಾನೇನು ಬಲ್ಲೆನೋ ನಿನ್ನ ಮಹಿಮೆಗಳಾ.

ಹರಿ ಮುಕುಂದನು ನೀನು, ನರ ಜನ್ಮ ಹುಳ ನಾನು,
ಪರಮಾತ್ಮನೋ ನೀನು, ಪಾಮರನು ನಾನು.
ಗರುಡ ಗಮನನು ನೀನು, ಮರುಳು ಪಾಪಿಯೊ ನಾನು,
ಪರಂಜ್ಯೋತಿಯೋ ನೀನು, ತಿರುಕನು ನಾನು.

ವಾರಿಧಿಶಯನಾದ ಕಾರುಣ್ಯ ಪತಿ ನೀನು,
ಘೋರದಿಂದಿಹ ಕಾಮಿ ಕ್ರೋಧಿ ನಾನು.
ಈರೇಳು ಭುವನದೊಳು ಇರುವ ಮೂರುತಿ ನೀನು,
ದೂರಿ ನಿನ್ನನು ಬೈವ ದುಷ್ಟನು ನಾನು.

ತಿರುಪತಿಯ ವಾಸ ಶ್ರೀ ವೆಂಕಟೇಶನೆ ನೀನು,
ಸ್ಮರಿಸಿ ನಿನ್ನಯ ನಾಮ ಬದುಕುವನು ನಾನು.
ಬಿರುದುಳ್ಳವನು ನೀನು ಮೊರೆ ಹೊಕ್ಕೆನೋ ನಾನು,
ಸಿರಿ ಕಾಗಿನೆಲೆ ಆದಿಕೇಷವನೆ ನೀನು.

## ಎನ್ನ ಕಡೆ ಹಾಯಿಸುವುದು ನಿನ್ನ ಭಾರ

ಎನ್ನ ಕಡೆ ಹಾಯಿಸುವುದು ನಿನ್ನ ಭಾರ,
ನಿನ್ನ ನೆನೆಯುತಿಹುದೇ ಎನ್ನ ವ್ಯಾಪಾರ.

ಎನ್ನ ಸತಿ–ಸುತರಿಗೆ ನೀನೇ ಗತಿ,
ನಿನ್ನನೊಪ್ಪಿಸುವುದು ಎನ್ನ ನೀತಿ.

ಎನ್ನ ಒಡಲ ಪೊರೆವುದು ನಿನ್ನ ಧರ್ಮ,
ನಿನ್ನ ಅಡಿಗೆರಗುವುದು ಎನ್ನ ಕರ್ಮ.
ನಿನ್ನನಲ್ಲದೆ ಆರಿಗೆ ಮೊರೆ ಇಡುವೇ,
ಎನ್ನ ಪುರಂದರವಿಠಲಾ ನಿನ್ನ ಪಾಡುವೇ.

# ಎನ್ನ ಮನದಾ ದೊಂಕ ತಿದ್ದೀಸೋ

ಎನ್ನ ಮನದ ದೊಂಕ ತಿದ್ದೀಸೋ ಶ್ರೀನಿವಾಸಾ,
ಎನ್ನ ಮನದ ದೊಂಕ ತಿದ್ದಿಸಿ, ನಿನ್ನ ಸೇವಕನಾದ ಮೇಲೇ,
ಇನ್ನು ಸಂಶಯವೇಕೆ ಕೃಷ್ಣಾ, ನಿನ್ನ ಚರಣದಲ್ಲಿ ಸೇರಿಸೊ.

ಉದಯವಾದರೆ ಊಟದ ಚಿಂತೆ, ಆದರ ಮೇಲೇ ಭೋಗದ ಚಿಂತೆ,
ಹದಿನಾಲ್ಕು ಲೋಕವ ಆಳಬೇಕೆಂಬ ಚಿಂತೇ,
ಇದು ಪುಣ್ಯ ಇದು ಪಾಪವೆಂದು ಹೃದಯದಲ್ಲಿ ಭಯವು ಇಲ್ಲದೆ,
ಮದಮೋಹಿತನಾದೆ ನಿನ್ನ ಪದವ ನಂಬದೆ ದೀನದಯಾಳೋ.

ನೆರೆ ಮನೆಯ ಭಾಗ್ಯ ನೋಡಿ ಸಹಿಸಲಾರದ ಅಸೂಯನಾಗಿ,
ಹರಿಸ್ಮರಣೆದೆ ವಿಮುಖನಾದೆ ನರರ ಸ್ತುತಿಯ ಮಾಡಿದೆ,
ಪರರ ಸತಿಗೆ ಪರರ ಅನ್ನಕ್ಕೆ ತಿರುಗಿ ತಿರುಗಿ ಚಪಲನಾದೆ,
ಗುರು ಹಿರಿಯರ ದೂಷಿಸಿ ಮರುಳನಾದೆ ದೀನಶರಣ್ಯ.

ಅಗಣಿತ ಸುಖ ಬಂದರೇ ನಾ ದುಃಖ ಬಂದರೆ ಹರಿಯೆಂಬುವೆ,
ಜಗದೊಳು ಲಾಭವು ಬಂದರೆ ಧನಿಕ ನಾನೆಂಬೇ.
ಮಿಗೆ ಹಾರಿಗೆ ಹರಿಯ ದೂಷಿಸಿ ನಗೆದು ಪತಂಗ ತಿಚ್ಚಿಲಿ ಬೀಳ್ವ,
ಬಗೆ ಆದೆನು ಪುರಂದರವಿಠಲ ಖಗ ರಾಜಸುವಾಹನ.

# ಎಂಥ ದಯವಂತನೋ ಮಂತ್ರಮುನಿ ನಾಥನೂ

ಎಂಥ ದಯವಂತನೋ ಮಂತ್ರಮುನಿ ನಾಥನು,
ಸಂತತದೀ ತನ್ನನು ಇಂತಿಪರೀ ಕಾಮಧೇನು.

ವರ ಪ್ರಹ್ಲಾದನು, ಮರಳಿ ಬಾಹ್ಲೀಕನು,
ಗುರು ವ್ಯಾಸರಾಯನು, ಪರಿಮಳಾಚಾರ್ಯನು,
ಎಂಥ ದಯವಂತನೋ ಮಂತ್ರಮುನಿ ನಾಥನು.

ಇರುವ ತುಂಗಾತಟದಲಿ ಬರುವ ತಾನು ಕರೆದಲ್ಲಿ,
ಕರವ ಪಿಡಿದು ಪೊರೆವಲ್ಲಿ, ಸರಿಗಾಣೆ ಧರೆಯಲಿ,
ಎಂಥ ದಯವಂತನೋ ಮಂತ್ರಮುನಿ ನಾಥನು.

ಮರುತಾವೇಷ ಯುಕ್ತನು ದುರಿತ ಕಳೆವ ಶಕ್ತನು,
ತರಣಿ ನಿಭ ಗಾತ್ರನು, ಪರಮ ಸುಚರಿತ್ರನು,
ಭೂಮಿಯೊಳು ಖ್ಯಾತನು, ಶ್ಯಾಮಸುಂದರಪ್ರೀತನು,
ಕಾಮಿತಾರ್ಥ ದಾತನು, ಸ್ವಾಮಿ ನಮಗೆ ಈತನು.
ಎಂಥ ದಯವಂತನೋ ಮಂತ್ರಮುನಿ ನಾಥನು.

# ಎಂಥಾ ಪುಣ್ಯವೇ ಗೋಪೀ

ಎಂಥಾ ಪುಣ್ಯವೇ ಗೋಪೀ, ಎಂಥಾ ಭಾಗ್ಯವೇ ನಿನ್ನ,
ಇಂಥ ಮಗನ ಕಾಣೆನೇ!

ಚಿಂತಿಸಿದರೂ ದೊರಕ ಚೆಲುವ ರಾಜಗೋಪಾಲ,
ಚಿಂತೆ ಎಲ್ಲವು ಪೋಕುದೇ ಕೇಳೇ ಯಷೋದೇ.
ಎಂಥಾ ಪುಣ್ಯವೇ ಗೋಪೀ, ಎಂಥಾ ಭಾಗ್ಯವೇ ನಿನ್ನ,
ಇಂಥ ಮಗನ ಕಾಣೆನೇ!

ಸರಸಿಜನಾಭನ ಸುಮ್ಮನೆ ಕಂಡರೆ,
ದುರಿತವೆಲ್ಲವು ಪೋವುದೇ.
ಸರಸ ಬಾಡುತ ಬಂದು ಸವಿಮಾತನಾಡಿದರೇ,
ಹರುಷ ಕೈ ಗೂಡುವರೇ ಕೇಳೇ ಯಷೋದೇ.
ಎಂಥಾ ಪುಣ್ಯವೇ ಗೋಪೀ, ಎಂಥಾ ಭಾಗ್ಯವೇ ನಿನ್ನ,
ಇಂಥ ಮಗನ ಕಾಣೆನೇ!

ನಿನ್ನ ಮಗನ ಕರೆಯೇ ಎಮ್ಮ ಪ್ರಾಣದ ದೊರೆಯೇ,
ಘನ್ನನು ಪರಬ್ರಹ್ಮನೇ.
ಚೆನ್ನ ಶ್ರೀ ಪುರಂದರವಿಠಲ ರಾಯನ,
ನಿನ್ನಾಣೆ ಬಿಡಲಾರೆನೇ ಕೇಳೇ ಯಷೋದೇ.
ಎಂಥಾ ಪುಣ್ಯವೇ ಗೋಪೀ, ಎಂಥಾ ಭಾಗ್ಯವೇ ನಿನ್ನ,
ಇಂಥ ಮಗನ ಕಾಣೆನೇ!

## ಎಂಥ ತವಳೀಗಾರನಮ್ಮಾ

ಎಂಥ ತವಳೀಗಾರನಮ್ಮಾ ಗೋಪ್ಯಮ್ಮ ಕೇಳೇ,
ಎಂಥ ತವಳೀಗಾರನಮ್ಮಾ!

ಗುಗುಡೀಯ ತೊಟ್ಟೆನೆಂದು ಬೆಡಗಿಂದ ಎನ್ನ ತಂದ,
ಗುಗುಡೀ ಕೇಳಿದ ಇಲ್ಲ ಗುಗುಡಿ ಪಾಂಡವರಾಡ್ತಾರೇ,
ಪಗಡಿ ಚೀ ಅಕ್ಕ ಗೋಗು ತಗಡಿ ಎಂದೆನ್ನುತ್ತಾನೇ,
ಎಂಥ ತವಳೀಗಾರನಮ್ಮಾ!

ತೊಪ್ಪನ್ನೂ ಕೊಟ್ಟೇನೆಂದು ಒಪ್ಪೀಸಿ ಎನ್ನ ಕಂದ,
ಕೊಕ್ಕ ಕೇಳಿದ ಇಲ್ಲ ಸುಕ್ಕ ???? ಒಳಗಿನ,
ತುಪ್ಪ ತಿಂತಾನೆ ಕರಿಗೆ ಸೊಪ್ಪ ನೆಂದೆನ್ನುತ್ತಾನೇ,
ಎಂಥ ತವಳೀಗಾರನಮ್ಮಾ!

ಹಣವನ್ನು ಕೊಟ್ಟೇನೆಂದು ಗುಣದಿಂದ ಎನ್ನ ತಂದ,
ಹನವ ಕೇಳಿದ ಇಲ್ಲ ?? ಇಲ್ಲದೆ ???
ಹೊಗೆಲೆ ???? ಎಂದೆನ್ನುತ್ತಾನೇ,
ಎಂಥ ತವಳೀಗಾರನಮ್ಮಾ!

ಆದಿಕೇಷವನ ಮೇಲೇ ಆಣೆ ಇಟ್ಟು ಎನ್ನ ತಂದ,
ಆಣೆ ???ದೆಂದು ವರದ ಹಿಂಗೆಣಿಸುತ್ಥ,
ಸಿರಿದಾ ಆನಂದದಿಂದ ಬೆರೆದಾ ಗೊಪ್ಯಮ್ಮಾ ಕೇಲೇ,
ಎಂಥ ತವಳೀಗಾರನಮ್ಮಾ!

Needs major modification

# ಎಂಥವನೆಂಥವನೇ ರಂಗೈಯ್ಯಾ

ಎಂಥವನೆಂಥವನೇ ರಂಗೈಯ್ಯಾ!

ಆಗಮವನು ತಂದವನೇ ರಂಗಾ,
ವೇಗದಿ ಗಿರಿಯ ಹೊತ್ತವನೇ,
ಮೂಗಿಂದ ಭೂಮಿಯನೆತ್ತಿದನೇ,
ಶಿಶು ಕೂಗಲು ಕಂಭದಿಂದೊದಗಿದನೇ, ಕೃಷ್ಣಾ,
ಎಂಥವನೆಂಥವನೇ ರಂಗೈಯ್ಯಾ!

ಧರಣಿಯ ಈರಡಿ ಮಾಡಿದನೇ,
ಭೂಸುರನಾಗಿ ಪರಶುವ ಧರಿಸಿದನೇ,
ಭರದಿ ಕೊದಗ ನಿಂದು ಕೂಡಿದನೇ,
ಫಣಿ ಶಿರದಲ್ಲಿ ಕುಣಿದಾಡಿದನೇ, ರಂಗಾ,
ಎಂಥವನೆಂಥವನೇ ರಂಗೈಯ್ಯಾ!

ಉಟ್ಟಿದ್ದ ಬಟ್ಟೆಯ ಬಿಸುಟಿಹನೇ ರಂಗಾ,
ದಿಟ್ಟ ತೇಜಿಯನೇರಿ ಮೆರೆಯುವನೇ,
ದುಷ್ಟರನೆಲ್ಲ ಸಂಹರಿಸಿದನೇ, ನಮ್ಮ,
ಧಿಟ್ಟ ಪುರಂದರವಿಠಲನೇ ಕೃಷ್ಣನೇ.
ಎಂಥವನೆಂಥವನೇ ರಂಗೈಯ್ಯಾ!

## ಏನು ಧನ್ಯಳೋ ಲಕುಮಿ

ಏನು ಧನ್ಯಳೋ ಲಕುಮಿ, ಎಂಥ ಮಾನ್ಯಳೋ,
ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು.

ಕೋಟಿ-ಕೋಟಿ ಭೃತ್ಯದಿರಲು ಹಾಟಕಾಂಬರನ ಸೇವೆ,
ಸಾಟಿ ಇಲ್ಲದೆ ಮಾಡಿ ಪೂರ್ಣ ನೋಟದಿಂದಲಿ ಸುಖಿಸುತಿಹಳು.
ಏನು ಧನ್ಯಳೋ ಲಕುಮಿ, ಎಂಥ ಮಾನ್ಯಳೋ!

ಛತ್ರ-ಚಾಮರ-ವ್ಯಜನ-ಪರ್ಯಂಕ, ಪಾತ್ರ ರೂಪದಲ್ಲಿ ನಿಂತು,
ಚಿತ್ರ ಚರಿತನಾದ ಹರಿಯ ನಿತ್ಯ ಸೇವೆ ಮಾಡುತಿಹಳು.
ಏನು ಧನ್ಯಳೋ ಲಕುಮಿ, ಎಂಥ ಮಾನ್ಯಳೋ!

ಸರ್ವತ್ರದೀ ವ್ಯಾಪ್ತನಾದ, ಸರ್ವದೋಷರಹಿತನಾದ,
ಶರ್ವವಂದ್ಯನಾದ ಪುರಂದರವಿಠ್ಠಲನ್ನ ಸೇವಿಸುವಳು.
ಏನು ಧನ್ಯಳೋ ಲಕುಮಿ, ಎಂಥ ಮಾನ್ಯಳೋ!

# ಏನು ಇಲ್ಲದ ಎರಡು ದಿನದ ಸಂಸಾರ

ಏನು ಇಲ್ಲದ ಎರಡು ದಿನದ ಸಂಸಾರ,
ಜ್ಞಾನದಲಿ ದಾನ-ಧರ್ಮವ ಮಾಡಿರೈಯ್ಯಾ.

ಹಸಿದು ಬಂದವರಿಗೆ ಅಶನವೀಯಲು ಬೇಕು,
ಶಿಶುವಿಗೆ ಪಾಲ್ಬೆಣ್ಣೆ ಉಣಿಸ ಬೇಕು,
ಹಸನಾದ ಭೂಮಿಯನು ಧಾರೆಯೆರೆಯಲಿ ಬೇಕು,
ಹುಸಿ ಮಾಡದನೆ ಭಾಷೆ ನಡೆಸಲೆ ಬೇಕು.

ಕಳ್ಳತನಗಳ ಮಾಡಿ ಒಡಲ ಹೊರೆಯಲು ಬೇಡ,
ಕುಳ್ಳಿರ್ತ ಸಭೆಯೊಳಗೆ ಕುಟಿಲ ನಡೆಸಲು ಬೇಡ,
ಒಳ್ಳೆಯವ ನಾನೆಂದು ಬಲು ಹೆಮ್ಮೆಲಿರ ಬೇಡ,
ಬಾಳ್ವೆ ಸ್ಥಿರವೆಂದು ನೀ ನಂಬಿ ಕೆಡ ಬೇಡ.

ದೊರೆತನವು ಬಂದಾಗ ಕೆಟ್ಟ ನುಡಿಯಲು ಬೇಡ,
ಸಿರಿವಂತ ಕಾಲಕ್ಕೆ ಮೆರೆಯ ಬೇಡ,
ಸಿರಿವಂತನಾದರೆ ನೆಲೆ ಆದಿಕೇಷವನ,
ಚರಣ ಕಮಲವ ಸೇರಿ ಸುಖಿ ಆಗು ಮನುಜಾ.

# ಏನು ಕಾರಣ

ಏನು ಕಾರಣ ಬಾಯ ತೆರೆದಿ ಪೇಳೆಲೊ ದೇವ,
ದಾನವಾಂತಕ ಅಹೊಬಲ ನಾರಸಿಂಹಾ.

ನಿಗಮಚೋರಕನಾ ಕೊಲಲು ತೆರೆದೆಯೊ ಬಾಯ,
ನಗವ ಬೆನ್ನಲಿ ಪೊತ್ತು ನಡುಗಿ ತೆರೆದೆಯೊ ಬಾಯ,
ಭುಮಿಗಳ್ಳನ ಕೊಂದು ಬಳಲಿ ತೆರೆದೆಯೊ ಬಾಯ,
ಜಗವರಿಯೆ ಪೇರೂರ ವಿರಿದಾ ಪ್ರಹ್ಲಾದವರದ ನರಸಿಂಹ ನರಸಿಂಹ.

ಬಲಿಯ ದಾನವ ಬೇಡಲೆಂದು ತೆರೆದೆಯೊ ಬಾಯ,
ಛಲದಿಂದ ಕ್ಷತ್ರಿಯರ ಕೊಲಲು ತೆರೆದೆಯೊ ಬಾಯ,
ಕುಲಸತಿಯ ಅರಸಿ ಕಾಣದೆ ತೆರೆದೆಯೊ ಬಾಯ,
ಮಲೆತು ಮಾವನ ಕೊಂದು ನಿಂದೇ ಇಂಥಾ, ಭೂಮಿಗಿಳಿದ ನಾರಸಿಂಹ ನರಸಿಂಹ.

ನಾರಿಯರ ಚೆಲ್ವಿಕೆಯ ನೋಡಿ ತೆರೆದೆಯೊ ಬಾಯ,
ಏರಿ ಅಶ್ವವ ಮೆಟ್ಟಿ ಅಳಲಿ ತೆರೆದೆಯೊ ಬಾಯ,
ಮಾರಪಿತ ಕಾಗಿನೆಲೆ ಆದಿಕೇಷವರಂಗ,
ಧೀರ ಶ್ರೀನಾಥ ಭವನಾಶ ಪೇಳೋ ನಾರಸಿಂಹ ನಾರಸಿಂಹ.

# ಏನು ಸಾಧನ ಮಾಡಿ

ಏನು ಸಾಧನ ಮಾಡಿ ಕೃಷ್ಣನಾ ಕರವ ಸೇರಿತೋ,
ಕೊಳಲೂ ಕರವ ಸೇರಿತೋ.
ಸಾನುರಾಗದಿ ಶ್ರವಣ–ಮನನ–ಧ್ಯಾನಗೈದಿತೋ ಬಹುಜಂಮದಿ.

ಮುರಮಥನನ ಅಭಯ ಕರದ ವರಪ್ರಸಾದವಾ, ಕಮಲೋದ್ಭವ,
ಸ್ಮರರಿ ಕುಮುಖ ಸುರರೂ ಬೇಡಲು ದೊರೆಯದೀ ವಿಭವಾ, ವಂಶೋದ್ಭವ.

ತ್ರಾಣವೇನು ಮುರಲಿಗೇ ಶ್ರಿ ಹರಿಯ ವದನದೊಳು ಸುಧೆಸವಿಯಲು,
ಶ್ರಿ ನರಸಿಂಹನ ರಾಣಿ ತಾನೇ ವೇಣುರಂಧ್ರದೊಳು ನಿಂದಿರುವಳು.

## ಏನು ಸುಖವೊ ಎಂಥಾ ಸುಖವೊ

ಏನು ಸುಖವೊ ಎಂಥಾ ಸುಖವೊ,
ಹರಿಯ ಧ್ಯಾನ ಮಾಡುವರ ಸಂಗ.

ತಂಬೂರಿ ಮೀಟುದ ತ್ರಯ ಅಂಬಕದಿ,
ಬಾಷ್ಪ ಬಿಂದು ತುಂಬಿ ಆನಂದದಿಂದ,
ಸಂಭ್ರಮವಾಗಿ ಈಹರ ಸಂಗ.

ಗೆಜ್ಜೆಯ ಕಾಲಲಿ ಕಟ್ಟಿ, ಲಜ್ಜೆ ಬಿಟ್ಟು ಹರಿಯ ನಾಮ,
ಗರ್ಜನೆ ಮಾಡುತ್ತ ಅಧ ಪರ್ಜಿತರಾ ಇಹರ ಸಂಗ.
ಪುಷ್ಪದಿ ಸುಗಂಧ ಹ್ಯಾಗೆ ಇಪ್ಪುದ ತದ್ವತು ಜಗದ,
ಅಪ್ಪ ಬ್ರಹ್ಮಾದಿಗಳೊಳಗೆ ಇಪ್ಪನೆನ್ನುವರ ಸಂಗ.

ತುಚ್ಛ ವಿಷಯಗಳ ತೊರೆದು, ನಿಶ್ಚಲ ಭಕುತಿ ಇಂದ,
ಅಚ್ಯುತಾನಂತನ ಪಾದ ಮೆಚ್ಚಿಸಿದವರ ಸಂಗ.
ಗರ್ವೆಯಂತೆ ಜೀವವನ್ನು ಸರ್ವತ್ರ ತಿಳಿದು ಶೆಷ,
ಪರ್ವತವಾಸನ ಕಂಡು ಉರ್ವಿ ಒಳು ಇಹರ ಸಂಗ.

ಅಡೆವುದು ನುಡಿವುದು ಕೊಡುವುದು ಕೊಂಬುಹುದು,
ಒಡೆಯನ ಪ್ರೇರಣೆ ಎಂದು ನುಡಿದು ಹಿಗ್ಗುವರ ಸಂಗ.
ಸ್ರಿಷ್ಟಿಗ್ ಒಡೆಯನಲ್ಲಿ ಮನವಿಟ್ಟು ಭಜಿಸುತ ಜ್ಞಾನ,
ಶಿಷ್ಟರಾಗಿ ಶ್ರೀ ಕೃಷ್ಣಗೆ ಇಷ್ಟರಾಗಿ ಇಪ್ಪರ ಸಂಗ.

## ಎಷ್ಟು ಸಾಹಸವಂತ

ಎಷ್ಟು ಸಾಹಸವಂತ ನೀನೇ ಬಲವಂತ,
ದಿಟ್ಟ ಮೂರುತಿ ಭಳಿರೆ ಭಳಿರೆ ಹನುಮಂತ.
ಅಟ್ಟು ಅಖಳರೆದೆ ಮೆಟ್ಟಿ ತುಳಿದು ತಲೆ,
ಕುಟ್ಟಿ ಚೆಂಡಾಡಿದ ದಿಟ್ಟ ನಿನಗುದೋ.

ರಾಮರಪ್ಪಣೆ ಇಂದ ಶರಧೀಯ ದಾಂಟೀ,
ಆ ಮಹಲಂಕೆಯ ಕಂಡೆ ಕಿರೀಟೀ.
ಸ್ವಾಮಿಯ ಕಾರ್ಯವ ಪ್ರೇಮದಿ ನಡೆಸಿದಿ,
ಈ ಮಹಿಯೊಳು ನಿನಗಾರಯಿ ಸಾಟಿ?
ದೂರದಿಂದ್ ಅಸುರನ ಉರವನೆ ನೋಡೀ,
ಭರದಿ ಶ್ರೀ ರಾಮನ ಸ್ಮರಣೆಯ ಮಾಡೀ,
ಆದಿದೆ ಹರುಷದಿ ಹರಿಸಿ ಲಂಕಿಣಿಯನು
ವಾರಿಜಮುಖಿಯನು ಕಂಡು ಮಾತಾಡಿ.

ರಮರಕ್ಷೇಮವ ರಮಣಿಗೆ ಪೇಳಿ,
ತಾಮಸ ಮಾಡದೆ ಮುದ್ರಿಕೆ ನೀಡಿ,
ಪ್ರೇಮದಿ ಜಾನಕಿ ಕುರುಹನು ಕೊಡಲಾಗ,
ಆ ಮಹವನ ದೊಳು ಫಲವನು ಬೇಡಿ,
ಕಣ್ಣಿಗೆ ಪ್ರಿಯವಾದ ಹಣ್ಣನು ಕೊಯ್ದು,
ಹಣ್ಣಿನ ನೇವದಲಿ ಅಸುರರ ಹೊಯ್ದು,
ಬಣ್ಣ ಪಣ್ಣನೆ ಹರಿ ನೆಗೆ-ನೆಗೆದಾಡುತ,
ಬಣ್ಣಿಸಿ ಅಸುರರ ಬಲವನು ಮುರಿದು.

ಶೃಂಗಾರ ವನದೊಳಗೆ ಇದ್ದ ರಕ್ಕಸರ,
ಅಂಗವನಳಿಸಿದೆ ಅತಿ ರಣ ಶೂರ,
ನುಂಗಿ ಅಸ್ತ್ರಗಳ ಅಕ್ಷಯ ಕುಮರನ,
ಭಂಗಿಸಿ ಬಿಸುಟೆಯೊ ಕಂದ ರಕ್ಕಸರ,
ದೂರು ಪೇಳಿದರೆಲ್ಲ ರಾವಣನೊಡನೆ,
ಚೀರುತ್ತ ಕರೆಸಿದ ಇಂದ್ರಜಿತ್ತುವನೇ,
ಘೋರ ಕಪಿಯನೀ ಹಿಡಿತಹುದೆನ್ನುತ,
ಚೂರರ ಕಳುಹಿದ ನಿಜ ಸುತನೊಡನೆ.

ಹಿಡಿದನು ಇಂದ್ರಜಿತ್ತು ಕಡು ಕೋಪದಿಂದ,
ಚೆನೆಮೂರಿ ಕಟ್ಟಿದಾ ಬ್ರಹ್ಮಾಸ್ತ್ರದಿಂದ,
ಗುಡು-ಗುಡು ಗುಟ್ಟುತ ಕಿಡಿ-ಕಿಡಿ ಆಗುತ,
ನಡೆದನು ಲಂಕೆಯ ಒಡೆಯನಿದ್ದೆಡೆಗೆ,
ಕಂಡನು ರಾವಣನು ಉದ್ದಂಡ ಕಪಿಯನು,
ಮಂಡೆಯ ತೂಗುತ್ತ ಮಾತಾಡಿಸಿದನು,
ಭಂಡು ಮಡದೆ ಬಿಡೆ ನೋಡು ಕಪಿಯನೆ,

ಗಂಡು ಗಲಿಯುದುರು ದುರಿಸಿ ನೋಡಿದನು.

ಛಲವ್ಯಾಕೊ ನಿನಗಿಷ್ಟು ಎಲವೋ ಕೋಡಗನೇ,
ನೆಲೆ ಆವುದು ಹೇಳೊ ನಿನ್ನೊಡೆಯ ಹೆಸರನ್ನ,
ಬಲವಂತ ರಾಮರ ಬಂಟ ಬಂದಿಹೆನೊ,
ಹಲವು ಮಾತ್ಯಾಕೊ ಹನುಮನು ನಾನೇ,
ಬಡ ರಾವಣನೆ ನಿನ್ನ ಬಡಿದು ಹಾಕುವೆನೋ,
ಒಡೆಯನಪ್ಪಣೆ ಇಲ್ಲ ಎಂದು ತಾಳಿದೆನೋ,
ಕುಡಿ ಏಳಿಸುವೆನು ಫುಲ್ಲ ರಕ್ಕಸರನೇ,
ತೊಡವೆಲು ನಿನ್ನ ಪಣೆಯ ಅಕ್ಷರವ.

ನಿನ್ನಂಥ ದೂತರು ರಾಮನ ಬಳಿಯೊಳು,
ಇನ್ನೆಷ್ಟು ಮಂದಿ ಉಂಟು ಹೇಳೋ ನಿತ್ವರಿಯ,
ನನ್ನಂಥ ದೂತರು ನಿನ್ನಂಥ ಪ್ರೇತರು,
ಇನ್ನೂರು-ಮುನ್ನೂರು ಕೋಟಿ ಕೇಳರಿಯಾ,
ಕಡು ಕೋಪದಿಂದಲಿ ಖೂಳ ರಾವಣನು,
ಸುಡೀರೆಂದ ಬಾಲವ ಸುತ್ತಿ ವಸನವಾ,
ಒಡೆಯನ ಮಾತಿಗೆ ತಡೆ-ಬಡೆ ಇಲ್ಲದೆ,
ಒಡನೆ ಮುತ್ತಿದರು ದಡಿ ಮನೆಯವರು.

ತಂದರು ವಸನವ ತಂಡ-ತಂಡದಲಿ,
ಒಂದೊಂದು ಮೂಟೇ ಯೆಂಬತ್ತು ಕೋಟಿಯಲಿ,
ಚಂದದಿ ಹರಳಿನ ತೈಲದೋಳ್ ಅದ್ದಿಸಿ,
ನಿಂದ ಹನುಮನು ಬಾಲವ ಬೆಳಸುತ,
ಶಾಲೂ ಸಕಲಾಟಿಯು ಸಾಲದೆ ಇರಲು,
ಬಾಲೇರ ವಸ್ತ್ರವ ಸೆಳೆದುತಾರೆನಲು,
ಬಾಲವ ನಿಲ್ಲಿಸೆ ಬೆಂಕಿಯನಿಡುತಲಿ,
ಕಾಲ ಮೃತ್ಯುವಾ ಕೆಣಕಿದರಲ್ಲಿ.

ಕುಣಿ-ಕುಣಿದಾಡುತ ಕೂಗಿ ಬೊಬ್ಬೆಡುತ,
ಕಿಣಿಕಿ ನೋಡುತ ಅಸುರರ ನಣಕಿಸುತ,
ಝುಣ-ಝುಣ-ಝುಣರೆನೆ ಬಾಲದ ಗಂಟೆಯು,
ಮನದಿ ಶ್ರೀ ರಾಮರ ಪಾದವ ನೆನೆಯುತ,
ಮಂಗಳಮ್ ಶ್ರೀ ರಾಮಚಂದ್ರ ಮೂರುತಿಗೆ,
ಮಂಗಳಮ್ ಸೀತಾದೇವಿ ಚರಣಂಗಳಿಗೆ,
ಮಂಗಳವೆನುತ ಲಂಕೆಯ ಸುಟ್ಟು,
ಲಂಗಿಸಿ ಅಸುರನ ಗಡ್ಡಕೆ ಹಿಡಿದಾ.

ಹೊತ್ತಿತು ಅಸುರನ ಗಡ್ಡ ಮೀಸೆಗಳು,
ಸುತ್ತಿತು ಹೊಗೆ ಬ್ರಹ್ಮಾಂಡ ಕೋಟಿಯೊಳು,
ಚಿತ್ತದಿ ರಾಮರು ಕೋಪಿಸುವರುಯೆಂದು,
ಚಿತ್ರದಿ ನಡೆದನು ಅರಸನಿದ್ದಡೆಗೆ,

ಸೀತೇಯ ಕ್ಷೇಮವ ರಾಮರಿಗ್ ಹೇಳಿ,
ಪ್ರೀತಿಯಿಮ್ ಕೊಟ್ಟ ಕುರುಹ ಕರದಲ್ಲಿ,
ಸೇತುವೆ ಕಟ್ಟಿ ಚತುರಂಗ ಬಲ ಸಹ
ಮುತ್ತಿತು ಲಂಕೆಯ ಸೂರೆಗೈಯುತಲಿ.

ಹೆಗ್ಗಳವಾಯಿತು ರಾಮರ ದಂಡು,
ಮುತ್ತಿತು ಲಂಕೆಯ ಕೋಟೆಯ ಕಂಡು,
ಹೆಗ್ಗದ ಕಾಯ್ವರ ನುಗ್ಗು ಮಾಡುತಿರೆ,
ಧಕ್ಕನೆ ಪೇಳ್ದರು ರಾವಣಗಂದು,
ರಾವಣ ಮೊದಲಾದ ರಾಕ್ಷಸರ ಕೊಂದು,
ಭಾವ ಶುದ್ಧದಲಿ ವಿಭೀಷಣ ಬಾಳೆಂದು,
ದೇವಿ ಸೀತೇಯನೊಡಗೊಂಡು ಅಯೋಧ್ಯದಿ,
ದೇವ ಶ್ರೀ ರಾಮ ರಾಜ್ಯವಾಳಿದರು.

ಶಂಖ ದೈತ್ಯನ ಕೊಂದೇ ಶರಣು ಶರಣ್ಯೆಯ್ಯಾ,
ಶಂಖ ಗಿರಿಯಲಿ ನಿಂದ ಹನುಮಂತರಾಯ,
ಪಂಕಜಾಕ್ಷ ಹಯವದನನ ಕಟಾಕ್ಷದಿ,
ಬಿಂಕದಿ ಪಡೆದೆಯೊ ಅಜನ ಪದವಿಯಾ.

# ಏತರ ಚೆಲುವ ರಂಗೈಯ್ಯಾ

ಏತರ ಚೆಲುವ ರಂಗೈಯ್ಯಾ,
ಹರಿ ಎಂಬಾ ಮಾತಿಗೆ ಮರುಳಾದೆನಲ್ಲದೇ.

ದೇಶ-ಕೋಶಗಳ್ ಉಳ್ಳೋಡೇ,
ತಾಕ್ಷೀರವ ರಾಶಿಯೊಳಗೆ ಮನೆ ಕಟ್ಟುವನೇ,
ಹಾಸುವುದಕೆ ಹಾಸಿಗೆಯುಳ್ಳೋಡೇ ತಾ,
ಶೇಷನ ಬೆನ್ನಲ್ಲಿ ಮಲಗುವನೇ.

ಬುದ್ಧಿಯ ಪೇಳುವ ಪಿತನುಳ್ಳೋಡೇ,
ಬೆಣ್ಣೆ ಕದ್ದು ಚೋರನೆಂದೆನಿಸುವನೇ,
ಬದ್ಧ ವಾಹನ ತನಗಿದ್ದಾರೆ ಹಾರುವ,
ಹದ್ದಿನಮೇಲ್ ಏರಿ ತಿರುಗುವನೇ.

ಮದನಜನಕ ತಾನು ಸೊಬಗುಳ್ಳನಾದರೆ,
ಮುದುಕಿ ಕುಬುಜೆಯನು ಕೂಡುವನೇ,
ಮತಿವಂತ ಪುರಂದರವಿಠ್ಠಲರಾಯನು,
ಪತಿತ ಪಾವನನೆಂದು ಸ್ತುತಿಸಿದೇನಲ್ಲದೇ.

# ಗಜಮುಖ ಗಣಪತಿಗೆ ನಮೋ ನಮೋ

ಗಜಮುಖ ಗಣಪತಿಗೆ ನಮೋ ನಮೋ,
ತ್ರಿಜಗದೊಳ್ ಪೂಜಿತಗೆ ನಮೋ ನಮೋ,
ಗಣಪತಿಗೆ ನಮೋ.

ಸಿದ್ಧಿ ವಿನಾಯಕಗೆ, ವಿದ್ಯ ಪ್ರದಾಯಕಗೆ,
ಸಿದ್ಧಿ ವಿನಾಯಕಗೆ ನಮೋ ನಮೋ,
ವಿದ್ಯ ಪ್ರದಾಯಕಗೆ ನಮೋ ನಮೋ.
ಲಡ್ಡಿಗೆ ಮೋಧಕ ನೈವೇದ್ಯ ನಿನಗೆ,
ಲಡ್ಡಿಗೆ ಮೋಧಕವ ನಮೋ ನಮೋ,
ನೈವೇದ್ಯಗ್ ಅರ್ಪಿಸುವೇ ನಮೋ ನಮೋ,
ಗಣಪತಿಗೆ ನಮೋ.

ಹರನ ಕುಮಾರನೆ ಗಿರಿಜೆಯ ವರಪುತ್ರ,
ಹರನ ಕುಮಾರನೆ ನಮೋ ನಮೋ,
ಗಿರಿಜೆಯ ವರಪುತ್ರನೆ ನಮೋ ನಮೋ.
ಹರಿಕಥೆಗಳ ಪೇಳ್ವೆ ವರ ಮತಿ ಪಾಲಿಸು,
ಹರಿಕಥೆಗಳ ಪೇಳ್ವೆನೊ ನಮೋ ನಮೋ,
ವರ ಮತಿ ಪಾಲಿಸು ನಮೋ ನಮೋ,
ಗಣಪತಿಗೆ ನಮೋ.

ಆಕಾಷಕ್ ಅಭಿಮಾನಿ ಮೂಶಿಕ ವಾಹನ,
ಆಕಾಷಕ್ ಅಭಿಮಾನಿಗೆ ನಮೋ ನಮೋ,
ಮೂಶಿಕ ವಾಹನಗೆ ನಮೋ ನಮೋ.
ಭೀಮೇಶ ಕೃಷ್ಣ ಕಥೆ ಸಂತೋಷದಿ ಪೇಳ್ವೆ,
ಭೀಮೇಶ ಕೃಷ್ಣ ಕಥೆ ನಮೋ ನಮೋ,
ಸಂತೋಷದಿ ಪೇಳ್ವೆನೊ ನಮೋ ನಮೋ,
ಗಣಪತಿಗೆ ನಮೋ.

# ಗಜಮುಖ ಸಲಹೆನ್ನ ದಯದಿ

ಗಜಮುಖ ಸಲಹೆನ್ನ ದಯದಿ;
ಗಜಮುಖ ಸಲಹೆನ್ನ ತ್ರಿಜಗದಿ ಪೂಜ್ಯನೇ,
ನಿಜ ಮತಿ ನೀ ಪಾಲಿಸಿ.

ವಿಘ್ನನಾಯಕ ಎನ್ನ ಅಜ್ಞಾನ ಖಂಡಿಸಿ,
ವಿಘ್ನವ ತಾರದೆ ಸುಜ್ಞಾನ ಕರುಣಿಸು.
ಅಮರಾತಿ ವಿನುತ ಹಿಮಸುತೇ ಸಂಜಾತ,
ವಿಮಲ ಸುಚರಿತನೇ ಸುಮನಸ ಪ್ರೀತ,
ವರದ ಶ್ರೀ ರಾಮನ ಚರಣ ಸ್ಮರಣೆಯನ್ನು,
ಹೃದಯದಿ ಸ್ಥಿರಗೈ ಕರಿ ಮುಖ ಸ್ಮರಿಸುವೆ.

## ಗಜಮುಖ ವಂದಿಸುವೆ ಗಿರಿಜಾ ತನಯ

ಜಯತಿ ಕರ್ಕಟೀ ಚತ್ವರಂವರಮ್,
ಚತ್ರ ತರುತಲೇ ಸರ್ವ ಶಂಕರಮ್,
ಮಮ ಹರನ್ ಮನೋ ವರ್ಶ್ಮ ಬಂಧುರಮ್,
ಪಾರ್ವತೀ ಶಿಶೋಃ ಪರಮ ಸುಂದರಮ್.
ಅಸ್ತಿ ವಾ ಸುಮಮ್, ನಾಸ್ತಿ ವಾ ಸಮಮ್,
ವಿದ್ಯತೇ ದಲಮ್ ನಾಸ್ತಿ ವಾ ಜಲಮ್,
ಸರ್ವಮ್ ಅಸ್ತ್ಯಥೋ ನಾಸ್ತಿ ಕಿಂಚನ,
ಭಕ್ತಿ ಮೀಕ್ಷ್ಯಸೇ ತ್ವಮ್ ಇಹ ಕೇವಲಮ್.

ಗಜಮುಖ ವಂದಿಸುವೆ ಗಿರಿಜಾ ತನಯ,
ವ್ರಿಜಿನ ವಿದೂರ ಸುಜನ ಮಂದಾರ,

ವಿಷ್ವ ವಂದ್ಯನೆ ವಿಷ್ವೋಪಾಸಕನೆ,
ವಿಷ್ವಾಧಾರ ಶ್ರೀ ವಿಶ್ವಂಭರ ಪ್ರಿಯನೆ,
ವಿಷ್ವನಾಥ ಸುತ ವಿಷ್ವ ಪಾಲಕನೆ,
ವಿಷ್ವಕ್ಸೇನ ಸಮ ವಿಷ್ವ ಮಂಗಳನೆ.
ಆಖು ವಾಹನನೆ ಆಕಾಷದೊಡೆಯನೆ,
ಆಕಾರ ವಿಚಿತ್ರ ಆಖಂಡಲ ಸಖನೆ,
ಆನಮಿಪೆ ವಿಭುವೆ ಆಕಾಂಕ್ಷ ಪೂರೈಸೊ,
ಆದಿ ವಂದಿತನೆ ಆಭೋಗಿ ಧರನೆ.

## ಗಜಮುಖನೆ ಸಿದ್ಧಿದಾಯಕನೆ ವಂದಿಪೆ

ಗಜಮುಖನೆ ಸಿದ್ಧಿದಾಯಕನೆ ವಂದಿಪೆ, ಶರಣು ಶರಣು.
ತ್ರಿಜಗ ವಂದಿತನಾದ ದೇವ ದೇವನೆ ಶರಣು,
ಸುಜನರಿಗೆ ವಿಘ್ನವನು ಪರಿಹರಿಪೆ ಶರಣು.

ಮಂದ ಮತಿಯನು ಬಿಡಿಸಿ ಚಂದ ಜ್ಞಾನವನಿತ್ತು,
ಇಂದಿರೇಶನ ಪಾದ ಕೊಂದಿಪ್ಪ ತೆರದಿ.
ಸುಂದರಾಂಗನೆ ನಿನ್ನ ಪದ ದ್ವಂದ್ವಕೆರಗುವೆನು,
ಸಂದೇಹ ಮಾಡದಲೇ ಇಂದು ಕರುಣಿಪುದು.

ಸಿದ್ಧಿದಾಯಕ ನಿನ್ನ ಹೊದ್ದಿ ಮೆರೆವೆನೋ ನಾನು,
ಅಬ್ಧಿಶಯನನ ಮಹಿಮೆ ಬದ್ಧದಲಿ ಪೇಳ್ವೆ,
ಶುದ್ಧ ಮತಿಯನು ಕೊಟ್ಟು ಉದ್ಧರಿಸ ಬೇಕೆನ್ನ,
ಮಧ್ವ ವಲ್ಲಭ ವೇಣು ಕೃಷ್ಣಗ್ ಅತಿಪ್ರಿಯಾ.

# ಗಜವದನ ಪಾಲಿಸು!

ಗಜವದನ ಪಾಲಿಸು!

ತ್ರಿಜಗದೋಡೆಯ ಶ್ರೀ ಭುಜಗ ಭೂಷಣ,
ಗಜವದನ ಪಾಲಿಸು!

ಭಕ್ತಿಯೊಳ್ ಭಜಿಪೆನು, ರಕ್ತಾಂಬರಧರ,
ಮುಕ್ತಿ ಪಥವ ತೋರೋ,
ಕಡವಿಯೊಳಗೆ ನಿನ್ನ ಬಿಡುವರ್ ಯಾರೋ (ಅನ್ನ)?
ಕಡು ಹರುಷದಿ ಕಾಯೋ ವಿಜಯ ವಿಠ್ಠಲ ದಾಸಾ!

## ಗಣಪತಿ ಎನ್ನ ಪಾಲಿಸು

ಗಣಪತಿ ಎನ್ನ ಪಾಲಿಸು, ಗಂಭೀರಾ!

ಪಾರ್ವತಿ ನಂದನ ಸುಂದರ ವದನ,
ಸರ್ವ ಸುರ ವಂದ್ಯ ಶಿರ ಬಾಗುವೆ ನಾ.

ಆದಿ ಪೂಜಿತ ನೀನು, ಮೋದ ಭಕ್ತರಿಗಿತ್ತು,
ಮಾಧವನಲಿ ಮನ ಸದಾ ನಿಲಿಸು ನೀ,
ಪಂಕಜ ನಯನ ಶ್ರೀ ವೆಂಕಟ ವಿಠಲನ,
ಕಿಂಕರನೆನಿಸೆನ್ನ ಶಂಕರ ತನಯನೆ.

## ಗಿರಿರಾಯ ಗಿರಿರಾಯ

ಗಿರಿರಾಯ ಗಿರಿರಾಯ ಗಿರಿರಾಯ ಗಿರಿರಾಯ,
ಶರಣಾಗತ ಕರುಣಾಕರ ವೆಂಕಟ.

ಸ್ಮರಿಸುವೆ ನಿನ್ನನು ಸರಸಿಜ ಭವನುತ,
ಸ್ಮರತಾಮರತರು ದುರಿತ ವಿದೂರ,
ಶ್ರೀಕರ ಭವ ಭಯ ನೂಕಿಸಿ ಎನ್ನನು,
ಸಾಕೆಲೊ ಭೂಧರ ಸೂಕರ ರೂಪ.

ಆಪತ್ ಬಾಂಧವ ಶ್ರೀಪತಿ ಎನ್ನನು,
ಕಾಪಾಡೆಲೊ ಆಪದ್ಧರ ವೆಂಕಟ,
ಕಾಮಿತ ಫಲಪ್ರದ ಈ ಮಹಿತಳದೊಳು,
ಸಾಮಜ ವರದ ಸುಧಾಮನ ಸಖ ಪೊರೆ.

ದಾತನೆ ಗುರು ಜಗನ್ನಾಥ ವಿಠ್ಠಲನೆ,
ಪ್ರೀತನಾಗೊ ನಿನ್ನ ದೂತನು ನಾನೈ.

# ಗೊಲ್ಲನಿವನೇ ಸರಿ ಯಷೋದೇ

ಗೊಲ್ಲನಿವನೇ ಸರಿ ಯಷೋದೇ!

ಇತ್ತ ಗೋಗಳ ಕಾಯ್ದು ರಕ್ಷಿಸಿ ತಾ,
ಕದ್ದು ಬೆಣ್ಣೆಯ ಮೆದ್ದು ಪೋದನಮ್ಮಾ,
ಇತ್ತು ವರವ ದೇವಿ ಸುತನ ರಕ್ಷಿಸೆ,
ಮುತ್ತಿನಂತ ನಮ್ಮ ಮುದ್ದು ಶ್ರೀ ಕೃಷ್ಣ.

ಮುದ್ದಾದ ಮಾತಾಡಿ ಪುಟ್ಟ ಬಾಯೊಳು,
ಮೆತ್ತಾಗ ಮಣ್ಣನು ತೋರಿದ ಜಗವ,
ಎದ್ದು ಬಂದ ರಕ್ಕಸ ಕುಲವನೆಲ್ಲವ,
ಹೊದ್ದು ಕೆಡಗಿದ ಮುಕುಂದ ಮಾಧವ.

ಉಟ್ಟ ಪೀತಾಂಬರ ಕಡಗ ಕಾಲಿನಲಿ,
ಇಟ್ಟ ತಿಲಕದ ಬೊಟ್ಟು ಹಣೆಯಲಿ,
ತಟ್ಟಿ ಸಪ್ತಸ್ವರವ ನುಡಿಸೆ ಕೊಳಲಿನಲಿ,
ನಿಂತು ಉಡುಪಿಯ ಮಧ್ವ ಕ್ಷೇತ್ರದಲಿ.

# ಗೊಲ್ಲತಿಯರ ಕಣ್ಣ ದೃಷ್ಟಿ ಮಗಗಾಯಿತಮ್ಮ

ಗೊಲ್ಲತಿಯರ ಕಣ್ಣ ದೃಷ್ಟಿ ಮಗಗಾಯಿತಮ್ಮ,
ಬಹು ನಲ್ಲೆಯರು ಬಂದು ಮೆಚ್ಚು ಮದ್ದು ಮಾಡಿ ಹೋದರಮ್ಮ.

ಅಂಗಕ್ಕೆ ಒಳಿತಿಲ್ಲ ವಮ್ಮ, ಕಂಗಳು ಮುಚ್ಚ ಲೊಲ್ಲ ನಮ್ಮ,
ಹೆಂಗಳನೋಡುತಲೆ ಚಟ್ಟಕಿದನಮ್ಮ,
ತಂಗಿ ನೀರು ಎರೆದ್ಯೆವಮ್ಮ, ತುಂಗ ಗಾತ್ರ ಯೆದ್ದುನಮ್ಮ,
ಭಂಗ ಪಡಿಸುತ ಬಾಯ ತೆರೆದನಮ್ಮ.

ನೀನು ಮ್ಯೆಯ್ಯ ನೋಡಮ್ಮ ತನವು ಕಿರಿದಾಯಿತಮ್ಮ,
ಮೊಲೆ ಆನ ಕೊಡಲೆ ತಾಯ ನೋಡನಲ್ಲಮ್ಮ,
ಅನ್ನವ ಕೊಳಲೊಲ್ಲನಮ್ಮ ಅತಿ ಭೀತ ನಾದಾ,
ದ್ಯೆತ್ಯ ತನ್ನೆ ಮೊಲೆ ಹಾಲನುಂಡು ಬೆಳೆದನಲ್ಲಮ್ಮ.

ನಮ್ಮ ಮಾತು ಕೇಳನಮ್ಮ ಒಮ್ಮೆಗೆ ಮ್ಯೆ ಹೊದಿಯನಮ್ಮ,
ಸುಮ್ಮನೆ ಘೊರಸುತ್ತಾನೆ ಮಲಗನಲ್ಲಮ್ಮ,
ಗೊಮ್ಮ ಜೆಟ್ಟಿಗೆ ಮಾಡಿದೆವಮ್ಮ, ಒಮ್ಮೆಗಿಷ್ಟೆಲ್ಲ ವಾಯಿತಮ್ಮ,
ನಮ್ಮ ಹಯವದನಗಿನ್ನು ಅಂಜಿಕಿಲ್ಲಮ್ಮ.

# ಗೋವಿಂದ ಗೋವಿಂದ ನಿನ್ನ ಆನಂದ

ಗೋವಿಂದ ಗೋವಿಂದ ನಿನ್ನ ಆನಂದ,
ಸಕಲ ಸಾಧನವೋ ನಿನ್ನ ಆನಂದ.

ಅಣುರೇಣು ತ್ರಿಣ ಕಾಷ್ಟ ಪರಿಪೂರ್ಣ ಗೋವಿಂದ,
ನಿರ್ಮಲ ಆತ್ಮಕನಾಗಿ ಇರುವುದೆ ಆನಂದ.

ಸ್ರಿಷ್ಟಿ ಸ್ತಿಥಿ ಲಯ ಕಾರಣ ಗೋವಿಂದ,
ಈ ಪರಿ ಮಹಿಮೆಯ ತಿಳಿಯೊದೆ ಆನಂದ.

ಮಂಗಳ ಮಹಿಮ ಶ್ರೀ ಪುರಂದರವಿಠಲನು,
ಹಿಂಗದೆ ದಾಸರ ಸಲಹೊದೆ ಆನಂದ.

## ಗೋವಿಂದಾ ಹರೆ ಗೋವಿಂದಾ

ಗೋವಿಂದಾ ಹರೆ ಗೋವಿಂದಾ,
ವಾಸುದೇವ ಜಯ ಗೋವಿಂದಾ.

ಉಡುಪಿಯ ಕೃಷ್ಣ ಗೋವಿಂದಾ,
ಕೊಡವಿಗೊಡೆಯನೇ ಗೋವಿಂದಾ,
ಪಂಢರಿನಾಥಾ ಗೋವಿಂದಾ,
ಪಾಂಡುರಂಗವಿಠ್ಠಲ ಗೋವಿಂದಾ.

ತಿರುಪತಿ ವೆಂಕಟ ಗೋವಿಂದಾ,
ಶ್ರಿರಂಗನಾಥ ಗೋವಿಂದಾ,
ಕೃಷ್ಣ ಕೃಷ್ಣ ಜಯ ಗೋವಿಂದಾ,
ಅನಂತಶಯನ ಗೋವಿಂದಾ.

ಭಕ್ತವತ್ಸಲನೇ ಗೋವಿಂದಾ,
ಆಪತ್ಬಾಂಧವ ಗೋವಿಂದಾ,
ಅನಾಥ ರಕ್ಷಕ ಗೋವಿಂದಾ,
ಪತಿತ ಪಾವನ ಗೋವಿಂದಾ.

ಜಗದುದ್ಧಾರಕ ಗೋವಿಂದಾ,
ವಿಶ್ವಕುಟುಂಬೀ ಗೋವಿಂದಾ,
ಇಂದಿರೆ ಮಂದಿರ ಗೋವಿಂದಾ,
ಸುಂದರ ಮೂರುತಿ ಗೋವಿಂದಾ.

## **ಇಂದು ಕಂಡೇ ಚರಣಾ**

ಇಂದು ಕಂಡೇ ಚರಣಾ ಶ್ರೀ ಕೃಷ್ಣನಾ!

ಕೊಳಲ ಧ್ವನಿ ದೈವನಾ ಶ್ರೀಷನ, ಚೆಲುವಿಕ ಗೆದ್ದ ಕಾವನಾ,
ಹೆಡೆಯಲಿ ಕಾಳಿಂಗನಾ ಒಡನೆ ಕುಣಿದ ರಂಗನ.
ಇಂದು ಕಂಡೇ ಚರಣಾ ಶ್ರೀ ಕೃಷ್ಣನಾ!

ಗೋವರ್ಧನ ಎತ್ತಿದನಾ ಶ್ರೀಷನ, ಗೋವಳರ ಕಾಯ್ದನಾ,
ಬಾಲಕ ಲೀಲಾಲೋಲನಾ, ಮೂಲೋಕ ಜೀವ ಪಾಲನಾ.
ಇಂದು ಕಂಡೇ ಚರಣಾ ಶ್ರೀ ಕೃಷ್ಣನಾ!

ಮಹಿಪತಿ ನಂದನ ಜೀವನಾ, ಸಹಕಾರಿ ಪಾವನನಾ.
ಇಂದು ಕಂಡೇ ಚರಣಾ ಶ್ರೀ ಕೃಷ್ಣನಾ!

# ಇಷ್ಟು ಪಾಪಗಳ ಮಾಡಿದ್ದೇ ಸಾಕು

ಇಷ್ಟು ಪಾಪಗಳ ಮಾಡಿದ್ದೇ ಸಾಕು,
ಶ್ರಿಷ್ಟೀಶನೇ ಯೆನ್ನ ಉದ್ಧರಿಸ ಬೇಕು.

ಒಡಲ ಕಿಚ್ಚಿಗೆ ಪರರ ಕಡು ನೋಯಿಸಿದೆ ಕೃಷ್ಣಾ,
ಕೊಡದೆ ಅನ್ಯರ ಉಣವ ಅಪಹರಿಸಿದೇ,
ಮಡದಿಯ ನುಡಿ ಕೇಳಿ ಒಡಹುಟ್ಟಿದವರೊಡನೆ,
ಹಡೆದ ತಾಯಿಯ ಕೂಡೆ ಹಗೆ ಮಾಡಿದೆ.

ಸ್ನಾನ ಸಂಧ್ಯಾದಿಗಳ ಮಾಡದಲೆ ಮೈಗೆಟ್ಟೆ,
ಜ್ನಾನ ಮಾರ್ಗವನಂತು ಮೊದಲೇ ಬಿಟ್ಟೇ,
ಏನು ಪೇಳಲಿ ಪರರ ಮಾನಿನಿಗೆ ಮನಸಿಟ್ಟೆ,
ಶ್ವಾನ ಸೂಕರನಂತೆ ಹೊರೆದೆ ಹೊಟ್ಟೆ.

ವ್ರತ ನೇಮ ಉಪವಾಸ ಒಂದು ದಿನ ಮಾಡಿಲ್ಲ,
ಅತಿಥಿಗಳಿಗನ್ನವನು ನೀಡಲಿಲ್ಲ,
ಶ್ರುತಿ-ಶಾಸ್ತ್ರ-ಪೌರಾಣ ಕಥೆಗಳನು ಕೇಳಿಲ್ಲ,
ವೃಥವಾಗಿ ಬಹು ಕಾಲ ಗತವಾಯಿತಲ್ಲಾ.

ಶುದ್ಧ ವೈಷ್ಣವ ಕುಲದಿ ಉದ್ಭವಿಸಿದೇ ನಾನು,
ಮಧ್ವಮತ ಸಿದ್ಧಾಂತ ಪದ್ಧತಿಗಳಾ,
ಬುದ್ಧಿಪೂರ್ವಕ ತಿಳಿಯದೆ ಉದ್ದಂಡ ಕಾಯವನು,
ವ್ರಿದ್ಧಿ ಮಾಡಿದೇನೈಯ್ಯಾ ಉದ್ಧರಿಸೊ ಹರಿಯೇ.

ತಂದೆ-ತಾಯ್ಗಳ ಸೇವೆ ಒಂದು ದಿನ ಮಾಡಿಲ್ಲ,
ಮಂದ ಭಾಗ್ಯಗೆ ಭವಣೇ ಟಪ್ಪಲಿಲ್ಲಾ,
ಹಿಂದೆ ಮಾಡಿದ ದೋಶ ಒಂದುಣಿಯ ದರುಹಿದೆನೋ,
ತಂದೆ ಪುರಂದರವಿಠಲ ಬಂದೆನ್ನ ಸಲಹೋ.

# ಸುಮ್ಮನೆ ಬರುವುದೇ ಮುಕ್ತಿ

ಸುಮ್ಮನೆ ಬರುವುದೇ ಮುಕ್ತಿ?
ಗುರುಧರ್ಮ ಭಿಕ್ಷವ ಬೇಡಿದವಗೇ ಸುಕೀರ್ತಿ.

ಮನದಲ್ಲಿ ದೃಢವಿರ ಬೇಕು,
ದುಷ್ಟ ಜನ ಸಮ್ಸರ್ಗಗಳನು ಬಿಡಲಿ ಬೇಕು,
ಅನುಮಾನವನು ಸುಡ ಬೇಕು,
ತನ್ನ ತನು–ಮನ–ಧನವನು ಪಿಸಿಕೊಡ ಬೇಕು.

ಕಾಮ–ಕ್ರೋಧವ ಬಿಡ ಬೇಕು,
ಹರಿನಾಮ ಸಂಕೀರ್ತನೆಯನು ಮಾಡ ಬೇಕು,
ಹೇಮದಾಸೆಯ ಬಿಡ ಬೇಕು,
ಹರಿನಾಮವೇ ಗತಿ ಎಂದು ನೆರೆ ನಂಬ ಬೇಕು.

ವ್ಯಾಪಾರ ವರ್ಜಿಸ ಬೇಕು,
ಜ್ಞಾನ ದೀಪದ ಕಾಂತಿಯಲ್ ಲೋಲಾಡ ಬೇಕು,
ಪಾಪರಹಿತನಾಗ ಬೇಕು,
ನಮ್ಮ ಗೋಪಾಲ ವಿಠಲನ್ನ ನೆರೆ ನಂಬ ಬೇಕು.

# ಉದರ ವೈರಾಗ್ಯವಿದು

ಉದರ ವೈರಾಗ್ಯವಿದು,
ನಮ್ಮ ಪದುಮನಾಭನಲಿ ಲೇಶ ಭಕುತಿ ಇಲ್ಲ,
ಉದರ ವೈರಾಗ್ಯವಿದು.

ಉದಯ ಕಾಲದಲೆದ್ದು, ಗಡಗಡ ನಡುಗುತಾ,
ನದಿಯಲಿ ನಿಂದೆನೆಂದು ಇಗ್ಗುತಲಿ,
ಮದ ಮತ್ಸರ ಕ್ರೋಧ, ಒಳಗೆ ತುಂಬಿಟ್ಟುಕೊಂದು,
ಬದಿಯಲಿದ್ದವರಿಗೆ ಆಶ್ಚರ್ಯ ತೋರುವುದು.

ಕಂಚುಗಾರನ ಬಿದಾರರಂದಹಿ,
ಕಂಚು ಹಿತ್ತಾಳೆ ಪ್ರತಿಮೆಯನೆರಗಿ,
ಮಿಂಚ ಬೇಕೆನುತ ಜೋತಿಗಳನು ಹಚಿ,
ವಂಚನೆಯಿಂದಲಿ ಪೂಜೆಯ ಮಾಡುವುದು.

ಕರದಲಿ ಜಪಮಣಿ, ಬಾಯಲಿ ಮಂತ್ರವು,
ಅರಿವೆ ಮುಸುಕು ಮೋರೆಗೆ ಹಾಕಿ,
ಪರ ಸತಿಯರ ಗುಣ ಮನದಲಿ ಸ್ಮರಿಸುತ,
ಪರಮ ವೈರಾಗ್ಯಶಾಲಿಯೆಂದೆನಿಪುದು.

ಬೂಟಕತನದಲಿ ಬಹಳ ಭಕುತಿ ಮಾಡಿ,
ಜಿಟನೀತಸರಿ ಯಾರಿಲ್ಲೆನಿಸಿ,
ನಾಟಕಸ್ತ್ರಿ ಯಂತೆ ಬಯಲ ಡಂಭವ ತೋರಿ,
ಬೂಟದ ಮಾರ್ಗದ ಜ್ಞಾನವಿದಲ್ಲದೆ!

ನಾನುಯೆಮ್ಬುದ ಬಿಟ್ಟು ಜ್ಞಾನಿಗಲೊಡನಾಡಿ,
ಯೇನಾದರು ಹರಿಪ್ರೇರಣೆ ಯೆಂದು,
ಧ್ಯಾನಿಸಿ ಮೌನದಿ ಪುರಂಧರ ವಿಠ್ಠಲನ,
ಕಾಣದೆ ಮಾದಿದ ಕರ್ಯಗಳ್ಳೆಲವು.

ಉದರ ವೈರಾಗ್ಯವಿದು.